ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಅರ್ಪಿಸಿದ ನಿಬಂಧ

ಮೊಗಳ್ಳಿಗ... ...ಾಹಿತ್ಯ – ಒಂದು ಅಧ್ಯಯನ

ಪ್ರಮೀಳ
ಸಂಶೋಧನಾ ವಿದ್ಯಾರ್ಥಿ
ನೋಂ.ಸಂ: ಕೆವಿಎಮ್‌ಬಿಕೆಎಸ್–00612

ಮಾರ್ಗದರ್ಶಕರು
ಡಾ॥ ಬಿ.ಯು.ಸುಮಾ
ಸಹ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಕೇಂದ್ರ
ಸರ್ಕಾರಿ ಪ್ರಥಮದರ್ಜೆಕಾಲೇಜು
ವಿಜಯನಗರ, ಬೆಂಗಳೂರು

ಕಾವ್ಯಮಂಡಲ
ಬೆಂಗಳೂರು

2012 – 2013

ಶಂ.ಶಂ.ಶ. ಮಗ್ಗಿ.

1080

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಅರ್ಪಿಸಿದ ನಿಬಂಧ

[illegible] ಕಥಾ ಸಾಹಿತ್ಯ – ಒಂದು ಅಧ್ಯಯನ

ಪ್ರಿಯಾಂಕ

ಸಂಶೋಧನಾ ವಿದ್ಯಾರ್ಥಿ

[illegible]

ಮಾರ್ಗದರ್ಶಕರು

ಡಾ|| [illegible]

[illegible]

[illegible]

[illegible]

[illegible]

ಕನ್ನಡ ವಿಶ್ವವಿದ್ಯಾಲಯ

ವಿದ್ಯಾರಣ್ಯ

2012 - 2013

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಅರ್ಪಿಸಿದ ನಿಬಂಧ

ಮೊಗಳ್ಳಿಗಣೇಶರವರ ಕಥಾ ಸಾಹಿತ್ಯ – ಒಂದು ಅಧ್ಯಯನ

ಪ್ರಮೀಳ
ಸಂಶೋಧನಾ ವಿದ್ಯಾರ್ಥಿ
ನೋಂ.ಸಂ: ಕೆವಿಎಮ್‌ಬಿಕೆಎಸ್–00612

ಮಾರ್ಗದರ್ಶಕರು
ಡಾ॥ ಬಿ.ಯು.ಸುಮಾ
ಸಹ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಕೇಂದ್ರ
ಸರ್ಕಾರಿ ಪ್ರಥಮದರ್ಜೆಕಾಲೇಜು
ವಿಜಯನಗರ, ಬೆಂಗಳೂರು

ಕಾವ್ಯಮಂಡಲ
ಬೆಂಗಳೂರು

2012 – 2013

ದೃಢೀಕರಣ ಪತ್ರ

ಪ್ರಮೀಳ ಇವರು "ಮೊಗಳ್ಳಿಗಣೇಶರವರ ಕಥಾ ಸಾಹಿತ್ಯ : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಎಂ.ಫಿಲ್ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ವಿಶ್ವವಿದ್ಯಾಲಯದ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

27/7/13

ಡಾ. ಬಿ.ಯು.ಸುಮಾ ಎಂ.ಎ.,ಪಿಎಚ್.ಡಿ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ವಿಜಯನಗರ, ಬೆಂಗಳೂರು-104.

ಮಾರ್ಗದರ್ಶಕರು
ಡಾ॥ ಬಿ.ಯು.ಸುಮಾ
ಸಹ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಕೇಂದ್ರ
ಸರ್ಕಾರಿ ಪ್ರಥಮದರ್ಜೆ ಕಾಲೇಜು
ವಿಜಯನಗರ, ಬೆಂಗಳೂರು

ದಿನಾಂಕ : 27/7/13
ಸ್ಥಳ : ಬೆಂಗಳೂರು

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ **"ಮೊಗಳ್ಳಿಗಣೇಶರವರ ಕಥಾಸಾಹಿತ್ಯ : ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ಈ ಎಂ.ಫಿಲ್ ನಿಬಂಧವನ್ನು **ಡಾ|| ಬಿ.ಯು.ಸುಮಾ,** ಸಹಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಇತರೆ ಉದ್ದೇಶಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Pramila

ಪ್ರಮೀಳ

ಸಂಶೋಧನಾ ವಿದ್ಯಾರ್ಥಿ

ದಿನಾಂಕ : 26/7/13

ಸ್ಥಳ : ಬೆಂಗಳೂರು

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥಾ ಪ್ರಕಾರವೂ ಒಂದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆಗಳ ಪಾತ್ರ ದೊಡ್ಡದು. ಕಾದಂಬರಿ ಬಿಟ್ಟರೆ ಸಣ್ಣಕಥೆ ಪ್ರಕಾರ ಉತ್ಕೃಷ್ಟ ಮತ್ತು ಸಮೃದ್ಧ ಸಾಹಿತ್ಯ ಪ್ರಕಾರ.

ಆಧುನಿಕ ಕಾಲಘಟ್ಟದಲ್ಲಿ ಕೋಟ್ಯಾಂತರ ಸಣ್ಣಕಥೆಗಳು ಬಂದಿದೆ. ಅವುಗಳ ತಂತ್ರ ವಿನ್ಯಾಸವನ್ನು ಗಮನಿಸಿದರೆ ಮೊಗಳ್ಳಿ ಗಣೇಶರವರ ಕಥಾಸಾಹಿತ್ಯ ಭಿನ್ನಆಗಿದೆ. ಅಲ್ಲದೆ ಕನ್ನಡದ ಸಾಂಸ್ಕೃತಿಕ ಪರಿಸರಕ್ಕೆ ಒಂದು ಹೊಸ ಸಂವೇದನೆ ಮತ್ತು ಹೊಸವಸ್ತು ಇವುಗಳನ್ನು ಕೊಟ್ಟಖ್ಯಾತಿ ಇವರಿಗಿರುತ್ತದೆ. ಆದ್ದರಿಂದ 'ಮೊಗಳ್ಳಿ ಗಣೇಶ'ರವರ 'ಕಥಾಸಾಹಿತ್ಯ'ವನ್ನು ನನ್ನ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುತ್ತೇನೆ.

ದಲಿತ ಸಾಹಿತ್ಯ ಪ್ರಕಾರದ ವಿಶಿಷ್ಟತೆಯನ್ನು ಗಮನಿಸಿದರೆ, ಈ ಪ್ರಕಾರ ಮುಖ್ಯ ವಾಹಿನಿಯಲ್ಲಿ ಇಲ್ಲದ ನಿರ್ಲಕ್ಷಿತ ಸಾಮುದಾಯಿಕ ಚಿತ್ರಣವನ್ನು ದಾಖಲಿಸುತ್ತದೆ. ದಲಿತ ಸಾಹಿತ್ಯವು ತನಗಿಂತ ಹಿಂದೆ ಬಂದ ನವೋದಯ, ನವ್ಯಸಾಹಿತ್ಯದ ಮಿತಿಗಳನ್ನು ಪ್ರಶ್ನಿಸಿ, ವಿಮರ್ಶಿಸುವ ಕೆಲಸವನ್ನು ದಲಿತ ಸಾಹಿತ್ಯ ಪ್ರಕಾರ ಮಾಡಿತು. ಎಡಪಂಥೀಯ ಒಲವು, ಶೋಷಿತರ ಪರವಾದ ಹೋರಾಟ, ಅಸ್ಪೃಶ್ಯತೆ, ಜಾತಿಪದ್ದತಿ ಮತ್ತು ಲಿಂಗತಾರತಮ್ಯಗಳ ವಿರುದ್ಧ ಧ್ವನಿ ಎತ್ತುವ ಕೆಲಸವನ್ನು ದಲಿತ ಸಾಹಿತ್ಯ ಮಾಡಿತು. ಅಲ್ಲದೆ ಸಮಾನತೆಯ ಸಮಾಜವನ್ನು ಕಟ್ಟುವ ಕನಸನ್ನು ಕಾಣತೊಡಗಿತ್ತು. ಹೀಗೆ ತನ್ನದೆ ಆದ ತತ್ವ ಮತ್ತು ಮೌಲ್ಯಗಳನ್ನು ಮುಂದಿಡುವ ದಲಿತ ಕಥನಗಳು ಸಂಶೋಧನೆಗೆ ಆಹ್ವಾನವನ್ನು ನೀಡುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ೧೯೬೨ ರಲ್ಲಿ ಜನಿಸಿದ ಮೊಗಳ್ಳಿ ಗಣೇಶರವರು ಮೈಸೂರು ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರ ಹಾಗೂ ಜಾನಪದ ಎಂ.ಎಯನ್ನು ಅಧ್ಯಯನ ಮಾಡಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿ ಪಡೆದ ಇವರು ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯದಲ್ಲಿ ಜಾನಪದ ವಿಭಾಗದಲ್ಲಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಾರೆ.

೧೯೯೨ ರಲ್ಲಿ 'ಬುಗುರಿ' ಕಥಾಸಂಕಲನ ಮೂಲಕ ಸಾಹಿತ್ಯ ಲೋಕಕ್ಕೆ ಪಾದಾರ್ಪಣೆ ಮಾಡಿದ ಮೊಗಳ್ಳಿ ಗಣೇಶರವರು ೧೯೯೭ರಲ್ಲಿ ಅತ್ತೆ, ೨೦೦೧ ರಲ್ಲಿ ಭೂಮಿ, ೨೦೦೫ ರಲ್ಲಿ ಮಣ್ಣು ಮತ್ತು ೨೦೦೮ ರಲ್ಲಿ ಕನ್ನೆಮಳೆ ಸಂಕಲನಗಳು, ಅನಾದಿ (೨೦೦೮), ಕಿರೀಟ (೨೦೦೭), ತೊಟ್ಟಿಲು (೨೦೦೫) ಕಾದಂಬರಿಗಳು, ದೇವಸ್ಮಶಾನ(೨೦೦೮), ಸೂರ್ಯನ ಬಚ್ಚಿಡಬಹುದೆ (೨೦೦೧), ಕವನಸಂಕಲನಗಳು, ತಕರಾರು (೨೦೦೮), ನಡುಗಾಲದ ಕನ್ನಡನಾಡು (೨೦೦೮) ಮೌಖಿಕಕಥನ (೨೦೦೭), ದಲಿತ ಕಥನ (೨೦೦೬), ಆದಿಮ (೨೦೦೪), ಶತಮಾನ

(೨೦೦೦), ದಲಿತರು ಮತ್ತು ಜಾಗತೀಕರಣ (೧೯೯೯), ಸೊಲ್ಲು (೧೯೯೮), ದೇಶಿ (೧೯೯೭) ಇವು ವಿಚಾರ ವಿಮರ್ಶಾ ಬರಹಗಳನ್ನು ಬರೆದಿರುತ್ತಾರೆ.[೧]

ಅಧ್ಯಯನದ ಉದ್ದೇಶ:

- ದಲಿತರ ಬದುಕಿನ ಕ್ರಮಗಳು, ಅನುಭವಗಳು ಮುಖ್ಯವಾಹಿನಿಯ ಬದುಕಿನ ಕ್ರಮಕ್ಕಿಂತ ಅನುಭವಕ್ಕಿಂತ ಭಿನ್ನವಾಗಿರುವಂಥವು. ಮೊಗಳ್ಳಿಗಣೇಶರವರ ಕಥಾಸಾಹಿತ್ಯ ಈ ರೀತಿಯ ದಲಿತರ ಬದುಕಿನ ಸಾಮಾಜಿಕ ಸಾಂಸ್ಕೃತಿಕ ವಿವರಗಳ ಅನೇಕ ಆಯಾಮಗಳನ್ನು ಕಟ್ಟಿಕೊಡುತ್ತದೆ. ಇದು ಕನ್ನಡದ ಸಾಂಸ್ಕೃತಿಕ ವಲಯಕ್ಕೆ ಒಂದು ಹೊಸ ಅನುಭವವನ್ನು ಪರಿಚಯಿಸುತ್ತದೆ. ಈ ಅನುಭವದ ವಿಭಿನ್ನ ಆಯಾಮಗಳನ್ನು ಗುರುತಿಸುವುದು ಈ ಅಧ್ಯಯನದ ಮೊದಲನೇ ಮುಖ್ಯ ಉದ್ದೇಶವಾಗಿದೆ. ಈ ಮೂಲಕ ದಲಿತತ್ವಕ್ಕೆ ಮೊಗಳ್ಳಿ ಗಣೇಶರವರು ನೀಡುವ ವ್ಯಾಖ್ಯಾನದ ಸ್ವರೂಪವನ್ನು ವಿವರಿಸಿಕೊಳ್ಳುವುದು ಈ ಉದ್ದೇಶದ ಇನ್ನೊಂದು ಭಾಗವೂ ಆಗಿರುತ್ತದೆ.

- ಈ ಅಧ್ಯಯನದ ಎರಡನೇ ಮುಖ್ಯ ಉದ್ದೇಶ – ಈ ಕಥೆಗಳನ್ನು ಕೇವಲ ದಲಿತತ್ವದ ಚೌಕಟ್ಟಿಗೆ ಮಾತ್ರ ಅಳವಡಿಸದೆ ಬದಲಿಗೆ ಒಟ್ಟು ಭಾರತೀಯ ಸಮಾಜದ ಹಿನ್ನೆಲೆಯಲ್ಲಿ ಕಥನದ ದ್ರವ್ಯವನ್ನು ವಿಶ್ಲೇಷಿಸುವುದಾಗಿದೆ. ಹೀಗೆ ಮಾಡುವ ಪ್ರಕ್ರಿಯೆಯಲ್ಲಿ ಭಾರತೀಯ ಸಮಾಜದ "ಅಧಿಕಾರ ಮತ್ತು ಯಾಜಮಾನಿಕೆ"[೨]ಯ ವರ್ಗಗಳೊಂದಿಗೆ ಈ ಸಮುದಾಯದ ಸಂಬಂಧದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದು ಮತ್ತೊಂದು ಮುಖ್ಯ ಉದ್ದೇಶವಾಗುತ್ತದೆ. ಇಲ್ಲಿ "ಅಧಿಕಾರ ಮತ್ತು ಯಾಜಮಾನಿಕೆ ಎಂಬ ಪರಿಭಾಷೆಯನ್ನು ಮಿಷನ್ ಫ್ಯೂಕೋ ಮತ್ತು ಆಂಟೋನಿ ಗ್ರಾಂಷಿ"[೩] ಬಳಸಿದ ಅರ್ಥದಲ್ಲಿ ಬಳಸಲಾಗಿದೆ.

- ಅಧ್ಯಯನದ ಮೂರನೇ ಉದ್ದೇಶ– ಈ ಕಥನದಲ್ಲಿ ಚಿತ್ರಿತವಾಗುವ ಮಹಿಳೆಯರ ಚಿತ್ರಣಗಳನ್ನು ಪರಿಶೀಲಿಸುತ್ತಲೇ ಅದು ಮುಖ್ಯವಾಹಿನಿಯ ಕಥಾ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಮಹಿಳೆಯರ ಲೋಕ ಹೇಗೆ ಭಿನ್ನವಾಗಿದೆ ಎನ್ನುವುದನ್ನು ಪರಿಶೀಲಿಸಲಾಗುತ್ತದೆ.

- ನಾಲ್ಕನೇ ಉದ್ದೇಶ– ಮೊಗಳ್ಳಿ ಗಣೇಶರವರ ಸಣ್ಣಕಥೆಗಳು ಕಟ್ಟಿಕೊಡುವ ಜ್ಞಾನವಿಮಾಂಸೆಯ ಪರಿಕಲ್ಪನೆಗಳನ್ನು ಪರಿಶೀಲಿಸುವುದು ಮತ್ತೊಂದು ಉದ್ದೇಶವಾಗಿದೆ. ಈ

---

೧ ಮೊಗಳ್ಳಿ ಗಣೇಶ್ – ಅನಾದಿ – ಅಂಕಿತ ಪುಸ್ತಕ – ೨೦೦೮, ಪು.ಸ–೧

೨ ಡಾ॥ ಸಿ.ಎನ್.ರಾಮಚಂದ್ರನ್ – ವಸಾಹತೋತ್ತರ ಚಿಂತನೆ, ಅಂಕಿತ ಪ್ರಕಾಶನ, ಪು.ಸಂ

೩ ಕೆ.ಫಣಿರಾಜ್ – ಆಂಟೋನಿ ಗ್ರಾಂಷಿ – ಅಭಿನವ ಪ್ರಕಾಶನ, ೨೦೦೩

ಮೂಲಕ ಇದು ಸ್ಥಾಪಿತವಾದ 'ಸಾಹಿತ್ಯ' ಮತ್ತು 'ಸಂಸ್ಕೃತಿ'ಯ ನೆಲೆಗಳನ್ನು ಹೇಗೆ ಗ್ರಹಿಸುತ್ತದೆ ಎನ್ನುವುದನ್ನು ಪರಿಶೀಲಿಸಲಾಗುತ್ತದೆ.

ಅಧ್ಯಯನದ ವಿಧಾನ:

- ಅಂತರ್‌ಶಿಸ್ತೀಯ ವಿಮರ್ಶಾ ವಿಧಾನ ಆಧುನಿಕ ಕಾಲಘಟ್ಟದ ಒಂದು ಮುಖ್ಯ ವಿಮರ್ಶಾ ವಿಧಾನವಾಗಿದೆ. ೧೯೨೦ರ ಕಾಲಘಟ್ಟದಿಂದಲೂ ಈ ವಿಧಾನ ಬಳಕೆಯಲ್ಲಿದೆ. ಅಂತರ್‌ಶಿಸ್ತೀಯ ಅಧ್ಯಯನ ಮತ್ತು ವಿಮರ್ಶೆಯು ಚರಿತ್ರೆ, ತತ್ವಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ ಮತ್ತು ಭಾಷಾಶಾಸ್ತ್ರಗಳನ್ನು ಇವುಗಳೆಲ್ಲವನ್ನು ಒಳಗೊಂಡಿದ್ದರಿಂದ ಇದನ್ನು ಅಂತರ್‌ಶಿಸ್ತೀಯ ವಿಮರ್ಶೆ ಎನ್ನುವರು. ಇದು ಮೂಲ ಪಠ್ಯದ ಅಂತಸತ್ವನ್ನು ನಿರಾಕರಿಸಿ ಇತರ ಎಲ್ಲ ವಿವರಗಳನ್ನು ಪ್ರಮುಖ ಎಂಬಂತೆ ಚಿತ್ರಿಸುತ್ತದೆ.

- ನವ್ಯ ವಿಮರ್ಶಾ ವಿಧಾನ "ಅಮೆರಿಕೆಯಲ್ಲಿ ೧೯೪೦ರ ದಶಕದಿಂದ ೬೦ರ ದಶಕದವರೆಗೆ ಪ್ರಧಾನವಾಗಿದ್ದ ವಿಮರ್ಶಾ ಪಂಥ"[೪] "ಇಂಗ್ಲೆಂಡ್‌ನ ಚಿಂತಕರ ಪ್ರತಿಪಾದನೆಗಳ ತಳಹದಿ ಇದ್ದರೂ ನವ್ಯ ವಿಮರ್ಶೆ ಬೆಳೆದದ್ದು ಮಾತ್ರ ಅಮೇರಿಕೆಯಲ್ಲಿ."[೫] ಕನ್ನಡದಲ್ಲಿ ೧೯೬೦ರ ದಶಕದ ಮಧ್ಯಭಾಗದಿಂದ ಆರಂಭವಾಯಿತು. ಸಾಹಿತ್ಯ ಕೃತಿಯ ಸ್ವಾಯತ್ತತೆ, ಕೃತಿ, ನಿಷ್ಠ ವಿಮರ್ಶೆ, ಕೃತಿಯ ಭಾಷಿಕ ಸ್ವರೂಪಕ್ಕೆ ಆದ್ಯತೆ, ಕೃತಿ ಬಾಹ್ಯ ವಿಮರ್ಶಾ ಪರಿಕರಗಳ ನಿರಾಕರಣೆ, ಕೃತಿ ಪ್ರಭಾವ ಮತ್ತು ಚಾರಿತ್ರಿಕ, ಸಾಮಾಜಿಕ ಹಿನ್ನೆಲೆಗಳ ತಿಳಿವು ಕೃತಿ ವಿಶ್ಲೇಷಣೆ ಅನಗತ್ಯ ಎಂಬ ನಂಬಿಕೆ ಇವು ನ್ಯೂಕ್ರಿಟಿಸಿಸಂನ ಕೆಲವು ಮುಖ್ಯ ಧೋರಣೆಗಳಾಗಿದ್ದವು. ನವ್ಯ ವಿಮರ್ಶೆಯ ಕೃತಿಯ ವಿವರಣೆ ಅಥವಾ ನಿಕಟ ಓದುವಿಕೆಯ ಮುಖಾಂತರ ಕೃತಿಯೊಂದರ ವಿವಿಧ ಘಟಕಗಳ ನಡುವೆ ಇರುವ ಸಂಕೀರ್ಣ ಸಂಬಂಧ ಮತ್ತು ಅರ್ಥ ಸಂದಿಗ್ದತೆಯನ್ನು ಗುರುತಿಸಲು ಪ್ರಯತ್ನಿಸುತ್ತದೆ. ಅಲ್ಲದೆ ಕೃತಿಯ ಶಾಬ್ದಿಕ ಸ್ವರೂಪಕ್ಕೆ ಅತಿ ಹೆಚ್ಚಿನ ಮನ್ನಣೆ ನೀಡುತ್ತದೆ.

- ನವ್ಯದ ವಿಮರ್ಶಾ ವಿಧಾನವು ಪಠ್ಯದ ಸೌಂದರ್ಯಾತ್ಮಕ ಅಂಶಗಳಿಗೆ ಮಾತ್ರ ಪ್ರಾಮುಖ್ಯತೆ ಕೊಡುತ್ತದೆ ಮತ್ತು ಈ ಲಕ್ಷಣಗಳಿಲ್ಲದ ಕಥನಗಳನ್ನು ನಿರಾಕರಿಸುತ್ತದೆ. ಒಂದು ನಿರ್ದಿಷ್ಟ ಚಾರಿತ್ರಿಕ ಕಾಲಘಟ್ಟದಲ್ಲಿ ಸೃಷ್ಟಿಯಾದ ಅನೇಕ ಸಾಂಸ್ಕೃತಿಕ ಕಥನಗಳು ಈ ಚೌಕಟ್ಟಿಗೆ ಅಳವಡಿಸದೆ ಹೋದಾಗ ಅದರೊಳಗೆ ದಾಖಲಾಗಿರುವ ಸಾಂಸ್ಕೃತಿಕ ವಿವರಗಳನ್ನು ಹೇಗೆ ವಿವರಿಸುವುದು ಎಂಬ ಸಮಸ್ಯೆಯನ್ನು ಈ ವಿಧಾನ ಉಳಿಸಿಬಿಡುತ್ತದೆ.

---

೪ ಓ.ಎಲ್.ನಾಗಭೂಷಣ ಸ್ವಾಮಿ – ವಿಮರ್ಶೆಯ ಪರಿಭಾಷೆ, ಅಂಕಿತ ಪ್ರಕಾಶನ, ೧೯೯೮ – ಪು.ಸಂ ೬೨೫

೫ ಅದೇ ಪು.ಸಂ ೬೨೫

- ಮಾರ್ಕ್ಸ್‌ವಾದ ವಿಮರ್ಶಾ ವಿಧಾನವು "ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಫ್ರೆಂಚ್ ತತ್ವಶಾಸ್ತ್ರಜ್ಞರ ಬರಹಗಳಿಂದ ಮಾರ್ಕ್ಸ್ ಈ ಪರಿಕಲ್ಪನೆಯನ್ನು ರೂಢಿಸಿದ".[೬] ಮಾರ್ಕ್ಸ್‌ವಾದೀ ವಿಮರ್ಶೆಯು, ಸಾಮಾನ್ಯವಾಗಿ ಸಾಹಿತ್ಯ ಕೃತಿಗಳು ಹೇಗೆ ಚಾರಿತ್ರಿಕ ಘಟ್ಟವೊಂದರ ಆರ್ಥಿಕತೆಯ ಸ್ವರೂಪ ಮತ್ತು ಐಡಿಯಾಲಜಿಗಳಿಂದ ರೂಪು ಪಡೆದಿದೆ ಎಂದು ವಿವರಿಸಲು ಬಯಸುತ್ತದೆ. ಸಾಹಿತ್ಯವು ಕಾಲಾತೀತವಾದ ಕಲಾತ್ಮಕ ತತ್ವಗಳನ್ನು ಆಧರಿಸಿ ಸೃಷ್ಟಿಯಾಗುತ್ತವೆಂಬುದನ್ನು ಒಪ್ಪುವುದಿಲ್ಲ. ಕೃತಿಯು ರಚನೆಗೊಂಡ ಕಾಲ ಸ್ಥಳದ 'ವಾಸ್ತವಿಕ' ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗೂ ಕೃತಿಗೂ ಇರುವ ಸಂಬಂಧವನ್ನು ಅನುಸರಿಸಿ ಎಲ್ಲಾ ಪಠ್ಯಗಳನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾರ್ಕ್ಸ್‌ವಾದಿ ವಿಮರ್ಶೆಯು ಒಂದು ಮಿತಿ ಪ್ರಾಪ್ತವಾಗಿಬಿಡುತ್ತದೆ.

- ನಿರಚನವಾದ ವಿಮರ್ಶಾ ವಿಧಾನವು ಪಠ್ಯವೊಂದನ್ನು ಅತಿ ನಿಕಟ ಓದುವಿಕೆಗೆ ಒಳಪಡಿಸಿ, ಅದರ ಒಂದೊಂದು ಅಂಗಗಳ ಸಂಬಂಧವನ್ನು ಬಿಡಿಸಿ ನೋಡಿ, ಪಠ್ಯವು ಖಚಿತ ಅರ್ಥದ ಭ್ರಮೆಯನ್ನು ಮೂಡಿಸುವ ಸಂಯೋಜನೆ ಮಾತ್ರವಲ್ಲದೆ, ಆ ಸಂಯೋಜನೆಯನ್ನು ಮೀರುವ, ವಿರೋಧಿಸುವ ಅಂಶಗಳು ಪಠ್ಯದೊಳಗೆ ಅಡಗಿರುತ್ತದೆ ಎಂಬುದನ್ನು ಅರಿಯುವ ಮತ್ತು ಮಂಡಿಸುವ ಕ್ರಮ ಎಂದು ನಿರಚನಾವಾದವನ್ನು ಸರಳಗೊಳಿಸಿ ವಿವರಿಸಬಹುದು. "ಡಿಕನ್‌ಸ್ಟ್ರಕ್ಷನ್ ಎಂಬ ಈ ಪರಿಕಲ್ಪನೆಯನ್ನು ಹೆಸರಿಸಿ, ಅದರ ತತ್ವವನ್ನು ವಿವರಿಸಿದವನು ಫ್ರಾನ್ಸ್‌ನ ಚಿಂತಕ ಜಾಕ್ವೆಸ್ ಡೆರೀಡಾ".[೭]

ನಿರಚನೆ ಬೇಕಾಬಿಟ್ಟಿಯಾಗಿ ನಡೆಯುವ ಕ್ರಿಯೆಯಲ್ಲ. ಅದು ಪಠ್ಯದೊಳಗಿದ್ದು, ಪರಸ್ಪರ ಕಾದಾಡುತ್ತಿರುವ ಅರ್ಥ ಸೂಚನೆಯ ಶಕ್ತಿಗಳನ್ನು ಎಚ್ಚರದಿಂದ ಗಮನಿಸಿ ಪ್ರತ್ಯೇಕಿಸುವ ಕೆಲಸ ಮಾಡುತ್ತದೆ. ನಿರಚನವಾದವು ಪಠ್ಯದ ಒಳಗಡೆ ಇದ್ದು ಅಲ್ಲಿರುವ ವಿಭಿನ್ನತೆಯನ್ನು ಪ್ರತಿಪಾದಿಸುತ್ತದೆ.

ಈ ಮೇಲಿನ ವಿಮರ್ಶಾ ವಿಧಾನದಿಂದ ಭಿನ್ನವಾದ ಮತ್ತು ನವೋದಯ, ನವ್ಯ, ಬಂಡಾಯದ ವಿಧಾನದ ಮಿತಿಗಳನ್ನು ಮೀರಲು ನೆರವಾಗಲು ನಿರಚನವಾದ ವಿಮರ್ಶಾ ವಿಧಾನವನ್ನು ನನ್ನ ಅಧ್ಯಯನದಲ್ಲಿ ತೊಡಗಿಸಿಕೊಳ್ಳುತ್ತಿದ್ದೇನೆ. ಇದನ್ನು "ಡಿಕನ್‌ಸ್ಟ್ರಕ್ಷನ್ ಎಂದು ಕರೆಯುವರು"[೮].

---

೬ ಓ.ಎಲ್.ನಾಗಭೂಷಣ ಸ್ವಾಮಿ – ವಿಮರ್ಶೆಯ ಪರಿಭಾಷೆ, ಅಂಕಿತ ಪ್ರಕಾಶನ, ೧೯೯೮ – ಪು.ಸಂ ೩೪೫

೭ ಓ.ಎಲ್.ನಾಗಭೂಷಣ ಸ್ವಾಮಿ – ವಿಮರ್ಶೆಯ ಪರಿಭಾಷೆ, ಅಂಕಿತ ಪ್ರಕಾಶನ, ೧೯೯೮ – ಪು.ಸಂ ೩೬೯

೮ ಅದೇ ಪು.ಸಂ ೩೬೯

ಈಗಾಗಲೇ ಕನ್ನಡ ಸಾಹಿತ್ಯದಲ್ಲಿ ಹಲವಾರು ವಿಮರ್ಶೆಗಳ ಮೂಲಕ ಅಧ್ಯಯನ ನಡೆದಿದೆ. ನಾನು ಮೇಲೆ ತಿಳಿಸಿದ ನಿರಚನವಾದ ವಿಮರ್ಶಾ ವಿಧಾನದ ಹಿನ್ನಲೆಯಲ್ಲಿ ನನ್ನ ಅಧ್ಯಯನವನ್ನು ಕೈಗೊಳ್ಳುತ್ತಿದ್ದೇನೆ.

ಕನ್ನಡ ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ ೭೦ರ ದಶಕದ ಕಾಲ ಅದೊಂದು ಪರ್ವಕಾಲ. ಇಲ್ಲಿಯವರೆಗೆ ಬಾಗಿಲಿಗೆ ಎಡತಾಕದ ದಲಿತರು ಎಡತಾಕುವಂತಾಯಿತು. ಈ ಅವಧಿಯಲ್ಲಿ ಬಸಲಿಂಗಪ್ಪನವರ ಭೂಸಾ ಪ್ರಕರಣ ಇಡೀ ಬೌದ್ಧಿಕ ವಲಯದಲ್ಲೇ ಬಿರುಗಾಳಿಯನ್ನು ಉಂಟುಮಾಡಿದ ಪ್ರಕರಣವಾಗಿತ್ತು. ಇದು ಹಲವು ರೀತಿಗಳಲ್ಲಿ ದಲಿತ ಚಳುವಳಿ ಬಂದು ಮೌಲ್ಯಾಧಾರಿತ ಚಳುವಳಿಯಾಗಿ ರೂಪತಳೆಯಲು ಸಹಕಾರಿಯಾಯಿತು. ಇದಲ್ಲದೇ ಇದೇ ಅವಧಿಯಲ್ಲಿ ಭಾರತದಾದ್ಯಂತ ದಲಿತ ಚಳುವಳಿಯ ಕಾವು ಮುಗಿಲು ಮುಟ್ಟಿತು. ಮಹಾರಾಷ್ಟ್ರದಲ್ಲಿ ದಲಿತ ಪ್ಯಾಂಥರ್ಸ್, ಆಂಧ್ರದಲ್ಲಿ ನಗ್ನ ಚಳುವಳಿ (ಸಾಹಿತ್ಯ), ತಮಿಳುನಾಡಿನಲ್ಲಿ ವಿಗ್ರಹ ಭಂಜನೆ ಚಳುವಳಿಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕರ್ನಾಟಕದ ಚಳುವಳಿಯ ಮೇಲೆ ಪ್ರಭಾವ ಮತ್ತು ಪ್ರೇರಣೆ ಉಂಟುಮಾಡಿದವು. ಅಲ್ಲದೆ ಇವೆಲ್ಲವುದರ ಹಿಂದೆ ಅಂಬೇಡ್ಕರ್, ಪೆರಿಯಾರ್, ಲೋಹಿಯಾಗಾಂಧಿ, ಕಾರ್ಲ್‌ಮಾರ್ಕ್ಸ್ ಇವರುಗಳ ಪ್ರಭಾವವು ಬೀರಿದ ಪರಿಣಾಮವಾಗಿ ಕರ್ನಾಟಕದಲ್ಲಿ ದಲಿತ ಚಳುವಳಿ ೧೯೭೬ರ ಹೊತ್ತಿಗೆ ದಟ್ಟವಾಗಿ ಕಾಣಿಸಿಕೊಂಡಿತು.

ಇಂತಹ ಚಳುವಳಿಯ ಭಾಗವಾಗಿಯೇ ದಲಿತ ಸಾಹಿತ್ಯ ಸೃಷ್ಟಿಯಾಯಿತು ಎಂದರೆ ತಪ್ಪಾಗಲಾರದು. ಆದ್ದರಿಂದ ದಲಿತ ಪ್ರಜ್ಞೆ, ದಲಿತ ಸಂವೇದನೆ, ದಲಿತ ಸಾಹಿತ್ಯ ಎನ್ನುವುದು ಇತರ ನವೋದಯ ನವ್ಯದಂತೆ ನೇರವಾಗಿ ಸಾಹಿತ್ಯಕ ರೂಪದಲ್ಲಿ ಕಾಣಿಸಿಕೊಂಡದಲ್ಲ. ಬದಲಿಗೆ ಚಳುವಳಿಯ ಬೆನ್ನೆಲುಬಾಗಿ ಸೃಷ್ಟಿಯಾದ ಸಾಹಿತ್ಯ ಪ್ರಕಾರವಾಗಿದೆ. ದಲಿತ ಸಾಹಿತ್ಯ ಕಳೆದ ಮೂರ್ನಾಲ್ಕು ದಶಕಗಳ ಅವಧಿಯಲ್ಲಿ ವಿಪುಲವಾದ ಸಾಹಿತ್ಯ ರಾಶಿಯನ್ನು ಕನ್ನಡ ಸಾಹಿತ್ಯಕ್ಕೆ ನೀಡಿದೆ. ಈ ಸಾಹಿತ್ಯ ಬೆಳಕಿಗೆ ಬಂದ ಆರಂಭದಲ್ಲಿ ಇದಕ್ಕೊಂದು ಸಾಹಿತ್ಯದ ರೂಪವೇ ಇಲ್ಲ. ಇದು ಕೇವಲ ಭಾಷಾವೇಷದ ಮತ್ತು ಘೋಷಣೆಯ ಸ್ವರೂಪದ್ದಾಗಿದೆ ಎಂದು ಮೂಗು ಮುರಿಯುತ್ತಿದ್ದ ಬೌದ್ಧಿಕ ವಲಯ ಕಾಲಾನಂತರದಲ್ಲಿ ಈ ಸಾಹಿತ್ಯದ ವಿಶಿಷ್ಟ ಸಂವೇದನೆಗಳಿಗೆ ಮಾರುಹೋಗಿ ಇದೊಂದು ಅಧ್ಯಯನ ಯೋಗ್ಯ ವಿಷಯವೆಂದು ಮಾನ್ಯ ಮಾಡಿದ ದಲಿತ ಸಾಹಿತ್ಯದ ಬಗ್ಗೆ ಹೆಚ್ಚು ಒಲವು ಸಾಹಿತ್ಯವಲಯದಲ್ಲಿ ಬೆಳೆಯಿತು. ಹೀಗೆ ಕಾವ್ಯ, ನಾಟಕ, ಕಥೆ, ಸಣ್ಣಕಥೆ, ಕಾದಂಬರಿ, ಆತ್ಮಕತೆ, ವಿಮರ್ಶೆ ಮೊದಲಾದ ಪ್ರಕಾರಗಳಲ್ಲಿ ತನ್ನನ್ನು ತಾನು ಅಭಿವ್ಯಕ್ತ ಪಡಿಸಿಕೊಂಡಿರುವುದನ್ನು ಗಮನಿಸಿದಾಗ ಎಂತಹವರಿಗೂ ಆಶ್ಚರ್ಯವಾಗದಿರದು ಮತ್ತು ಇಂತಹ ಸಾಹಿತ್ಯದ ಬಗ್ಗೆ ಸಂಶೋಧನೆ ಮಾಡಲು ಹೆಚ್ಚು ಆಸಕ್ತಿ ಇದ್ದುದರಿಂದ ನಾನು 'ಮೊಗಳ್ಳಿಗಣೇಶ'ರವರ 'ಕಥಾಸಾಹಿತ್ಯ'ದ ಕುರಿತು ಅಧ್ಯಯನ ಮಾಡಲು ಪ್ರಯತ್ನಿಸಿದ್ದೇನೆ.

ದಲಿತ ಸಾಹಿತ್ಯ ಎನ್ನುವ ಪ್ರಯೋಗವನ್ನು ಕನ್ನಡ ಸಾಹಿತ್ಯದಲ್ಲಿ ವಿಮರ್ಶಕರು ಈಗಾಗಲೇ ಸಾಕಷ್ಟು ಚರ್ಚಿಸಿದ್ದಾರೆ. ಅವುಗಳನ್ನು ಇಲ್ಲಿ ಪುನರಾವರ್ತನೆ ಮಾಡುವ ಅವಶ್ಯಕತೆ ಇಲ್ಲ. ಆದರೆ ಇಂತಹ ಚರ್ಚೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಮುಖ್ಯ ಪ್ರಶ್ನೆ ಎಂದರೆ ದಲಿತ ಸಾಹಿತ್ಯದಲ್ಲಿನ ದಲಿತ ಗುಣದ ಸ್ವರೂಪ ಏನು ಎನ್ನುವುದು ಒಂದು ಸಾಹಿತ್ಯ ರಚನೆಯನ್ನು ಈ ರೀತಿ ಪ್ರತ್ಯೇಕಿಸಿ ನೋಡುವುದನ್ನು ಆಕ್ಷೇಪಿಸುವವರೂ ಇದ್ದಾರೆ. ಸಾಹಿತ್ಯ ನಿರ್ಮಾಣವೊಂದಕ್ಕೆ ಜನಾಂಗವೊಂದರ ಸಂಬಂಧವನ್ನು ಆರೋಪಿಸುವುದರ ಕುರಿತು ಇವರು ಅಸಮ್ಮತಿಯನ್ನು ಪ್ರಕಟಿಸುತ್ತಾರೆ. ಆದರೆ ಸಾಹಿತ್ಯ ನಿರ್ಮಾಣವೊಂದು ನಿರ್ದಿಷ್ಟ ಸಾಂಸ್ಕೃತಿಕ ಆವರಣದಲ್ಲಿನ ವ್ಯಕ್ತಿಯೊಬ್ಬನ ರಚನೆಯಾಗಿರುವುದರಿಂದ ಮತ್ತು ಇಂತಹ ಸಾಂಸ್ಕೃತಿಕ ಆವರಣವನ್ನು ರೂಪಿಸುವಲ್ಲಿ ಜನಾಂಗವು ಪ್ರಮುಖ ಪಾತ್ರವನ್ನು ವಹಿಸುವುದರಿಂದ ಜನಾಂಗವೊಂದರ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ವಿವರಿಸುವುದು ಸಮಾಜಶಾಸ್ತ್ರೀಯ ದೃಷ್ಟಿಯಲ್ಲಿ ತೀರಾ ಅನಿವಾರ್ಯವಾದುದು. ಆದರೆ ಎಲ್ಲಾ ಜನಾಂಗಗಳು ಒಂದು ಸಾಹಿತ್ಯ ಪರಂಪರೆಯಲ್ಲಿ ಒಂದೇ ರೀತಿಯಲ್ಲಿ ಮತ್ತು ಒಂದೇ ಪ್ರಮಾಣದಲ್ಲಿ ಪಾಲ್ಗೊಳ್ಳುತ್ತಿಲ್ಲ. ಅನೇಕ ಜನಾಂಗಗಳಿಗೆ ಒಂದು ಸಾಹಿತ್ಯ ಪರಂಪರೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿತ್ತು. ಕನ್ನಡ ಸಾಹಿತ್ಯ ಪರಂಪರೆಯೂ ಇದಕ್ಕೆ ಹೊರತಾಗಿಲ್ಲ. ಈ ಅರ್ಥದಲ್ಲಿ ಸಾಹಿತ್ಯ ಪರಂಪರೆಯಲ್ಲಿ ಪಾಲ್ಗೊಳ್ಳಲು ಅವಕಾಶವಿರುವುದು. ಮತ್ತು ಇಲ್ಲದಿರುವುದು ಒಂದು ರಾಜಕೀಯ ಪ್ರಕ್ರಿಯೆ. ಅಕ್ಷರ ಜ್ಞಾನ ಇಲ್ಲದಿರುವಿಕೆ, ಶಿಕ್ಷಣ ಸೌಲಭ್ಯಗಳ ಕೊರತೆ ಇವುಗಳನ್ನು ಇಂತಹ ಜನಾಂಗಗಳ ಸಾಹಿತ್ಯಿಕ ಪಾಲ್ಗೊಳ್ಳದಿರುವಿಕೆಗೆ ಕಾರಣಗಳೆಂದು ಮೇಲ್ನೋಟಕ್ಕೆ ಹೇಳಬಹುದಾದರೂ ನಿಜವಾದ ಅರ್ಥದಲ್ಲಿ ಈ ಎಲ್ಲ ಕಾರಣಗಳು ರಾಜಕೀಯವಾಗಿ ಉತ್ಪನ್ನವಾದವುಗಳು.

ಕರ್ನಾಟಕದ ದಲಿತರು ಕನ್ನಡ ಸಾಹಿತ್ಯದ ಪರಂಪರೆಯಲ್ಲಿ ಕಾಣಿಸಿಕೊಳ್ಳದೆ ಇರುವುದಕ್ಕೆ ಮೇಲೆ ಪ್ರಕಟಿಸಿದ ರಾಜಕೀಯ ಕಾರಣಗಳೇ ಮುಖ್ಯವಾದವು. ವಚನ ಸಾಹಿತ್ಯದಂತಹ ಕೆಲವು ಸಂದರ್ಭಗಳನ್ನು ಹೊರತು ಪಡಿಸಿದರೆ ಕನ್ನಡ ಸಾಹಿತ್ಯದ ಸಂದರ್ಭವು ಎಂದೂ ಒಟ್ಟು ಕರ್ನಾಟಕ ಸಂಸ್ಕೃತಿಯನ್ನು ಒಳಗೊಳ್ಳುವಂತಹುದು ಆಗಿರಲಿಲ್ಲ. ಸ್ವಾತಂತ್ರ್ಯೋತ್ತರ ಕರ್ನಾಟಕವೂ ಇದಕ್ಕೆ ಅಪವಾದವಲ್ಲ. ಈ ದೃಷ್ಟಿಯಲ್ಲಿ ಈ ಶತಮಾನದ ೭೦ರ ದಶಕದಲ್ಲಿನ ಲೇಖಕರ ಸಾಹಿತ್ಯದ ನಿರ್ಮಾಣಗಳನ್ನು ಪರಿಭಾವಿಸಬೇಕು. ಈ ಮೂಲಕ ದಲಿತ ಸಾಹಿತ್ಯದ 'ಮೊಗಳ್ಳಿ ಗಣೇಶ'ರವರ ಕಥಾಸಾಹಿತ್ಯದ ಸ್ವರೂಪವನ್ನು ತಿಳಿಯಲು ಪ್ರಯತ್ನಿಸಲಾಗಿದೆ.

ದಲಿತ ಸಂಸ್ಕೃತಿ, ದಲಿತ ಲೇಖಕರು ಮತ್ತು ಕನ್ನಡ ದಲಿತ ಸಾಹಿತ್ಯ ಈ ಸಂಬಂಧವನ್ನು ವಿವರಿಸುವಾಗ, ಸಾಹಿತ್ಯ ಕೃತಿಗಳ ಬಗೆಗಿನ ನಮ್ಮ ಅನೇಕ ಸಿದ್ಧ ಅಭಿಪ್ರಾಯಗಳನ್ನು ಅಥವಾ ಪೂರ್ವಾಗ್ರಹಗಳನ್ನು ಬಿಟ್ಟು ನಾವು ಮಾತನಾಡಬೇಕಾಗಿದೆ. ಕರ್ನಾಟಕ ಸಂದರ್ಭದಲ್ಲಿ ದಲಿತರು ಮೌಖಿಕ ಪರಂಪರೆಯಲ್ಲಿ ಶತಮಾನಗಳ ಉದ್ದಕ್ಕೂ ಕ್ರಿಯಾತ್ಮಕವಾಗಿ ತಮ್ಮನ್ನು

ತೊಡಗಿಸಿಕೊಂಡರು. ಕನ್ನಡ ಜನಪದ ಸಾಹಿತ್ಯವನ್ನು ದಲಿತರ ಅಭಿವ್ಯಕ್ತಿಗಳಲ್ಲಿ ಸಮರ್ಪಕವಾಗಿ ಅಧ್ಯಯನ ಮಾಡುವ ಕೆಲಸ ಈವರೆಗೆ ನಡೆದಿಲ್ಲವೆಂದು ಹೇಳಬಹುದು. ಆದರೆ ಮುಕ್ತವಾಗಿ ಮತ್ತು ಗಟ್ಟಿಯಾಗಿ ತಮ್ಮ ಅಭೀಪ್ಸೆಗಳನ್ನು ದಲಿತರು ಮೌಖಿಕ ಪರಂಪರೆಯನ್ನು ಕನ್ನಡದಲ್ಲಿ ಪ್ರಕಟಿಸಿದ್ದಾರೆ. ಆದರೆ ಲಿಖಿತ ಪರಂಪರೆಯ ಸಾಹಿತ್ಯಕ್ಕೆ ಬಂದಾಗ ಅವರ ರಚನೆಗಳು ಒಂದು ರೀತಿಯ ಹೋರಾಟದ, ತೊಳಲಾಟದ ಕೆಲಕ್ಕೊಮ್ಮೆ ದ್ವಂದ್ವಗಳ ಅಭಿವ್ಯಕ್ತಿಗಳೂ ಆಗುವ ಅನಿವಾರ್ಯತೆ ಇದೆ. ಇದಕ್ಕೆ ಕಾರಣ ಅಂದಿನ ಸಂದರ್ಭದ ಚಾರಿತ್ರಿಕ ಅನಿವಾರ್ಯ ಮತ್ತು ಅಗತ್ಯವೂ ಕೂಡ ಆಗಿತ್ತು.

ಕನ್ನಡ ದಲಿತ ಮೌಖಿಕ ಪರಂಪರೆ ಮತ್ತು ದಲಿತ ಶಿಷ್ಟ ಪರಂಪರೆಗಳ ಸಂಬಂಧವನ್ನು ಅರ್ಥಮಾಡಿಕೊಳ್ಳದೇ ದಲಿತ ಸಾಹಿತ್ಯ ಕೃತಿಯೊಂದನ್ನು ವಿಮರ್ಶೆ ಮಾಡುವುದು ತಪ್ಪಾಗುತ್ತದೆ. ಪ್ರಾತಿನಿಧಿಕವಾದ ದಲಿತಸಾಹಿತ್ಯ ಕೃತಿ, ಮೌಖಿಕ ಪರಂಪರೆಯಿಂದ ಲಿಖಿತ ಪರಂಪರೆಗೆ ವರ್ಗಾವಣೆಗೊಳ್ಳುವ ದಲಿತ ಲೇಖಕನೊಬ್ಬನ ಸಂಕೀರ್ಣ ಮನಸ್ಥಿತಿಯ ಅಭಿವ್ಯಕ್ತಿಯಾಗಿರುತ್ತದೆ. ಈ ಅರ್ಥದಲ್ಲಿ ಜಾನಪದ ಅಧ್ಯಯನದ ತಿಳುವಳಿಕೆಯೂ, ಕನ್ನಡ ದಲಿತ ಸಾಹಿತ್ಯ ವಿಮರ್ಶೆಯಲ್ಲಿ ಹೆಚ್ಚು ನೆರವಾಗಬಲ್ಲದು.

ದಲಿತ ಬದುಕಿನ ಪ್ರಾತಿನಿಧಿಕ ಎಂದು ಕರೆಯಲಾಗುವ ಸಾಹಿತ್ಯ ಕೃತಿಯೊಂದು ರೂಪುಗೊಳ್ಳುವ ವಿಧಾನಕ್ಕೂ ಅದರ ವಸ್ತುವಿಗೂ ಇರುವ ಸಂಕೀರ್ಣ ಸಂಬಂಧವನ್ನು ಅರ್ಥ ಮಾಡಿಕೊಳ್ಳುವ ಅವಶ್ಯಕತೆ ಇದೆ. ಅಕ್ಷರ ಸಂಸ್ಕೃತಿಯಲ್ಲಿ ಸಾಹಿತ್ಯಿಕ ರಚನೆ ಮಾಡುವ ದಲಿತನೊಬ್ಬನ ಸಾಹಿತ್ಯ ಕೃತಿಯೊಂದು ಕನಿಷ್ಟ ಪಕ್ಷ ಎರಡು ಪರಂಪರೆಗಳನ್ನು ಆವರಿಸಿಕೊಳ್ಳಬೇಕಾಗುತ್ತದೆ. ನಿದರ್ಶನಕ್ಕೆ ಕನ್ನಡ ಸಂದರ್ಭವನ್ನೇ ಹೇಳುವುದಾದರೆ ಅದರಲ್ಲಿ ಒಂದು ಕನ್ನಡ ಸಾಹಿತ್ಯ ಪರಂಪರೆ, ಇನ್ನೊಂದು ವಿಶಿಷ್ಟವಾದ ದಲಿತ ಪರಂಪರೆ ಈ ರೀತಿ ಎರಡೂ ಪರಂಪರೆಯ ಧಾಟಿಗಳನ್ನುಳ್ಳ ಸಾಹಿತ್ಯ ಕೃತಿಯೊಂದನ್ನು ಅಧ್ಯಯನ ಮಾಡುವ ಬಗೆ ಹೇಗೆ ? ವಸ್ತು ಮತ್ತು ಶೈಲಿಗಳಲ್ಲಿ ದಲಿತ ಸಾಹಿತ್ಯ ಕೃತಿಯೊಂದರ ದೃಶ್ಯಾತ್ಮಕ ಮತ್ತು ಶ್ರವ್ಯಾತ್ಮಕ ಧಾಟಿಗಳಲ್ಲಿ ಶಿಷ್ಯ ಮತ್ತು ಮೌಖಿಕ ಸ್ವರೂಪಗಳು ಸಂಮಿಶ್ರಗೊಂಡಿರುತ್ತವೆ.

ದಲಿತ ಲೇಖಕರ ಸೃಜನಶೀಲ ಕೃತಿಗಳನ್ನು ದಲಿತರ ಮಾನಸಿಕ ಅಥವಾ ಸಾಮಾಜಿಕ ಸ್ವರೂಪದ ಸಾಕ್ಷಿಗಳಾಗಿ ಮಾತ್ರ ನೋಡಬಾರದು. ದಲಿತ ಜನಾಂಗದ ಮನೋವಿಜ್ಞಾನ ಅಥವಾ ಸಮಾಜ ವಿಜ್ಞಾನ ಇದರ ಒಂದು ಮಾನದಂಡವಾಗಿ ದಲಿತ ಸಾಹಿತ್ಯವನ್ನು ಬಳಸಿಕೊಳ್ಳುವ ಕ್ರಮ ಸರಿಯಾದದ್ದಲ್ಲ. ದಲಿತ ಸಾಹಿತ್ಯವನ್ನು ದಲಿತ ಸಂಸ್ಕೃತಿಯ ಕೇವಲ ಸಾಂಸ್ಕೃತಿಕ ದಾಖಲೆಗಳಾಗಿ ಮಾತ್ರ ನೋಡಬಾರದು. ಒಂದು ಕಾಲದಲ್ಲಿ ಮಾನವ ವಿಜ್ಞಾನ ಅಥವಾ ಸಮಾಜ ವಿಜ್ಞಾನ ಮಾಡಿದ ತಪ್ಪುಗಳನ್ನೇ ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿ ಮಾಡಬಾರದು. ದಲಿತ ಸಾಹಿತ್ಯ

ಕೃತಿಯನ್ನು ದಲಿತ ಸಂಸ್ಕೃತಿಯ ಒಳಗಡೆ ನಡೆಯುವ ಒಂದು ರಾಜಕೀಯ ಆಸ್ಫೋಟದ ಅಭಿವ್ಯಕ್ತಿಯಾಗಿ ಅಧ್ಯಯನ ಮಾಡುವ ಅವಶ್ಯಕತೆ ಇದೆ. ರಾಜಕೀಯ ಆಸ್ಫೋಟ ಎನ್ನುವ ಶಬ್ದವನ್ನು ಇಲ್ಲಿ ಹೆಚ್ಚು ವ್ಯಾಪಕವಾದ ಅರ್ಥದಲ್ಲಿ ಬಳಸಿದ್ದೇನೆ. ಬಹು ಸಂಸ್ಕೃತಿಯ ಸಮಾಜದ ಒಳಗಡೆ ಬರುವ ದಲಿತ ಜನಾಂಗವೊಂದು ಇತರ ಜನಾಂಗಗಳ ಸಂಪರ್ಕದಿಂದ ತನ್ನೊಳಗೆ ಹೊಂದುವ ಪರಿವರ್ತನೆಗಳು ಮತ್ತು ಸಮಾಜ ಇತರ ಜನಾಂಗಗಳ ಬಗೆಗೆ ಅದು ಕಾಲಕಾಲಕ್ಕೆ ತಾಳುವ ನಿರ್ದಿಷ್ಟ ಧೋರಣೆಗಳು ಅವು ಈ ರಾಜಕೀಯ ಆಸ್ಫೋಟದ ವ್ಯಾಪ್ತಿಯಲ್ಲಿ ಬರುತ್ತದೆ.

ಅಕ್ಷರ ಸಂಸ್ಕೃತಿಯ ಪ್ರಸರಣದ ಪರಿಣಾಮವಾಗಿ ದಲಿತರು ತಮ್ಮ ಜನಾಂಗದ ಒಳಗಡೆ ಮತ್ತು ಹೊರಗಡೆ ಬದಲಾವಣೆಗಳಿಗಾಗಿ ತುಡಿಯುತ್ತಾರೆ. ಅದರೆ ಇಂತಹ ಬದಲಾವಣೆಗಳ ಸ್ವರೂಪ ಒಳಿತು ಕೆಡುಕು ಮುಂತಾದ ವಿಷಯದ ಕುರಿತು ಮೌಲ್ಯಮಾಪನ ನಿಜವಾದ ಅರ್ಥದಲ್ಲಿ ದಲಿತ ಲೇಖಕನೊಬ್ಬನಿಂದ ಮಾತ್ರ ಸಾಧ್ಯ. ಇಂತಹ ವಿಭಿನ್ನ ಪ್ರಕ್ಷುಬ್ಧತೆಗಳ ದಾಖಲೆಗಳನ್ನು ಮೌಲ್ಯಾತ್ಮಕ ಚರ್ಚೆಗಳ ಮೂಲಕ ಸಾಹಿತ್ಯ ಕೃತಿಯೊಂದರ ರೂಪದಲ್ಲಿ ದಲಿತ ಲೇಖಕನೊಬ್ಬನು ಹೇಗೆ ನಿರ್ಮಿಸುತ್ತಾನೆ ಎನ್ನುವುದು ಮುಖ್ಯವಾದ ಅಂಶ. ಮೌಖಿಕ ಪರಂಪರೆಯ ಸಂಸ್ಕೃತಿಯ ಮುಖ್ಯ ಗುಣಗಳಾದ ಭಿನ್ನತೆಗಳ ಮೂಲಕ ಪುನರಾವರ್ತನೆ ಲವಲವಿಕೆಯ ಮೂಲಕ ಜೀವನ ಬದಲಾವಣೆ, ಇವನ್ನು ಅಕ್ಷರ ಸಂಸ್ಕೃತಿಯ ಸಾಹಿತ್ಯ ಕೃತಿಗಳಲ್ಲಿ ತರಲು ಪ್ರಯತ್ನಿಸಿದಾಗ ದಲಿತ ಕನ್ನಡ ಸಾಹಿತ್ಯ ಪರಂಪರೆಯಲ್ಲಿಯೇ ವಿಶಿಷ್ಟವಾದ ಮತ್ತು ವೈವಿಧ್ಯಮಯವಾದ ಸಾಹಿತ್ಯ ಕೃತಿಗಳನ್ನು ಕೊಡುವುದು ಸಾಧ್ಯವಾಗುತ್ತದೆ. ಆದ್ದರಿಂದಲೇ ದಲಿತ ಸಾಹಿತ್ಯವನ್ನು ಕನ್ನಡ ನವ್ಯ ಸಾಹಿತ್ಯದಂತೆ ಏಕರೂಪದ ಶಿಷ್ಟ ರಚನೆಯ ಬಿಗಿ ಚೌಕಟ್ಟಿನ ರೂಪದಲ್ಲಿ ಕಲ್ಪಿಸಿಕೊಳ್ಳಬಾರದು. ಇಲ್ಲವಾದರೆ ನವ್ಯ ಸಾಹಿತ್ಯದಲ್ಲಿನಂತೆ ಸಿದ್ಧ ಚೌಕಟ್ಟಿನ ಏಕತಾನತೆಯ ಕೃತಿಗಳು ತಾತ್ಕಾಲಿಕ ಭ್ರಮೆಯನ್ನು ಬೆರಗನ್ನೂ ಮಾತ್ರ ಉಂಟುಮಾಡಬಲ್ಲವು.

೧೯೭೫ರಿಂದೀಚೆಗೆ ದಲಿತ ಬಂಡಾಯದ ಆಶಯಗಳನ್ನು ಹೊಂದಿದ ಸಾಹಿತ್ಯ ವಿಫಲವಾಗಿ ಬಂದಿದೆ. ಒಂದು ಕೃತಿಯನ್ನು ಇದು ದಲಿತ ಲೇಖಕ ಬರೆದ ಕೃತಿ, ಇದು ಮುಸ್ಲಿಂ ಲೇಖಕ ಬರೆದ ಕೃತಿ ಎಂದು ನೋಡುವುದಕ್ಕಿಂತ ಇದು ಕನ್ನಡ ಲೇಖಕನೊಬ್ಬನ ಕೃತಿ ನೋಡುವುದು ಸೂಕ್ತ. ಆದರೆ ಜಾತ್ಯಾತೀತ ದೇಶವೆಂದು ಹಣೆ ಪಟ್ಟಿ ಹಚ್ಚಿಕೊಂಡು ಬರೀಜಾತಿಯ ಗೋಡೆಗಳನ್ನೇ ಕಟ್ಟಿದ ಈ ಸಮಾಜ ವ್ಯವಸ್ಥೆಯ ಸೋಗಲಾಡಿತನದ ಸಂಸ್ಕೃತಿಯಲ್ಲಿ ಹಾಗೆ ನೋಡಲಿಕ್ಕಾಗುವುದಿಲ್ಲ. ಒಬ್ಬ ದಲಿತನ ನೋವನ್ನು ಒಬ್ಬ ಮುಸ್ಲಿಂನ ಭಯವನ್ನು ಬೇರೆಯವರು ಎಷ್ಟೇ ಅರ್ಥಮಾಡಿಕೊಂಡರೂ, ಸುಂದರವಾಗಿ ಅಭಿವ್ಯಕ್ತಿಸಿದರೂ ಅಲ್ಲಿ ಆ ನೋವಿನ ನಿಜವಾದ ಕಳಕಳಿ ಸ್ಪಷ್ಟವಾಗುವುದಿಲ್ಲ. ಹಾಗೆಯೇ ಮಹಿಳೆಯ ಸಮಸ್ಯೆಗಳು ಕೂಡ ಮಹಿಳೆಯೊಬ್ಬಳ ನೋವಿನ ಬಗೆಗೆ ಇತರ ಪುರುಷರು ಅದನ್ನು ತಿಳಿದುಕೊಂಡು ಬರೆಯಬಹುದು. ಆದರೆ ಅದು ಆ ಮಹಿಳೆ ಬರೆದಷ್ಟೇ ನೈಜವಾಗಿರುವುದಿಲ್ಲ. ಹೀಗೆಂದಾಕ್ಷಣ

ಕನ್ನಡದಲ್ಲಿ ದಲಿತ ಲೇಖಕರು, ಮುಸ್ಲಿಂ ಲೇಖಕರು, ಮಹಿಳಾ ಲೇಖಕರು ಎಂದು ಬೇರೆ ಬೇರೆ ರೀತಿಯಿಂದ ವಿಭಜಿಸಬೇಕು ಎಂಬುದು ನನ್ನ ವಾದವಲ್ಲ. ಕನ್ನಡ ಸಾಹಿತ್ಯ ಚರಿತ್ರೆಯನ್ನೇ ತೆಗೆದುಕೊಂಡು ನೋಡಿದಾಗ ಕಣ್ಣಿಗೆ ಹೊಡೆಯುವಂತೆ ಕಾಣುವ ಜೈನಯುಗ, ವೀರಶೈವ ಯುಗ, ಬ್ರಾಹ್ಮಣಯುಗ, ಇರುವಂತೆ ನವ್ಯೋತ್ತರ ಕನ್ನಡ ಸಾಹಿತ್ಯವನ್ನು ದಲಿತ ಬಂಡಾಯ ಸಾಹಿತ್ಯ, ಮುಸ್ಲಿಂ ಸಾಹಿತ್ಯ, ಮಹಿಳಾ ಸಾಹಿತ್ಯ, ಎಂದು ವಿಭಜಿಸಿ ಗೋಡೆ ಕಟ್ಟುವುದು ಕೂಡಾ ನನ್ನ ಉದ್ದೇಶವಲ್ಲ.

ಒಂದು ಕೃತಿಯನ್ನು ಓದುತ್ತಿರುವಾಗ ಅದು ಯಾರೇ ಬರೆದ ಕೃತಿಯಾಗಲೀ ಮೊದಲು ಅದು ಸಾಹಿತ್ಯ ಕೃತಿಯಾಗಿದೆಯೋ, ಇಲ್ಲವೋ, ಎಂಬುದು ಮುಖ್ಯ. ಅಲ್ಲಿಯ ಲೇಖಕ ತನ್ನ ಅನುಭವಗಳಿಗೆ ಎಷ್ಟು ಪ್ರಾಮಾಣಿಕನಾಗಿದ್ದಾನೆ, ಆ ಕೃತಿ ಸಾಹಿತ್ಯ ಕೃತಿಯಾಗಿಯೂ ಪ್ರಸ್ತುತ ಬದುಕಿಗೆ ಎಷ್ಟರ ಮಟ್ಟಿಗೆ ಸ್ಪಂದಿಸುತ್ತದೆ ಎಂಬುದು ಕೂಡ ಮುಖ್ಯ. ಇದರ ಜೊತೆಗೆ ಆ ಕೃತಿ ಇದುವರೆಗೆವಿಗೂ ಇದ್ದ ಕೃತಿಗಳಿಗಿಂತ ಭಿನ್ನವಾದ ಅನುಭವ ಕೊಟ್ಟಾಗ, ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಅನೇಕ ಹೊಸ ಸಂಗತಿಗಳನ್ನ ತಿಳಿಸಿದಾಗ, ಆ ಲೇಖಕ ಬೆಳೆದು ಬಂದ ಪರಿಸರ ಸಿದ್ಧಾಂತ ಇವು ಕೂಡ ಮುಖ್ಯವಾಗಿರುತ್ತವೆ.

ಇಂತಹ ಸಂದರ್ಭದಲ್ಲಿ ಸಂಸ್ಕೃತಿ ಸಂಸ್ಕೃತಿಗಳ ನಡುವೆ ಸಂಘರ್ಷ ನಡೆಯುತ್ತದೆ. ಆಗ ಆ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವಾಗ ಇದು ದಲಿತ ಬಂಡಾಯ ಲೇಖಕರ ಆಶಯ, ಇದು ಮುಸ್ಲಿಂ ಲೇಖಕರ ಅಭಿವ್ಯಕ್ತಿ ಇದು ಮಹಿಳೆಯೊಬ್ಬಳು ಅನುಭವಿಸಿದ ನೋವಿನ ಕತೆ ಎಂದೆಲ್ಲಾ ಅರ್ಥೈಸಿಕೊಳ್ಳ ಬೇಕಾಗುತ್ತದೆ. ಆಗ ದಲಿತ ಬದುಕಿನ ಅನೇಕ ಒಳನೋಟಗಳು ಮುಸ್ಲಿಂ ಸಂಸ್ಕೃತಿಯ ಸಂವೇದನೆಗಳು, ಮಹಿಳಾ ಶೋಷಣೆಯ ಒಳಗುಟ್ಟುಗಳು ನಮಗೆ ಸ್ಪಷ್ಟವಾಗುತ್ತದೆ. ಹೀಗೆ ಸಂಸ್ಕೃತಿ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದಾಗ ಅಲ್ಲಿ ಜಾತಿ ಗುಂಪುಗಳನ್ನು ನಿರ್ಮಿಸುವ ಪ್ರಶ್ನೆ ಬರುವುದಿಲ್ಲ. ಈ ಮಾತನ್ನು ಒಂದು ಉದಾಹರಣೆ ಮೂಲಕ ಸ್ಪಷ್ಟಪಡಿಸಬಹುದು.

ಕನ್ನಡದಲ್ಲಿ ದಲಿತರನ್ನೇ ನಾಯಕರನ್ನಾಗಿ ಮಾಡಿ ದಲಿತರ ಬಗೆಗೆ ಮೊಟ್ಟ ಮೊದಲು ಸಾಹಿತ್ಯ ರಚಿಸಿದವರು ಕುವೆಂಪು. ಕುವೆಂಪು ಅವರ ಶೂದ್ರ ತಪಸ್ವಿ, ಜಲಗಾರ, ಬೆರಳ್ಗೆ ಕೊರಳ್ ಈ ಮೂರು ನಾಟಕಗಳಲ್ಲಿ ದಲಿತರೇ ನಾಯಕರು. ಆ ಕೃತಿಗಳು ಬಂದ ಸಂಧರ್ಭದಲ್ಲಿ ನಿಂತುಕೊಂಡು ಮೌಲ್ಯಮಾಪನ ಮಾಡಿದಾಗ ಆ ಕೃತಿಗಳಿಗೆ ತನ್ನದೇ ಆದ ವಿಶಿಷ್ಟತೆ ಇದೆ. ಕುವೆಂಪು ಅವರು ದಲಿತರನ್ನು ನಾಯಕರನ್ನಾಗಿಸಿ ನಾಟಕಗಳನ್ನು ರಚಿಸಿದ್ದಾರೆ ಎಂಬುದು ಮುಖ್ಯವಾಗುವುದಿಲ್ಲ. ಕುವೆಂಪು ಆ ದಲಿತರ ಬಗೆಗೆ ಏನನ್ನು ಹೇಳಿದ್ದಾರೆ ? ಅಲ್ಲಿ ದಲಿತ ಸಂಸ್ಕೃತಿಯ ಒಳನೋಟಗಳು ಹೇಗೆ ಖಚಿತಗೊಂಡಿಲ್ಲ ಎಂಬುದು ತೀರಾ ಮುಖ್ಯವಾಗಿದೆ. ಈ

ಮೂರು ನಾಟಕಗಳು ವಸ್ತುವಿನ ದೃಷ್ಟಿಯಿಂದ ಆವತ್ತಿನ ಸಂಧರ್ಭದಲ್ಲಿ ಎಷ್ಟೇ ಪ್ರಗತಿಪರ ಎನ್ನಿಸಿಕೊಂಡಿದ್ದರೂ ಪ್ರಸ್ತುತ ಸಂದರ್ಭದಲ್ಲಿ ನಿಂತುಕೊಂಡಾಗ ಅವು ದಲಿತಪರ ನಿಲುವುಗಳನ್ನು ಹೊಂದಿದ ಕೃತಿಗಳಾಗಿ ಕಾಣುವುದಿಲ್ಲ. ಶೂದ್ರತಪಸ್ವಿಯಲ್ಲಿಯ ಶಂಭೂಕನಿಗೆ ನ್ಯಾಯ ಮುಖ್ಯವೇ ವಿನಹಃ ತಪಸ್ಸಲ್ಲ. ಜಲಗಾರನಿಗೆ ಜನರೊಂದಿಗಿನ ಸ್ಪರ್ಶದ ಬದುಕು ಮುಖ್ಯವೇ ಹೊರತು ಊರ ಹೊರಗಡೆ ಇರುವ ದೇವಾಲಯವಲ್ಲ. ಏಕಲವ್ಯನಿಗೆ ಪುರೋಹಿತಶಾಹಿ ವ್ಯವಸ್ಥೆಯ ಕಪಟತನದ ಅರಿವು ಮುಖ್ಯವೇ ಹೊರತು ಕರ್ಮತತ್ವದ ಸಿದ್ಧಾಂತವಲ್ಲ. ಹೀಗಾಗಿ ದಲಿತರ ಬದುಕಿನ ಬಗೆಗೆ ಕುವೆಂಪು ಬರೆಯುವುದಕ್ಕೂ ದೇವನೂರ ಮಹಾದೇವ ಮತ್ತು ಮೊಗಳ್ಳಿ ಗಣೇಶರವರು ಬರೆಯುವುದಕ್ಕೂ ತುಂಬಾ ವ್ಯತ್ಯಾಸವಿದೆ. ಆದ್ದರಿಂದ ಕನ್ನಡ ಸಾಹಿತ್ಯ ದಲಿತ ಸಂಸ್ಕೃತಿಯ ಒಳನೋಟಗಳನ್ನು ಅರ್ಥೈಸಿಕೊಳ್ಳುವ ಸಂದರ್ಭದಲ್ಲಿ ದೇವನೂರವರು, ಮೊಗಳ್ಳಿಗಣೇಶರವರ ಲೇಖಕರು ಮುಖ್ಯವಾಗುತ್ತಾರೆ. ಈ ದೃಷ್ಟಿಯಿಂದ "ಮೊಗಳ್ಳಿಗಣೇಶರವರ ಕಥಾ ಸಾಹಿತ್ಯ ಒಂದು ಅಧ್ಯಯನ" ಎಂಬ ವಿಷಯವನ್ನು ಪರಿಶೀಲಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಈ ಅಧ್ಯಯನವನ್ನು ನಾಲ್ಕು ನೆಲೆಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ.

1. ಮೊಗಳ್ಳಿಗಣೇಶರವರ ಕಥೆಗಳಲ್ಲಿ ದಲಿತತ್ವದ ಸ್ವರೂಪ

2. ಕಥೆಗಳಲ್ಲಿ ಕಂಡುಬರುವ ಅಧಿಕಾರ ಮತ್ತು ಯಜಮಾನಿಕೆಯ ರಚನೆಗಳು

3. ಕಥೆಗಳಲ್ಲಿ ಕಂಡುಬರುವ ಮಹಿಳೆಯರ ಚಿತ್ರಣ

4. ಕಥೆಗಳಲ್ಲಿ ಕಂಡುಬರುವ ಸಾಹಿತ್ಯ ಮತ್ತು ಸಂಸ್ಕೃತಿ ನೆಲೆಗಳು

ಈ ರೀತಿಯ ವಿಭಜನೆಯನ್ನು ಕೇವಲ ಅಧ್ಯಯನದ ಅನುಕೂಲಕ್ಕಾಗಿ ಮಾತ್ರ ಮಾಡಿಕೊಂಡಿದೆಯೇ ಹೊರತು ಇದನ್ನು ಹೊರತುಪಡಿಸಿದರೆ ಇಲ್ಲಿರುವ ನಾಲ್ಕು ನೆಲೆಗಳನ್ನು ಒಂದಕ್ಕೊಂದು ಪೂರಕವಾಗಿ ಕೂಡ ನೋಡಬಹುದು.

ಒಟ್ಟಿನಲ್ಲಿ ಮೊಗಳ್ಳಿಗಣೇಶರವರ ಕಥಾಸಾಹಿತ್ಯ – ಒಂದು ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪಗಳನ್ನು ಹೀಗೆ ಗ್ರಹಿಸಬಹುದು.

1. ನಾನು ಎಂ.ಫಿಲ್ ಸಂಶೋಧನಾ ಪ್ರಬಂಧದಲ್ಲಿ ಮೊಗಳ್ಳಿಗಣೇಶರವರ ಕಥಾಸಾಹಿತ್ಯ ಒಂದು ಅಧ್ಯಯನ – ಈ ವಿಷಯದ ಆಯ್ಕೆ ಹಿಂದಿರುವ ಉದ್ದೇಶವನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

2. ಈ ವಿಷಯದ ವ್ಯಾಪ್ತಿ ಮತ್ತು ಅಧ್ಯಯನದ ಮಹತ್ವವನ್ನು ಈ ಅಧ್ಯಾಯದಲ್ಲಿ ನೋಡಬಹುದು.

೩. ನನ್ನ ಈ ಸಂಶೋಧನೆಯನ್ನು 'ರಾಚನಿಕೋತ್ತರ ಅಧ್ಯಯನ'ದ ವಿಧಾನದ ಮೂಲಕ ಕೈಗೆತ್ತಿಕೊಳ್ಳಲಾಗಿದೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಅಧ್ಯಾಯ – ೨

ಮೊಗಳ್ಳಿಗಣೇಶರವರ ಕಥೆಗಳಲ್ಲಿ ದಲಿತತ್ವದ ಸ್ವರೂಪ

ಪ್ರಸ್ತುತ ಅಧ್ಯಾಯದಲ್ಲಿ 'ಮೊಗಳ್ಳಿಗಣೇಶ್'ರವರ ಕಥೆಗಳಲ್ಲಿ 'ದಲಿತತ್ವ'ದ ಸ್ವರೂಪವನ್ನು ಅಧ್ಯಯನ ಮಾಡಲಾಗಿದೆ.

ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿ ಪ್ರಾರಂಭವಾದ ದಲಿತ ಸಾಹಿತ್ಯ ಮೊದಲು ಆರಂಭವಾಗಿದ್ದು ಮರಾಠಿಯಲ್ಲಿ ೧೯೪೮ ಮತ್ತು ೧೯೫೩ ರಲ್ಲಿ 'ದಲಿತ ಸಾಹಿತ್ಯ ಸಂಘ' ಮತ್ತು 'ದಲಿತ ಸಾಹಿತಿಗಳ ಸಮಾಲೋಚನೆ' ನಡೆದವು. ೧೯೭೦ರ ದಶಕದಲ್ಲಿ ಕನ್ನಡ ಸಾಹಿತ್ಯ ವಲಯದಲ್ಲಿಯೂ ದಲಿತ ಪದ ಚರ್ಚೆಗೊಳಗಾಯಿತು. ಅರವಿಂದ ಮಾಲಗತ್ತಿಯವರು ಪತ್ರಿಕೆ, ವಿಚಾರ ಸಂಕಿರಣ ಹಾಗೂ ಬೇರೆ ಬೇರೆ ಕೃತಿಗಳಲ್ಲಿ ವ್ಯಕ್ತವಾದ ವಿಚಾರಗಳನ್ನು ಸಂಗ್ರಹಿಸಿ ಸಮರ್ಥವಾದ ವ್ಯಾಖ್ಯಾನ ನೀಡಿದ್ದಾರೆ. ಅವು ಈ ಕೆಳಗಿನಂತಿವೆ:

೧. 'ಶೋಷಣೆ' ಎಂಬ ಪದಕ್ಕೆ ಜಾತಿ ಬೇಧವಿಲ್ಲ: ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲ ಶೋಷಣೆಗೆ ಒಳಗಾದ ಎಲ್ಲ ಜನರೂ ದಲಿತರು.

೨. ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು.

೩. ಅಸ್ಪೃಶ್ಯರೂ ಸೇರಿದಂತೆ (ಆ ವ್ಯಾಖ್ಯಾನದ) ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರೂ ಅಸ್ಪೃಶ್ಯರಂತೆ ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾದ ಜನರೂ ಸೇರಿ ದಲಿತರಾಗುತ್ತಾರೆ.[೧]

ದಲಿತ ಸಂಘರ್ಷ ಸಮಿತಿಯು ತನ್ನ ಪ್ರಣಾಳಿಕೆಯಲ್ಲಿ "ದಲಿತರು ಎಂದರೆ ಅಸ್ಪೃಶ್ಯರು ಮತ್ತು ಜಾತಿಯಿಂದ ಅವಮಾನಿತರಾದವರು ಮತ್ತು ಹಿಂದೂ ಚಾತುರ್ವರ್ಣದ ಶ್ರಮವಿಭಜನೆಯ ಕುತಂತ್ರಕ್ಕೆ ಈಡಾಗಿ ಕೀಳು ವೃತ್ತಿಗಳಲ್ಲೇ ಅವಲಂಬಿಸಿ ಜಾತಿಯ ಹೆಸರು ಹೇಳಿಕೊಳ್ಳಲು ನಾಚಿಕೆ ಪಡುತ್ತಿದ್ದಾರೋ ಅವರು"[೨] ಎಂದು ವಿವರಿಸಿಕೊಂಡಿಸಿತು.

---

೧ ಡಾ॥ ಅರವಿಂದ ಮಾಲಗತ್ತಿ : ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ – ಬಹುಜನ ಮಾಧ್ಯಮ ಕೇಂದ್ರ ಪ್ರಕಾಶನ, – ೨೦೦೮, ಪು.ಸಂ–೪

೨ ಅದೇ, ಪು.ಸಂ–೪

೭೦ ರ ದಶಕದಲ್ಲಿ ದಲಿತ ಸಂಘಟನೆ ಮತ್ತು ದಲಿತ ಸಾಹಿತ್ಯ ಚಳುವಳಿ ಹುಟ್ಟಿಕೊಂಡಾಗ ಮಾರ್ಕ್ಸ್‌ವಾದಿಗಳು ಮತ್ತು ಲೋಹಿಯಾ ವಾದಿಗಳು ದಲಿತರೆಂದರೆ ಅಸ್ಪೃಶ್ಯರೆಂದು ಒಪ್ಪಿಕೊಂಡು, ತಮ್ಮ ಸಿದ್ಧಾಂತಗಳಿಗೆ ಅನುಗುಣವಾಗಿ ಬದಲಾದರು. ಆರಂಭದ ದಲಿತ ಲೇಖಕರಾದ ದೇವಯ್ಯ ಹರವೆ ಅಸ್ಪೃಶ್ಯತೆಯ ನೆಲೆಯಿಂದಲೇ ಮೊದಲಿಗೆ ದಲಿತರು ಪರಿಕಲ್ಪನೆಯನ್ನು ಸಮರ್ಥಿಸಿಕೊಂಡು ಹೀಗೆ ವಿವರಿಸುತ್ತಾರೆ, "ದಲಿತ ಎಂದರೆ ಹಿಂಸೆಗೆ ಒಳಗಾದ, ಸೋಲಿಸಲಾಗದ ಎಂಬ ಸಾಮಾನ್ಯ ಶಬ್ದಕೋಶದ ಪದಗಳ ಅರ್ಥವನ್ನು ಇಟ್ಟುಕೊಂಡು ಅತ್ಯಂತ ಮೇಲುಸ್ಥಾನದಲ್ಲಿರುವ ಪುರೋಹಿತವರ್ಗ ಮತ್ತು ಅವರ ನಂತರ ವರ್ಗಗಳಿಂದ ತುಳಿತಕ್ಕೆ ಒಳಗಾದ, ಅಸ್ಪೃಶ್ಯರನ್ನು ಐತಿಹಾಸಿಕ ಆಧಾರದಿಂದಲೇ ಅಸ್ಪೃಶ್ಯರನ್ನು ಮಾತ್ರ ದಲಿತರೆನ್ನುತ್ತಾರೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಯಾರನ್ನೂ ಕಡೆಗಣಿಸಲಾಗಿದೆಯೋ ಅಂಥವರನ್ನು ಮಾತ್ರ ದಲಿತರೆಂದು ಕರೆಯಬಹುದಾಗಿದೆ"[೩] ಎಂದು ಅಭಿಪ್ರಾಯಪಡುತ್ತಾರೆ.

ಲೇಖಕ ಗಣೇಶನ್ ಅವರು "ಶತ ಶತಮಾನಗಳಿಂದ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಶೋಷಣೆ, ಕ್ರೌರ್ಯಕ್ಕೆ ಮತ್ತು ಅವಮಾನಕ್ಕೆ ಒಳಗಾದ ಅಸ್ಪೃಶ್ಯರು ಹಾಗೂ ಇವರಂತೆಯೇ ಜಾತಿ ಹೆಸರಿನಲ್ಲಿ ಅವಮಾನಕ್ಕೆ ಗುರಿಯಾದ ಇತರ ಕೆಳಜಾತಿಗಳ ಪ್ರಜ್ಞಾವಂತ ಲೇಖಕರು ತಮ್ಮ ಜನಜೀವನದ ಬಗೆಗೆ ಬರೆಯುವ ಪ್ರತಿಭಟನಾ ಸಾಹಿತ್ಯವೇ ನಿಜವಾದ ದಲಿತ ಸಾಹಿತ್ಯ"[೪] ಎಂದು ಅಭಿಪ್ರಾಯ ಪಡುತ್ತಾರೆ.

ಮಾರ್ಕ್ಸ್‌ವಾದಿ ಚಿಂತಕರಾದ ಡಾ.ಸಿ.ವೀರಣ್ಣ ಈ 'ದಲಿತ' ಪದದ ಗೊಂದಲಕ್ಕೆ ತಮ್ಮ ಅಭಿಪ್ರಾಯವನ್ನು ಈ ರೀತಿಯೂ ಮಂಡಿಸಿದ್ದಾರೆ. "ಎಲ್ಲಾ ಜಾತಿಗಳಲ್ಲಿಯೂ ತುಳಿತಕ್ಕೊಳಗಾಗಿರುವವರನ್ನೆಲ್ಲಾ ದಲಿತರು ಎಂದು ಕರೆದು 'ದಲಿತ' ಪದದ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕಿಂತ ಈಗ ಅದು ಹುಟ್ಟಿ ಬೆಳೆದಿರುವ ಹಿನ್ನೆಲೆಯಲ್ಲಿ ಅದನ್ನು ಅಸ್ಪೃಶ್ಯ ಜನಾಂಗಕ್ಕೆ ಸೀಮಿತಗೊಳಿಸುವುದು ಚಾರಿತ್ರಿಕ ಅಧ್ಯಯನದ ದೃಷ್ಟಿಯಿಂದ ಸೂಕ್ತವೆನಿಸುತ್ತದೆ. ಹೀಗೆ ಮಾಡಿದರೆ ಕಲಸುಮೇಲೋಗರವಾಗುವುದು ತಪ್ಪುತ್ತದೆಯಲ್ಲದೆ, ಜಾತಿಯ ದೃಷ್ಟಿಯಿಂದಲೇ ಸಾಹಿತ್ಯವನ್ನು ಅಭ್ಯಾಸಮಾಡುವ ಸಾಂಪ್ರದಾಯಿಕ ನೋಟವೊಂದಕ್ಕೆ 'ದಲಿತಸಾಹಿತ್ಯ' ಎನ್ನುವುದು ಸಮೀಪವಾಗುತ್ತದೆ. ದಲಿತ ಸಾಹಿತ್ಯವೆಂದು ಕರೆಯುವುದನ್ನು 'ಶ್ರಮಜೀವಿಗಳ ಸಾಹಿತ್ಯವೆಂದೋ ಬಡವರ ಸಾಹಿತ್ಯವೆಂದೋ ಕರೆದು ಗೊಂದಲ ಉಂಟು ಮಾಡುವುದು ತಪ್ಪುತ್ತದೆ"[೫] ಎಂದು ಹೇಳಿದ್ದಾರೆ.

---

೩ ದೇವಯ್ಯ ಹರವೆ : ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ೧೯೯೧, ಪುಟ-೨

೪ ಗಣೇಶನ್.ಎಸ್ : ದಲಿತ ಸಾಹಿತ್ಯ ಚಳುವಳಿ, ೧೯೮೨, ಪು.ಸಂ-೬

೫ ವೀರಣ್ಣ.ಸಿ : ಸಾಹಿತ್ಯ ಮತ್ತು ಸಮುದಾಯ, ೧೯೮೩, ಪುಟ ೪೨-೪೩

"ದಲಿತ ಪರಿಕಲ್ಪನೆ ಕುರಿತು ಮಾತನಾಡುವ ಬಹುಮಂದಿ ಎಲ್ಲಾ ವರ್ಗ ಜಾತಿಗಳಲ್ಲಿಯೂ ಶೋಷಣೆ ಇದೆ. ಹಾಗೆ ಶೋಷಣೆಗೆ ಒಳಗಾದವರೇ 'ದಲಿತ'ರು ಎಂದು ಸರಳೀಕರಣ ಮಾಡುತ್ತಾರೆ. 'ದಲಿತ' ಹಾಗೂ 'ಶೋಷಿತ' ಈ ಎರಡಕ್ಕೂ ಸ್ವಲ್ಪ ವ್ಯತ್ಯಾಸವಿದೆ ಎಂಬುದನ್ನು ಗುರುತಿಸುವ ಅಗತ್ಯವಿದೆ. ದಲಿತರು, ಮೂಲತಃ ಶೋಷಿತರೇ ನಿಜ: ಆದರೆ 'ಶೋಷಿತ'ರೆಲ್ಲ ದಲಿತರಲ್ಲ, ದಲಿತರು ಕೇವಲ ಶೋಷಿತರಷ್ಟೇ ಅಲ್ಲ, ಶೋಷಣೆಯ ಜೊತೆಗೆ ಅಮಾನವೀಯವಾದ ಹಿಂಸೆ ಕ್ರೌರ್ಯಗಳಿಗೆ ಒಳಗಾದವರು. ಒಂದು ವ್ಯಕ್ತಿತ್ವವೇ ಇಲ್ಲದವರೆಂಬಂತೆ ನಡೆಸಿಕೊಳ್ಳಲ್ಪಟ್ಟವರು"[೬] ಎಂದು ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

'ಕಮಲ ಹಂಪನಾ'ರವರು "ದಲಿತ ಜನಾಂಗದಲ್ಲಿಯೇ ಹುಟ್ಟಿ ಅದರ ನೋವನ್ನುಂಡ ಜನತೆಯ ಅನುಭವವನ್ನು ಚಿತ್ರಿಸಿದಾಗ ಅತ್ಯಂತ ಸಮರ್ಪಕವಾಗಿ ಮೂಡಿಬರಬಹುದು. ಇತರರು ಎಷ್ಟೇ ಆಳವಾಗಿ ಆ ಅನುಭವವನ್ನು ತನ್ನದಾಗಿಸಿಕೊಂಡರೂ ಅದರಲ್ಲಿನ ದೃಷ್ಟಿಕೋನ ಬೇರೆನೇ ಆದೀತು. ಎಷ್ಟೇ ಕಲಾತ್ಮಕವಾಗಿದ್ದರೂ ಅದು 'ದಲಿತ ಅನುಕಂಪ ಸಾಹಿತ್ಯ'ವಾಗುತ್ತದೆಯೇ ಹೊರತು ದಲಿತ ಸಾಹಿತ್ಯವಾಗುವುದಿಲ್ಲ"[೭] ಎಂದು ಅಭಿಪ್ರಾಯಪಡುತ್ತಾರೆ.

ಈ ಚಿಂತಕರು ದಲಿತ ಸಾಹಿತ್ಯ ಸ್ವರೂಪವನ್ನು ಬೇರೆ ಬೇರೆ ನೆಲೆಯಿಂದ ವಿವರಿಸುತ್ತ ಬಂದಿದ್ದಾರೆ. ಇದಕ್ಕೆ ಪೂರಕ ಎಂಬಂತೆ 'ಮೊಗಳ್ಳಿಗಣೇಶ' ರವರ ಚಿಂತನೆಯನ್ನು ಗಮನಿಸಿದರೆ ದಲಿತ ಚಿಂತನೆ ವಿಶಾಲವಾದ ತಾತ್ವಿಕ ತಳಪಾಯದಿಂದ ನಾಳಿನ ಅನೇಕ ಜವಾಬ್ದಾರಿಗಳನ್ನು ಹೊತ್ತುಕೊಳ್ಳಬೇಕಾದ ಸಂದರ್ಭದಲ್ಲಿ ಗಾಂಧಿಯ ಚಿಂತನೆಗಳನ್ನು ಅಂಬೇಡ್ಕರ್ ವೈಚಾರಿಕತೆಯಲ್ಲಿ ನಾವು ಪುನರ್‌ಸೃಷ್ಟಿಸಿಕೊಳ್ಳಲೇಬೇಕು"[೮] ಎನ್ನುವರು.

'ದಲಿತತ್ವ'ದ ಕುರಿತು 'ಮೊಗಳ್ಳಿಗಣೇಶ್'ರವರ ಅಭಿಪ್ರಾಯ: "ದಲಿತತ್ವ ಎಂದರೆ ಸಾಂಸ್ಕೃತಿಕವಾಗಿ ಬಹು ಅನನ್ಯತೆಗಳ ಬೃಹತ್ ಒಕ್ಕೂಟ. ಈ ಬೃಹತ್ ಒಕ್ಕೂಟವು ತನಗೆ ಮಾತ್ರವೆ ವಿಶಿಷ್ಟ ಎನಿಸುವ ಚಹರೆಯನ್ನು ಅಳವಡಿಸಿಕೊಂಡಿರುತ್ತದೆ. ಒಂದೊಂದು ಸಮುದಾಯವು ತಮ್ಮ ಅಸ್ತಿತ್ವದ ಕಾರಣಕ್ಕಾಗಿ ಸಾಮಾಜಿಕವಾದ ಗಡಿಗಳನ್ನು ರೂಪಿಸಿಕೊಂಡಿರುತ್ತದೆ. ಒಂದು ಸಮುದಾಯ ಮತ್ತೊಂದು ಸಮುದಾಯದ ಜೊತೆ ನಿರ್ದಿಷ್ಟವಾದ ಅವಕಾಶ ಮತ್ತು ಕ್ರಿಯೆಗಳನ್ನು ನಿರ್ಧರಿಸಿಕೊಂಡಿರುತ್ತವೆ. ಹೀಗಾಗಿಯೇ ಒಂದು ಸಮುದಾಯ ಮತ್ತೊಂದು ಸಮುದಾಯದ ಒಳಹೊರ ಅಂತರಗಳನ್ನು ಸದಾ ಕಟ್ಟೆಚ್ಚರದಿಂದ ನಿಭಾಯಿಸಿಕೊಂಡು ಸಾಗುತ್ತಿರುತ್ತದೆ. ಇದು ದಲಿತ ಸಮುದಾಯಗಳ ವಿಶೇಷ ಗುಣ. ಪರೋಕ್ಷವಾಗಿ ಸ್ವಯಂ ನಿಯಂತ್ರಣ ವ್ಯವಸ್ಥೆ, ಇದು ಜಾತಿ ರಚನೆಯ ಶ್ರೇಣೀಕರಣಕ್ಕಿಂತ ಭಿನ್ನ.

---

೬ ಶಿವರುದ್ರಪ್ಪ.ಜಿ.ಎಸ್ : ಸಮಗ್ರ ಗದ್ಯ , ಸಂಪುಟ-೨, ೫೧೯೯೪, ಪುಟ-೧೦೨
೭ ಕಮಲಾ ಹಂಪನಾ : ಬಡಬಾಗ್ನಿ, ೧೯೯೯, ಪುಟ-೩೪
೮ ಮೊಗಳ್ಳಿ ಗಣೇಶ್ : ದಲಿತ ಚಿಂತನೆ ಪ್ರಸ್ತಾವನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪುಟ-೧೧

ಸ್ವ ಅನನ್ಯತೆಯು ಈ ಸಮುದಾಯಗಳಿಗೆ ಸ್ವಾತಂತ್ರ್ಯವನ್ನು ಮತ್ತು ತನ್ನ ಮಿತಿಯನ್ನು ಏಕಕಾಲಕ್ಕೆ ತೀರ್ಮಾನಿಸುವಂತಿರುತ್ತದೆ. ಬಹು ಅನನ್ಯತೆಗಳು ಹೊರಕವಚದಲ್ಲಿ ತುಂಬ ಬಲಿಷ್ಠವಿದ್ದಂತೆ ತೋರುವುದು ದಿಟ. ಒಳರಚನೆಯಲ್ಲಿ ದಲಿತ ಸಮುದಾಯಗಳು ದೂರವಿದ್ದುಕೊಂಡೇ ತಮ್ಮ ತಮ್ಮ ರಕ್ಷಣೆಯ ಕ್ರಮಗಳನ್ನು ಜಾಗೃತವಾಗಿರಿಸಿಕೊಂಡಿರುತ್ತವೆ. ನಿಸರ್ಗವನ್ನು ಆರಾಧಿಸುವ ಮಾಂತ್ರಿಕ ಪದ್ಧತಿಯೂ ಸಾಂಸ್ಕೃತಿಕ ರೀತಿ ನೀತಿಗಳು ಬಹುಪಾಲು ಈ ಎಲ್ಲ ದಲಿತ ಸಮುದಾಯಗಳಿಗೂ ತಾತ್ವಿಕವಾದ ತಳಹದಿಯಾಗಿರುತ್ತದೆ.[೯]

ಸಾಂಸ್ಕೃತಿಕವಾದ ಲೋಕದಲ್ಲಿ ದಲಿತ ಸಮುದಾಯಗಳು ಒಂದೇ ತತ್ವಕ್ಕೆ ಬದ್ಧವಾದರೂ ಆರ್ಥಿಕ ಹಾಗೂ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಭಿನ್ನವಾದ ಮನೋಧರ್ಮಕ್ಕೆ ಒಳಪಟ್ಟಿರುತ್ತದೆ. 'ಸಾಂಸ್ಕೃತಿಕವಾಗಿ 'ದಲಿತ'ತ್ವವನ್ನು ವ್ಯಾಖ್ಯಾನಿಸುವುದು ರಮ್ಯ ವೈಚಾರಿಕತೆಗೆ ಬಹಳ ಸುಲಭ. ಅದರ ಗತಕಾಲದ ಸಾಂಸ್ಕೃತಿಕ ನಂಬಿಕೆಗಳ ಮೂಲಕ ದಲಿತ ಅಥವಾ 'ದಲಿತತ್ವ', ದಲಿತ ಸಂವೇದನೆಯಂತಹ ಪರಿಕಲ್ಪನೆಗಳು ಅನೇಕ ಬಾರಿ ವಿಜೃಂಭಿಸಲ್ಪಡುತ್ತವೆ".[೧೦]

ದಲಿತ ಚಳುವಳಿ ಬೇರೆ ಯಾವುದೇ ಚಳುವಳಿಯಂಥಲ್ಲದೆ ಅಥವಾ ಕಾರ್ಮಿಕ ಚಳುವಳಿಯ ಸ್ವರೂಪದ್ದಾಗಿರದೆ ಸಾಹಿತ್ಯ ಮತ್ತು ಸಂಸ್ಕೃತಿಯಂಥ ಕಲಾ ಮಾಧ್ಯಮಗಳನ್ನು ಸಂಪೂರ್ಣವಾಗಿಯೂ ತನ್ನ ಬೆಳವಣಿಗೆಯ ಸಾಧನಗಳನ್ನಾಗಿ ತೆಗೆದುಕೊಂಡೇ ಬೆಳೆದದ್ದಾಗಿದೆ. ಏಕೆಂದರೆ ಅಕ್ಷರರಹಿತರಾಗಿದ್ದ ದಲಿತರು ತಾವು ಕಲಿತ ಅಕ್ಷರಗಳನ್ನೆಲ್ಲ ಚಳುವಳಿಗಾಗಿಯೇ ದುಡಿಸಿಕೊಂಡರು. ತತ್ಪರಿಣಾಮವಾಗಿ ಸಮಕಾಲೀನ ಸಮಗ್ರ ಕನ್ನಡ ಸಾಹಿತ್ಯ ದಲಿತ ಚಳುವಳಿಕೆಯನ್ನು ಸಾಹಿತ್ಯಕ ಚಳುವಳಿಯನ್ನಾಗಿಯೂ ತನ್ನೊಳಗೆ ಸೇರಿಸಿಕೊಂಡಿರುವಂತೆಯೇ, ಸ್ವತಃ ದಲಿತ ಚಳುವಳಿ ಕೂಡ ಪೂರ್ವದ ಹತ್ತು ಶತಮಾನಗಳ ಕನ್ನಡ ಸಾಹಿತ್ಯದ ವಾಹಿನಿಯನ್ನು ಪ್ರಜ್ಞಾಪೂರ್ವಕವಾಗಿಯೂ ಅಧ್ಯಯನಾಸಕ್ತಿಯಿಂದಲೂ ಕೂಡಿಕೊಂಡಿರುವುದನ್ನು ಕಳೆದ ಕಾಲು ಶತಮಾನದ ಕನ್ನಡ ಸಾಹಿತ್ಯದ ಬೆಳವಣಿಗೆಯಿಂದ ಸಾಧಾರಣವಾಗಿಯೇ ತಿಳಿಯಬಹುದಾಗಿದೆ. ಈ ವರ್ಗದ ಜೀವನಾನುಭವವನ್ನು ಆವರೆಗೂ ಕಾಣದಿದ್ದ ಕನ್ನಡ ಭಾಷೆ ಮತ್ತು ಸಾಹಿತ್ಯ, ಆ ಅನುಭವ ದ್ರವ್ಯವನ್ನು ಸ್ವೀಕರಿಸಲೇಬೇಕಾಗಿ ಬಂದ ಅನಿವಾರ್ಯತೆ ಎಂತೋ ಅಂತೆಯೇ ಆ ಅನುಭವ ದ್ರವ್ಯವು ಕನ್ನಡ ಭಾಷೆ ಮತ್ತು ಸಾಹಿತ್ಯ ಶರೀರವನ್ನು ಪ್ರವೇಶಿಸುತ್ತಿದ್ದಂತೆಯೇ ಸಾಂಸ್ಕೃತಿಕ ನೆಲೆಗಳಲ್ಲಿ ಪಾರಂಪರಿಕ ಮೌಲ್ಯ ವ್ಯವಸ್ಥೆಯಲ್ಲಿನ ಏರುಪೇರು ಕೂಡ ಅಷ್ಟೇ ಅನಿವಾರ್ಯವಾಗಿ ಪರಿಣಮಿಸಿತು. ಅಲ್ಲದೆ ಸಾಹಿತ್ಯದಂಥ ಕಲಾ ಮಾಧ್ಯಮವನ್ನು ತನ್ನ ತೆಕ್ಕೆಗೆ ಹಾಗೆ ತೆಗೆದುಕೊಂಡ ದಲಿತ ಚಳುವಳಿಯು ಅದಕ್ಕೆ ಪ್ರತಿಯಾಗಿ, ಅದೇ ದಲಿತ ಚಳುವಳಿ ಕನ್ನಡ

---

೯ ಮೊಗಳ್ಳಿ ಗಣೇಶ್ : ದಲಿತ ಕಥನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪುಸಂ-೧೫೨

೧೦ ಅದೇ, ಪುಟ-೧೫೪

ಸಾಹಿತ್ಯಕ್ಕೆ ಮಾಡಿದ ಒಂದು ಅಪೂರ್ವ ಕೊಡುಗೆಯನ್ನು ಪ್ರಾಯಶಃ ಯಾರೂ ಅಲ್ಲಗಳೆಯಲಾರರು".[೧೧]

'ಮೊಗಳ್ಳಿಗಣೇಶ'ರವರ ಪ್ರಕಾರ ಒಂದು ಸಮುದಾಯದ 'ವಿಭಜಿತ ಪ್ರಜ್ಞೆ'ಯಿಂದ 'ದಲಿತತ್ವ' ಇನ್ನೊಂದು ನೆಲೆ ಪಡೆದಿದೆ. ಅಂದರೆ ಇಲ್ಲಿ ದಲಿತರ ಸಂಸ್ಕೃತಿ, ಪರಂಪರೆ, ಸಾಹಿತ್ಯ ಮುಂತಾದವು ನಾವು ಭಾವಿಸಿದಂತೆ ದಲಿತ ಸಮುದಾಯದಲ್ಲಿ ಇಲ್ಲ ಎನ್ನುವರು. ಇವೆಲ್ಲ ಜಾತಿ ರಾಜಕಾರಣ ನಡೆದೇ ಇದೆ ಎನ್ನುವರು. 'ಬುಗುರಿ' ಕಥೆಯಲ್ಲಿ ದಲಿತರ ಬದುಕನ್ನು ದಲಿತರೇ ಕಟ್ಟಿಕೊಂಡಿದ್ದು ಒಂದಾದರೆ, ವ್ಯವಸ್ಥೆ ಕಟ್ಟಿಕೊಟ್ಟ ಶೋಷಣೆ ಬದುಕು ಬೇರೆಯೇ ಆಗಿದೆ. ದಲಿತರ ಬದುಕು ಹೇಲುಗುಂಡಿಯೇ ಆಗಿದೆ. ಅಂದರೆ ಇಲ್ಲಿ ದಲಿತರನ್ನು ಸಮಾಜ ರೂಪಿಸಿದ ಬಗೆ ಹೇಗೆ ಎಂಬುದು ಮೊಗಳ್ಳಿಯವರ ಕಥಾ ಸಾಹಿತ್ಯದಿಂದ ತಿಳಿದುಬರುತ್ತದೆ. ಇದನ್ನು ಅವರ ಕಥೆಗಳಲ್ಲಿ ಪ್ರಧಾನವಾಗಿ ಗುರುತಿಸಬಹುದು.

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ಅನನ್ಯತೆ ಹಾಗೂ ಅದರ ಸಬಲೀಕರಣದ ಪ್ರಶ್ನೆಗಳು ಸದಾ ಸಮಾನಾಂತರ ಬೆಳವಣಿಗೆಯಲ್ಲಿ ಸಾಗುವುದು ತೀರ ಅಪರೂಪ. ಇದಕ್ಕೆ ಪೂರಕವಾಗಿ 'ಬುಗುರಿ' ಕಥೆ ನೋಡಬಹುದು. ದಲಿತರಿಗೆ ಬಿಡುಗಡೆ ಇಲ್ಲದಿರುವಿಕೆ, ಚಲುವನ ಅಪ್ಪ, ಚಿಕ್ಕಣ್ಣ ತನ್ನ ಬದುಕನ್ನು ಬಡಸ್ತರದಿಂದ ಪ್ರತಿಭಟಿಸುವುದರಿಂದ ವಿರೋಧಿಯಾಗುತ್ತಾನೆ. ಅಂದರೆ ಸಮಾಜ ಆತನನ್ನು ಒಂದು ಅಂತರದಿಂದ ಕಾಣುವ ಅಂಶ ಇಲ್ಲಿದೆ. ಆತನಿಗಿದ್ದ ಆತ್ಮ ವಿಶ್ವಾಸ ಆತನನ್ನು ಪ್ರಶ್ನೆಗೆ ಗುರಿಪಡಿಸುತ್ತದೆ. ಅಲ್ಲಿ ವರ್ಗ ತಾರತಮ್ಯವೂ ಇದೆ. ಅದೂ ಅದಕ್ಕೆ ಪೂರಕ ಎಂದರೆ ತಪ್ಪಾಗಲಾರದು. ಚಲುವನೂ ಬುಗುರಿ ಪಡೆಯುವಲ್ಲಿ ವಿಫಲನಾಗುತ್ತಾನೆ. ಈ ಕಥೆಯಲ್ಲಿ ಚಿಕ್ಕಣ್ಣ ತನ್ನತನವನ್ನು ಸ್ಥಾಪಿಸಲು ಹೊರಡುವನು.

'ಒಂದು ಹಳೆಚಡ್ಡಿ' ಕಥೆಯಲ್ಲೂ ನಾಗರಾಜ ತನ್ನನ್ನು ಆಧುನಿಕತೆಗೆ ತೆರೆದುಕೊಂಡರೂ ತನ್ನನ್ನು ಸಮಾಜದಲ್ಲಿ ಗುರುತಿಸಲಾಗದ ತಳಮಳಕ್ಕೆ ಒಳಗಾಗುತ್ತಾನೆ. ಇಲ್ಲೆಲ್ಲ ಮೂಲಭೂತ ಸೌಕರ್ಯದ ಕುಂದುಕೊರತೆ ಕಂಡುಬರುತ್ತದೆ. ದಲಿತ ಸಮುದಾಯದ ಬಿಕ್ಕಟ್ಟನ್ನು ಇಲ್ಲಿ ಗುರುತಿಸಬಹುದು.

'ಕುವೆಂಪು'ರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ತೆಗೆದುಕೊಂಡರೆ, ಅಲ್ಲಿ ಬರುವ ಗುತ್ತಿ ಕಾವೇರಿ ಚಿತ್ರಣವನ್ನು ನೋಡಿದರೆ, ಇಲ್ಲಿ ಕಾವೇರಿ ದಲಿತ ಹುಡುಗಿ ಅಲ್ಲ, ಇನ್ನೊಂದು ಕಡೆ ಹೊಲೆಯರ ಮಂಜ, ತಿಮ್ಮ ಸಿದ್ಧ ಬೈರ ವಾಲಗರ ಚಿತ್ರಣ, ಮತ್ತೊಂದು ಕಡೆ

---

೧೧ ಡಾ॥ ಎಂ.ನ.ಜವರಯ್ಯ : ದಲಿತ ಬಂಡಾಯ ಸಾಹಿತ್ಯ ಸಿದ್ಧಾಂತದ ನೆಲೆಗಳು, ಬಹುಜನ ಮಾಧ್ಯಮ ಕೇಂದ್ರ (ರಿ), ೨೦೦೮, ಪು.ಸಂ-೧೬,೧೭

ಸಣ್ಣಬೀರನ ಚಿತ್ರಣ ಮೊದಲಾದ ಪಾತ್ರಗಳು ಅಸಮಾನತೆಯ ಶೋಷಣೆಯ ವಿವಿಧ ಮುಖವನ್ನು ಚಿತ್ರಿಸುತ್ತದೆ. ಅಂದರೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ದಲಿತರ ಸ್ಥಾನಮಾನ ಹೇಗಿದೆ ಎಂಬುದನ್ನು ನೋಡಬಹುದು. ಅಲ್ಲದೆ 'ದಲಿತತ್ವ'ದ ಸ್ವರೂಪ ಇತರ ವರ್ಗಗಳೊಂದಿಗೆ ಇರಿಸಿದ ಸಂಬಂಧವನ್ನು ಗುರುತಿಸಬಹುದು. ಗುತ್ತಿ ಪೋಲೀಸಿಗೆ ಮಂಕುಬುದ್ದಿ ಎರಚುತ್ತಾನೆ. ಅಂದರೆ ತಳಸ್ತರದವರಿಗೆ ವ್ಯವಸ್ಥೆಯನ್ನು ನಿಭಾಯಿಸುವ ಚಾಣಾಕ್ಷತನ ಇರುವುದನ್ನು ಇದು ತೋರಿಸುತ್ತದೆ. 'ಕುಸುಮಬಾಲೆ'ಯ ಅಮಾಸನ ಪಾತ್ರ ಕೂಡ ಇಂಥದ್ದೇ ಆಗಿದೆ. ಇಲ್ಲಿ 'ದಲಿತತ್ವ' ಎನ್ನುವುದು ಸಾಮಾನ್ಯ ಗ್ರಹೀತಗಳಾಚೆಗೆ ವಿಸ್ತರಿಸುತ್ತದೆ. ಇದು ಬಲಿಪಶು ಅಥವಾ ಕುಗ್ಗಿ ಹೋದ ದಯನೀಯ ಪಾತ್ರಗಳಲ್ಲ. ಬದಲಿಗೆ, ಎಲ್ಲಾ ರೀತಿಯ ಶೋಷಣೆಯ ನಡುವೆಯೂ, ತನ್ನತನವನ್ನು ಕಾಪಾಡಿಕೊಳ್ಳುವ ಪಾತ್ರಗಳು. ಕುವೆಂಪು ನಾಟಕಗಳಾದ ಬೆರಳ್‌ಗೆ ಕೊರಳ್, ಜಲಗಾರ, ಶೂದ್ರ ತಪಸ್ವಿ.... ಇಲ್ಲಿ ಬರುವ ನಾಯಕರು ತಳಸ್ತರದ ವ್ಯಕ್ತಿಗಳಾಗಿದ್ದಾರೆ. ಅಂದರೆ ಶೋಷಿತರಾಗಿ ಕಂಡುಬರುವ ನಾಯಕರೆಲ್ಲಾ ಪ್ರತಿಭಾನ್ವಿತರೇ ಆಗಿದ್ದಾರೆ. ಮೊಗಳ್ಳಿಯವರ ಕಥೆಗಳಲ್ಲೂ ಮುಖ್ಯವಾಗಿ ಈ ಅಂಶವನ್ನು ಕಾಣಬಹುದು. 'ಭೂಮಿ' ಕಥೆಯಲ್ಲಿ ಬರುವ 'ದೊಂಬ'ನನ್ನು ಇದಕ್ಕೆ ಉದಾರಿಕರಿಸಬಹುದು.

ಕಾರಂತರು ಚೋಮನದುಡಿ ಮತ್ತು ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ಜಾತ್ಯಾತೀತ ಸಮಾಜ ನಿರ್ಮಿಸಲು ಪ್ರಯತ್ನಿಸುತ್ತಾರೆ. 'ದಲಿತರ ಜೀತದ ಬದುಕನ್ನು ತುಂಬ ದೂರದಲ್ಲಿ ಒರಟಾದ ತೆರೆಯನ್ನೂ ಎಳೆದು ಅದರ ನಿಜವಾದ ಮಣ್ಣಿನ ಬದುಕಿನ ದರ್ಶನವನ್ನೇ ಮರೆಮಾಡಿ ರಾಮ ಐತಾಳರ ಬದುಕಿನ ಗತ ವೈಭವವನ್ನೇ ಮತ್ತೆ ಮತ್ತೆ ಹೇಳುವುದು ಸೃಜನಶೀಲತೆಯ ನ್ಯಾಯವಲ್ಲ. ದಲಿತರ ಸಂಕಟವನ್ನು ಚೋಮನದುಡಿಯಲ್ಲಿ ಕಾರಂತರು ಯಶಸ್ವಿಯಾಗಿ ಸೃಜನಶೀಲ ಅಭಿನಯದಂತೆ ಮಾಡಿದ್ದರೂ ಅದಕ್ಕೆ ನಾವು ಮಾನವೀಯ ಅರ್ಥಗಳನ್ನು ಹುಡುಕಿಕೊಂಡು ಸಮಾಧಾನ ಪಟ್ಟುಕೊಂಡರೂ 'ಮರಳಿ ಮಣ್ಣಿಗೆ' ಕಾದಂಬರಿಯ ಸಂದರ್ಭದಲ್ಲಿ ವೈದಿಕ ಹುಸಿ ಮಣ್ಣಿನ ಸಂಬಂಧವನ್ನು ವೈಭವೀಕರಿಸುತ್ತ ಅದೇ ದಲಿತರ ಮಣ್ಣಿನ ವ್ಯವಸಾಯದ ಸಾವಯವ ಸಂಸ್ಕೃತಿಯನ್ನು ಬಚ್ಚಿಡುವ ಬರಹದ ಕ್ರಮ ನೋಡಿದರೆ ಸೃಜನಶೀಲತೆಯ ಅಸ್ಪೃಶ್ಯತೆಯು ಹೇಗೆ ಜಾತಿನಿಷ್ಠವಾದ, ಧರ್ಮಬದ್ಧವಾದ ತಾರತಮ್ಯವನ್ನು ಬೆಳೆಸುತ್ತದೆ ಎಂಬುದು ಈ ಕಾದಂಬರಿಯ ಮೂಲಕ ತಿಳಿಯುತ್ತದೆ'.[೧೨]

ಮೇಲಿನ ಬೇರೆ ಬೇರೆ ನಿದರ್ಶನಗಳನ್ನು ವೀಕ್ಷಿಸಿದರೆ 'ಮೊಗಳ್ಳಿಗಣೇಶ್'ರವರ ಕಥೆಗಳಲ್ಲಿ 'ದಲಿತತ್ವ'ದ ಚಿತ್ರಣ ಭಿನ್ನವಾಗಿ ಮೂಡಿಬಂದಿದೆ. ದಲಿತನ ಅಸಹಾಯಕವಾದ ಚಿತ್ರಣವನ್ನು ಮೊಗಳ್ಳಿಗಣೇಶ್‌ರವರು ಕೆಲವೊಂದು ಕಥೆಗಳಲ್ಲಿ ಅಲ್ಲಲ್ಲಿ ಚಿತ್ರಿಸುತ್ತಾ ಹೋಗುತ್ತಾರೆ. ಅವರ ಕೆಲವು ಕಥೆಗಳು ದಲಿತರ ಚಾರಿತ್ರಿಕ, ಸಾಂಸ್ಕೃತಿಕ ವಿವರಗಳನ್ನು ತೆರೆದಿಡುತ್ತವೆ. ಅಂತಹ ಕಥೆಗಳಲ್ಲಿ

---

೧೨ ಡಾ॥ ಮೊಗಳ್ಳಿ ಗಣೇಶ್ – ತಕರಾರು, ಪಲ್ಲವ ಪ್ರಕಾಶನ, ೨೦೦೮, ಪು.ಸಂ.೨೮

'ನನ್ನಜ್ಜನಿಗೊಂದಾಸೆಯಿತ್ತು', 'ತೋಪು' ಮುಖ್ಯವಾಗುತ್ತವೆ. 'ನನ್ನಜ್ಜನಿಗೊಂದಾಸೆಯಿತ್ತು' ಕಥೆ ತಾತನ ತಣಿಗೆಯೊಂದಿಗೆ ದಲಿತರ ಬದುಕು ತೆರೆದುಕೊಳ್ಳುತ್ತದೆ. ಈ ತಣಿಗೆ ಗೌಡರ ಮನೆಗೆ ಸಾಲಕ್ಕೆ ಅಡವಿಟ್ಟಾಗಲೇ ದಲಿತರ ಬದುಕು ದಾರಿದ್ರ್ಯಕ್ಕೆ ಒಳಗಾಗಿತ್ತೆಂದು ತಣಿಗೆಯ ಜೀವನ ಶ್ರದ್ಧೆ, ಮೌಲ್ಯಗಳ ಕಡೆ ನಮ್ಮ ಗಮನ ಸೆಳೆಯುತ್ತದೆ. ಮನೆ ಭಾಗವಾದ ಮೇಲೆ ಯಾವುದೇ ಕಾರಣಕ್ಕೆ ಗೌಡನ ಮನೆಯಲ್ಲಿ ಅಡವಿಟ್ಟು ಬಿಡಿಸಿಕೊಳ್ಳಲಾಗದೇ ನಂತರ ಗೌಡನ ಮನೆಯಲ್ಲಿ ಹಳೇ ಹಂಡೆ ತೂತಾಗಿದ್ದರಿಂದ ತಣಿಗೆಯನ್ನು ಕತ್ತರಿಸಿ ತೂತಾದ ಭಾಗಕ್ಕೆ ಜೋಡಿಸಿದ್ದರು. ತಾತ ತನ್ನ ಕೊನೆ ಆಸೆಯಾದ ತಣಿಗೆಯನ್ನು ಬಿಡಿಸಿ ತಂದು ಕೊಡುವೆಯಾ ಎಂದು ಕೇಳುವುದು: ಗೌಡನ ಮನೆಯಲ್ಲಿ ಅಡವಿಟ್ಟಿರುವ ನಿಮ್ಮ ಬದುಕನ್ನು ಬಿಡಿಸಿಕೊಂಡು ಬಂದು ಕೊಡಬಲ್ಲೆಯಾ ಎಂದು ಕೇಳುವಷ್ಟು ಧ್ವನಿಪೂರ್ಣವಾಗಿದೆ. ಆದರೆ ಆ ಬದುಕು ಗೌಡನ ದೌರ್ಜನ್ಯದ ಬೆಸುಗೆಯಾಗಿದೆ. ಹೀಗೆ ದಲಿತರ ಬದುಕಿನ ಸಮಸ್ಯೆಗಳನ್ನು ಕಥೆಗಾರರು ತಣಿಗೆ, ಹೇಲುಗುಂಡಿ, ಮಿಂಚುಳ, ಚಡ್ಡಿ ಮುಂತಾದವು ಪ್ರತಿಮೆಗಳಾಗಿ ಮೂಡಿಬಂದಿವೆ. ಅವು ದಲಿತರ ಬದುಕನ್ನು ಕನಸನ್ನು ಸರ್ವನಾಶ ಮಾಡಿದರೂ ದಲಿತರು ಮೌನ ತಾಳಿರುವುದೇ ಇಲ್ಲಿ ಕಂಡುಬರುವ ದಲಿತತ್ವದ ಚಿತ್ರಣವಾಗಿದೆ.

ದಲಿತ ಚಳುವಳಿಯನ್ನು ಸಂಘಟಿಸುತ್ತಾ ನಡೆದವರು ಅಸ್ಪೃಶ್ಯರು ತಮ್ಮನ್ನು ಮಾನವರನ್ನಾಗಿ ನಡೆಸಿಕೊಳ್ಳಬೇಕೆಂಬುದೊಂದೇ ದಲಿತರ ಚಳುವಳಿಯ ಏಕಮಾತ್ರ ಸಿದ್ಧಾಂತ, ಅವರ ಪ್ರತಿಭಟನೆಯ ಗುರಿ ಆಗಿತ್ತು. ಅವರನ್ನು ಮಾನವರಂತೆ ನಡೆಸಿಕೊಳ್ಳುವ ಸಾಮಾಜಿಕ ವ್ಯವಸ್ಥೆಯೆ ಇಲ್ಲವಾಗಿತ್ತು.

'ದೇವನೂರು ಮಹಾದೇವರ' 'ಒಡಲಾಳ' ಕಾದಂಬರಿಯಲ್ಲಿನ ಸಾಕವ್ವಳ ಚಿತ್ರಣ ಆಕೆಯು ಸಾಕಿದ ಕೋಳಿ ಊರಗೌಡರ ಪಾಲಾದಾಗ ಆತನ ಜೊತೆ ಪೋಲೀಸ್ ಕೈಜೋಡಿಸಿದ್ದನು. ಈ ಪ್ರಸಂಗದಲ್ಲಿ ಸಾಕವ್ವ ಮೇಲುಜಾತಿ ಮತ್ತು ಕಾನೂನಿನ ಕೈಯಿಂದ ಶೋಷಿತಳಾಗುತ್ತಿದ್ದರೂ ಅದರ ಅರಿವು ಕೂಡ ಅವಳಿಗೆ ಉಂಟಾಗುವುದಿಲ್ಲ. ಹೀಗೆ ದಲಿತರ ಮೇಲೆ ಉಂಟಾಗುವ ದೌರ್ಜನ್ಯ ಮತ್ತು ಶೋಷಣೆಗಳು ಅನೇಕ ಸಂದರ್ಭದಲ್ಲಿ ಅಮೂರ್ತಸ್ವರೂಪದ್ದಾಗಿರುತ್ತದೆ. ಮೂರ್ತ ಸ್ವರೂಪದ ಶೋಷಣೆಯೊಂದಿಗೆ ನೇರವಾಗಿ ಮುಖಾಮುಖಿಯಾಗಬಹುದು. ಆದರೆ ಅಮೂರ್ತ ಸ್ವರೂಪದ ಶೋಷಣೆಯನ್ನು ನಿರ್ವಹಿಸುವುದು ಸಾಧ್ಯವೇ ಇಲ್ಲ ಎನ್ನುವುದನ್ನು ಈ ಪಾತ್ರದ ಮೂಲಕ ತಿಳಿಯಬಹುದು. ಪ್ರತಿಭಟನೆಗೂ ಬೆಲೆ ಇಲ್ಲದ ಸ್ಥಿತಿ ಕಾಣಬಹುದು. ತನ್ನ ಆಸ್ತಿಯೇ ಕೋಳಿ ಎಂದು ಆಕೆ ಎಂದುಕೊಂಡರೂ ಅದು ಉಳಿಸಲಾಗದ ಆಕೆಯ ನೋವನ್ನು ನೋಡಬಹುದು. ರಕ್ಷಿಸಬೇಕಾದ ಕೆಳಜಾತಿ ಹಕ್ಕನ್ನು ಸರ್ಕಾರಿ ಅಧಿಕಾರಿಯೇ ದುರುಪಯೋಗ ಪಡಿಸುತ್ತಾನೆ.

ತಣಿಗೆ, ಚಡ್ಡಿ, ಹೇಲುಗುಂಡಿ ಮೊದಲಾದ ಕಥೆಗಳಲ್ಲಿ ದಲಿತರು ತಮ್ಮ ಕನಸನ್ನು, ಬದುಕನ್ನು ಅಡವಿಟ್ಟುಕೊಂಡಿದ್ದಾರೆ. ಕೆಲವು ಪಾತ್ರಗಳು ಬಲಿಪಶು ಆಗುವ ಇನ್ನು ಕೆಲವು ಕೆಲವು ಪಾತ್ರಗಳು ಬಲಿಪಶುತ್ವವನ್ನು ನಿಭಾಯಿಸುವಲ್ಲಿ ಯಶಸ್ವಿಯಾಗುವುದನ್ನು ನೋಡಬಹುದು ಆಮೂಲಕ ಜಾತೀಯ, ದೌರ್ಜನ್ಯವನ್ನು ಅವುಮೀರಿ ನಿಂತು ಬಿಡುತ್ತವೆ. ಬುಗುರಿ ಕಥೆಯಲ್ಲಿ ಚೆಲುವ ಕೊನೆಗೆ ತನಗೆ ಬುಗುರಿ ಬೇಡ ಎಂದು ಹೇಳುವ ಮಾತು ಆತನ ಸ್ವಾಭಿಮಾನ ಮತ್ತು ಅಸ್ಮಿತೆಯು ಸಂಪೂರ್ಣವಾಗಿ ಕಳೆದುಹೋಗುವುದರ ಸಂಕೇತವಾಗಿ ಗ್ರಹಿಸಬಹುದು. ಇದು 'ಮೊಗಳ್ಳಿಗಣೇಶ'ರವರ ಸಣ್ಣ ಕಥೆಗಳಲ್ಲಿ ನಾನು ಕಂಡುಕೊಂಡ 'ದಲಿತತ್ವ'ದ ಸ್ವರೂಪವಾಗಿದೆ.

'ಭೂಮಿ' ಕಥೆಯಲ್ಲಿ 'ದೊಂಬ' ತನಗೆ ಭೂಮಿ ಸಿಗದಿದ್ದಾಗ ನಿರಾಸಕ್ತನಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಚಿತ್ರಣ–ಇಲ್ಲಿ ಆತ ತನ್ನ ಕನಸನ್ನು ನನಸಾಗಿಸದೆ ಇರುವುದು. ಆತ ಒಬ್ಬ ಯಶಸ್ವಿ ವ್ಯಕ್ತಿಯಾಗಿ ಆತನ ದೊಂಬರಾಟದ ಮೂಲಕ ಕಂಡುಬಂದರೆ, ಆ ಊರಿನ ಒಡೆಯನು ಹಾಕಿದ ಸವಾಲಲ್ಲೂ ಯಶಸ್ವೀ ಆಗುತ್ತಾನೆ. ಆಗ ಒಡೆಯ ಕೊಡಬೇಕಾದ 'ಭೂಮಿ' ಸಿಗದಿದ್ದಾಗ ಆವೇಶಭರಿತನಾಗುತ್ತಾನೆ. ತನ್ನನ್ನೇ ಸರ್ವನಾಶಗೊಳಿಸುವ ಅವನ ಸ್ಥಿತಿ, ಆತನ ಕನಸು ಬಲಿಪಶುವಾಗಿದ್ದನ್ನು ಗುರುತಿಸಬಹುದು. ಇದು ಮೊಗಳ್ಳಿಗಣೇಶರವರ ಕಥೆಗಳಲ್ಲಿ ಮುಖ್ಯವಾಗಿ ಗುರುತಿಸಿಕೊಂಡ ಅಂಶ. ಯಾಕೆಂದರೆ ಈ ಕತೆಯಲ್ಲಿನ ದಲಿತತ್ವದ ಸ್ವರೂಪ ಭಿನ್ನವಾಗಿದೆ. ಯಶಸ್ವಿ ಪಾತ್ರಗಳು ಇನ್ನೇನು ಗುರಿ ತಲುಪಬೇಕೆನ್ನುವಷ್ಟರಲ್ಲಿ ಅದು ನನಸಾಗದ ಕೊನೆಯ ಕ್ಷಣ ಆಗಿರುತ್ತದೆ. ಇಲ್ಲಿ 'ಶೋಷಣೆ'ಯ ಮುಖವನ್ನು ಕಾಣಬಹುದು.

'ತೋಪು' ಕಥೆಯಲ್ಲಿ ಕಥೆಗಾರ ಕಾಲದೊಂದಿಗೆ ಮೆಲುಕು ಹಾಕುತ್ತಾ ಹಳೆಯ ನೆನಪುಗಳ, ನಂಬಿಕೆಗಳ, ಆಚರಣೆಗಳ, ಆಶಯಗಳನ್ನು ಉಳಿಸಿಕೊಳ್ಳುವ ಹಂಬಲವಾಗಿದೆ. ಅವುಗಳನ್ನು ದಲಿತರು ವಾಸ್ತವದಲ್ಲಿ ಅಳವಡಿಸಿಕೊಳ್ಳಬೇಕೆಂಬ ತುಡಿತವಿದೆ. ಹಳೆಕಾಲದ ಜೀವನ ಪ್ರೀತಿ ಕಥೆಗೆ ಮುಖ್ಯವಾಗಿದೆ. ಅಜ್ಜಿ ಹೇಳುವ ಬಿಲ್ವಪತ್ರೆ ಮರದ ಕಥೆ, ತಾತ ಹೇಳುತ್ತಿದ್ದ 'ಜೀವನ್‌ಗಾಡ್' ಬಗ್ಗೆ ಅಂದರೆ ನಾವು ಇವತ್ತು ಹೇಳುತ್ತಿರುವ ಸ್ಮಶಾನಕ್ಕೆ ಪೂರ್ವಿಕರು ಅದನ್ನು 'ಜೀವನ್‌ಗಾಡ್' ಎಂಬ ಜೀವನಮೌಲ್ಯಗಳ ನಂಬಿಕೆಗಳಲ್ಲಿ ಅದರ ಬಗ್ಗೆ ಸಂಬಂಧ ಇಟ್ಟುಕೊಂಡಿರುವ ಸಂಗತಿಯನ್ನು ಹೇಳುತ್ತಾರೆ. ದಲಿತರ ಜನಪರ ಕಥೆಗಳ ಆಶಯಗಳನ್ನು ದಲಿತರ ವಾಸ್ತವ ಬದುಕಿನ ಕಥೆಗಳಲ್ಲಿ ಅಳವಡಿಸಿಕೊಳ್ಳುವಂತಹ ತಂತ್ರವನ್ನು ಮೊಗಳ್ಳಿಯವರು ಕಥೆಯಲ್ಲಿ ಬಳಸುತ್ತಾರೆ. ಅಲ್ಲದೆ ಮೇಲೆ ತಿಳಿಸಿದ ಆಚರಣೆ, ನಂಬಿಕೆ ವಾಸ್ತವದಲ್ಲಿ ಅಳವಡಿಸಿಕೊಳ್ಳದ ಕಾರಣ ದಲಿತರಿಗೆ ಸರಿಯಾದ ಸ್ಥಾನಮಾನ ಇಲ್ಲದಿರುವಿಕೆ ಮತ್ತು ಅವರ ಅಸ್ಮಿತೆಯು ಸಂಪೂರ್ಣ ಕಳೆದುಹೋಗುವುದನ್ನು ನೋಡಬಹುದು. ಇದು ಈ ಕಥೆಯ ದಲಿತತ್ವದ ಸ್ವರೂಪವಾಗಿದೆ.

'ಮಿಂಚುಳ' ಕಥೆಯಲ್ಲಿ ಬರುವ ದಲಿತರಿಗೆ ಅವರದ್ದೇ ಆದ ಸಾಂಸ್ಕೃತಿಕ ಲೋಕಇದೆ. ಮೇಲುವರ್ಗದ ಮಾಸ್ತರ ಎನಿಸಿದವರು ದಲಿತರನ್ನು ಕೀಳಾಗಿ ನೋಡುವ ಚಿತ್ರಣ ಇದೆ. "ಈ ಅನಾಗರೀಕರನ್ನು ನಮ್ಮ ಶಾಲೆಯ ಪ್ರತಿನಿಧಿಗಳು ಎಂದು ಅವರಿಗೆ ಕಲಿಸುವುದಕ್ಕೆ ನನ್ನ ಒಪ್ಗೆ ಇಲ್ಲ......."[೧೩] ಇಲ್ಲಿ ತಳಸ್ತರದ ಮಕ್ಕಳು ಶಿಕ್ಷಿತರಾಗುವುದನ್ನು ಮೇಲ್‌ಸ್ತರದ ಸಮುದಾಯ ಒಪ್ಪದಿರುವುದು ಅದಕ್ಕೆ ವಿಜ್ಞಾನದ ಮೇಸ್ತ್ರು ದನಿಗೂಡಿಸಿದ್ದು, ಇದು ಕಥೆಗಾರರ ಬರವಣಿಗೆ ವೈಶಿಷ್ಟ್ಯತೆ ಎನ್ನಬಹುದು. ಕಾರಣ ತಳಸ್ತರದವರು ಶಿಕ್ಷಣದಿಂದ ವಂಚಿತರಾದವರು ಹಾಗೆಯೇ ಉಳಿದುಬಿಡಬೇಕು ಎನ್ನುವ ಮೇಲ್‌ಸ್ತರದ ಚಿಂತನೆ, ಸ್ವಾರ್ಥವೂ ಹೌದು. ಅಂದರೆ ದಲಿತರನ್ನು ಶೋಷಣೆಗೆ ಒಳಪಡಿಸುವ ಪ್ರಕ್ರಿಯೆ. ಇಲ್ಲಿ ಮೊಗಳ್ಳಿಗಣೇಶ್‌ರವರು ಮುಖ್ಯವಾಗಿ ತಳಸ್ತರದ ಜನರಿಗೆ ಆಗುವ ಅನ್ಯಾಯವನ್ನು ಬಿಂಬಿಸುತ್ತಾರೆ. ಇದು ಕಥೆಗಾರರ ಕಥೆಗಳಲ್ಲಿ ಕಂಡುಬರುವ ವಿಶೇಷತೆ. ಇದನ್ನೇ ನಾನು ಪ್ರಧಾನವಾಗಿ ಗುರುತಿಸುವುದು ಆದ್ದರಿಂದ ದಲಿತತ್ವ ಎನ್ನುವುದು ಪ್ರಧಾನವಾಗಿ ಶೋಷಣೆಗೆ ಒಳಗಾಗುವ ಸ್ಥಿತಿಯಾಗಿ ಇಲ್ಲಿ ಕಂಡುಬರುತ್ತದೆ.

ಈ ಕೆಳಕಂಡ ಕಥೆಗಳಲ್ಲಿ ದಲಿತರ ಕನಸು ಛಿದ್ರವಾಗುವ ವಸ್ತು ಪ್ರಧಾನವಾಗುತ್ತದೆ.

೧. ಭೂಮಿ ಕಥೆಯಲ್ಲಿ ದೊಂಬನ ಚಿತ್ರಣ

೨. ಮಿಂಚುಳ ಕಥೆಯಲ್ಲಿ ಮಿಣುಕನ ಚಿತ್ರಣ

೩. ಒಂದು ಹಳೆ ಚಡ್ಡಿ ಕಥೆಯಲ್ಲಿ ನಾಗರಾಜನ ಚಿತ್ರಣ '

೪. ಬುಗುರಿ ಕಥೆಯಲ್ಲಿ ಚೆಲುವನ ಚಿತ್ರಣ

೫. ಅಲ್ಲಿ ಆ ಆಳು ಈಗಲೂ ಕಥೆಯಲ್ಲಿ ಹೂವನ ಚಿತ್ರಣ.

೬. ನಾದದ ನದಿ ಕಥೆಯಲ್ಲಿ ಗೀಜುಗನ ಚಿತ್ರಣ

೭. ತಣಿಗೆ ಕಥೆಯಲ್ಲಿ ತಾತನ ಚಿತ್ರಣ

ಹೀಗೆ ಅನೇಕ ಪಾತ್ರಗಳನ್ನು ಗುರುತಿಸಬಹುದು. ಅಲ್ಲದೆ ಮೇಲಿನ ಬೇರೆ ಬೇರೆ ಕಥೆಯಲ್ಲಿ ದಲಿತರ ಕನಸು, ಛಿದ್ರವಾಗುವಿಕೆ, ಅವರ ಬದುಕಿನ ಅತಂತ್ರ ಸ್ಥಿತಿ, ಅವರಿಗಾಗುವ ನೋವು, ಅವಮಾನಗಳು ಕಂಡುಬರುತ್ತವೆ. ಇದು ನಾನು ಆ ಕಥೆಗಳಲ್ಲಿ ಕಂಡುಕೊಂಡ 'ದಲಿತತ್ವ' ಆಗಿದೆ.

ಮೊಗಳ್ಳಿಗಣೇಶ್ ರವರ 'ಭತ್ತ' ಕಥೆ ದಲಿತರ ಹಸಿವಿನ ಜೊತೆಗೆ ಜಾತಿ ಶೋಷಣೆಯನ್ನು ಪ್ರತಿಪಾದಿಸುತ್ತದೆ. ಹಸಿವಿನಿಂದ ಕಂಗಾಲಾದ ದಲಿತರು ಅನ್ನ ಉಂಡು ಬಹಳ ವರ್ಷಗಳಾಗಿ ತಮ್ಮ ದುಡಿಮೆಯ ಮೂಲಕ ಸಿಗಬಹುದಾದ ಭತ್ತದ ಕನಸಿಗಾಗಿ ಕಾಯುತ್ತಾರೆ. ಅಲ್ಪಪ್ರಮಾಣದ ಕಳ್ಳತನದಲ್ಲಿ ಸಂಪಾದಿಸುವ ಪ್ರಯತ್ನ ಮಾಡುವುದು ಅವರ ದಾರಿದ್ರ್ಯದ ಸ್ಥಿತಿಗೆ ಪ್ರತೀಕವಾಗಿದೆ. ಮೇಲ್ಜಾತಿಯರ ಜಾತಿ ಶೋಷಣೆ ಇದೆ. ಜಿಲ್ಲಾಧಿಕಾರಿ ಎಸಗುವ ದೌರ್ಜನ್ಯದಲ್ಲೂ ಆತ

---

೧೩. ಮೊಗಳ್ಳಿ ಗಣೇಶ್ : ಮೊಗಳ್ಳಿ ಕಥೆಗಳು, ಸಪ್ನ ಬುಕ್‌ಹೌಸ್, ೨೦೦೮, ಪು.ಸಂ.೧೩೦

ಮೇಲುಜಾತಿ ಮೌಲ್ಯಗಳನ್ನು ಪ್ರದರ್ಶಿಸುತ್ತಿರುತ್ತಾರೆ. ಆದರೆ ಇಲ್ಲಿ ದೌರ್ಜನ್ಯಕ್ಕೆ ಮತ್ತು ಶೋಷಣೆಗೆ ದೇಶರಕ್ಷಣೆ ಎಂಬ ಹೆಸರು ಇಡಲಾಗುತ್ತಿದೆ. ಹೀಗೆ ಮೇಲುಜಾತಿಯವರ ದೌರ್ಜನ್ಯವನ್ನು ಎಂದರೆ ಅನ್ಯಾಯವನ್ನು ಪರಿಭಾಷೆಯಲ್ಲಿ ವಿವರಿಸುವ ಪ್ರಯತ್ನ ಸಫಲವಾಗಿದೆ. ಜಿಲ್ಲಾಧಿಕಾರಿ ಇದನ್ನು ದೇಶರಕ್ಷಣೆಯಾಗಿ ಕಾಣುವುದು ವ್ಯವಸ್ಥೆಯ ವ್ಯಂಗ್ಯವಾಗಿದೆ. ಈ ಕಥೆಯಲ್ಲಿ ಬರುವ ಮುಖ್ಯವಾಗಿ ದಲಿತರಿಗಾಗುವ ಅಸಮಾನತೆ ಅನ್ಯಾಯ ಶೋಷಣೆ, ಸರ್ಕಾರಿ ವ್ಯಕ್ತಿಗಳಿಂದಲೇ ರಕ್ಷಣೆ ಇಲ್ಲ. 'ದೇವನೂರರ' 'ಒಡಲಾಳ' ಕಾದಂಬರಿಯ ಸಾಕವ್ವನಿಗೆ ಪೊಲೀಸ್ ನ್ಯಾಯ ಕೊಡಿಸಿಲ್ಲವಾದರೆ ಈ ಕಥೆಯಲ್ಲಿ ತಹಸೀಲ್ದಾರ್ ನ್ಯಾಯ ಕೊಡಿಸಿಲ್ಲ. ಮೊಗಳ್ಳಿಗಣೇಶ್‌ರವರ ಕಥಾಸಾಹಿತ್ಯ ಮತ್ತು ದೇವನೂರರವರ ಕಥಾ ಸಾಹಿತ್ಯದಲ್ಲಿ 'ದಲಿತತ್ವ'ದ ಸಾಮ್ಯತೆ ಕಂಡುಬರುತ್ತದೆ. ಆದರೆ ಮೊಗಳ್ಳಿ ಗಣೇಶ್‌ರವರ ವಿಶೇಷತೆ ಎಂದರೆ ಈ ಕಥೆಯಲ್ಲಿ ಇಡೀ ದಲಿತ ಸಮುದಾಯಕ್ಕೆ ಹಸಿವಿನ ಕೊರತೆ ಏನೆಂಬುದನ್ನು ಚಿತ್ರಿಸಿರುವುದಾಗಿದೆ.

'ಅಲ್ಲಿ ಆ ಆಳು ಈಗಲೂ' ಕಥೆಯಲ್ಲಿ ತಳಸಮುದಾಯ ಮಕ್ಕಳ ಮಾತು, ಅಳುವಿಗೆ ಬೆಲೆ ಇಲ್ಲದ ಸ್ಥಿತಿ, ಮಕ್ಕಳ ಕಷ್ಟ ಸುಖ ವಿಚಾರಿಸದ ರೀತಿಯನ್ನು ನಾವು ಕಾಣಬಹುದು. ಇಲ್ಲಿ ಮಕ್ಕಳ ನೋವಿನ ಚಿತ್ರಣ, ಅಸಹಾಯಕತೆಯನ್ನು ಕಾಣಬಹುದು. "ಯಾವ ಸುಕುಕ್ಕೆ ನಿನ್ನೆತ್ತುದ್ನೋ....."[೧೪] ಮಗುವಿನ ಕುತ್ತಿಗೆ ಹಿಡಿದು ಬೈಯ್ಯುವ ಪ್ರಸಂಗ, ಮನಕರಗದ ತಂದೆಯ ವರ್ತನೆ. ಈ ಕಥೆಯಲ್ಲಿ ತಳ ಸಮುದಾಯದಲ್ಲಿ ಮಕ್ಕಳ ಅಸ್ತಿತ್ವವನ್ನು ಕಸಿದುಕೊಳ್ಳುವ ತಂದೆ ತಾಯಿ ಚಿತ್ರಣ ವ್ಯಕ್ತವಾಗುತ್ತದೆ.

'ಬುಗುರಿ' ಕಥೆ ದಲಿತರ ಬದುಕಿನ ಬವಣೆ, ಸಿಟ್ಟು, ಆಕ್ರೋಶ, ಅಸಹಾಯಕತೆ, ಶೋಷಣೆಯನ್ನು ಒಟ್ಟೊಟ್ಟಿಗೆ ಚಿತ್ರಿಸುವ ಕಥೆ. ದಲಿತರ ಬದುಕನ್ನು ಸ್ವತಃ ದಲಿತರೆ ಕಟ್ಟಿಕೊಂಡ ರೀತಿ ಒಂದಾದರೆ, ವ್ಯವಸ್ಥೆ ಕಟ್ಟಿಕೊಟ್ಟ ಶೋಷಣೆ ಬದುಕನ್ನು ಕಾಣಬಹುದು. ಇವೆರಡರ ಮಧ್ಯೆ ದಲಿತರ ಬದುಕು ಇದೆ. ಹೇಲುಗುಂಡಿ ಈ ಕಥೆಯಲ್ಲಿ ಬರುವ ಒಂದು ಸಂಕೇತವಾಗುತ್ತದೆ. ಅದು ವಾಸ್ತವವಾಗಿ ದಲಿತರ ನಿರ್ಲಕ್ಷಿತ, ಅಸಹ್ಯಕರ ಬದುಕನ್ನು ಸಂಕೇತಿಸುತ್ತದೆ. ದಲಿತರ ಬದುಕು ಕಥೆಯ ಸಂಕೇತದಲ್ಲಿ ಹೇಲುಗುಂಡಿಯೇ ಆಗಿದೆ. ಅದರಿಂದ ದಲಿತರಿಗೆ ಬಿಡುಗಡೆ ಇಲ್ಲ. ಚೆಲುವನ ಆಡುವ ಬುಗುರಿ ಹೇಲುಗುಂಡಿಯಲ್ಲಿ ಬಿದ್ದು ಹೋಗುವ ಪ್ರಸಂಗದಿಂದ ಕತೆ ಆರಂಭವಾಗುತ್ತದೆ. ಅಲ್ಲಿಂದ ಅದನ್ನು ಬಿಡಿಸಿಕೊಳ್ಳಬೇಕೆಂಬ ಚಡಪಡಿಕೆ ಇದೆ. ಗುಂಜಾರಯ್ಯನ ಮಗ ಹೇಲುಗುಂಡಿಗೆ ಬಿದ್ದು ಮೈ ಕೈಯೆಲ್ಲಾ ಮೆತ್ತಿಕೊಂಡಾಗ ಅತ್ಯಂತ ರೇಜಿಗೆಯಿಂದ ಬೈದುಕೊಳ್ಳುತ್ತಾರೆ. ಹೀಗೆ ದಲಿತರ ಬದುಕು ಒಂದು ಚುಟಕದಂತೆ ಚಿತ್ರಿತವಾಗುತ್ತದೆ. ಈ ಕಥೆಯಲ್ಲಿ ಚೆಲುವನ ಕನಸು, ಅಪ್ಪ ಚಿಕ್ಕಣ್ಣನ ಪ್ರತಿಭಟನೆ ಇವೆರಡೂ ಯಶಸ್ಸು ಹೊಂದದೆ ನಾಶವಾಗುತ್ತದೆ. ಅಂದರೆ ದಲಿತರ ಆಸೆ, ಯಶಸ್ಸು, ಬುಗುರಿ ಕನಸು ಇವೆಲ್ಲಾ ನಾಶಗೊಳ್ಳುವುದನ್ನು ನೋಡಬಹುದು.

---

೧೪ ಡಾ॥ ಮೊಗಳ್ಳಿ ಗಣೇಶ್ : ಮೊಗಳ್ಳಿ ಕಥೆಗಳು, ಸಪ್ನ ಬುಕ್‌ಹೌಸ್, ೨೦೦೮, ಪು.ಸಂ.೧೦

'ಮೊಗಳ್ಳಿಗಣೇಶ'ರವರ 'ಭೂಮಿ' ಕಥೆಯಲ್ಲಿ ದೊಂಬ ಭೂಮಿಗಾಗಿ ಪರಿತಪಿಸಿ ಕೊನೆಗೆ ಸಾವನ್ನಪ್ಪುತ್ತಾನೆ. ಶಿವರಾಮಕಾರಂತರ 'ಚೋಮನದುಡಿ' ಕಾದಂಬರಿಯಲ್ಲಿ ಚೋಮನ ಕನಸು ಕನಸಾಗಿ ಉಳಿಯುತ್ತದೆ. 'ಭೂಮಿ' ಕಥೆಯಲ್ಲಿನ ದೊಂಬನಿಗೂ ಚೋಮನಿಗೂ ತುಂಬಾ ವ್ಯತ್ಯಾಸವಿದೆ. ಕಾರಣ ದಲಿತ ಕಥೆಗಾರ ಚಿತ್ರಿಸಿದ ದಲಿತನಿಗೂ ವೈದಿಕ ಸಾಹಿತಿ ಚಿತ್ರಿಸಿದ ದಲಿತನಿಗೂ ಅಜಗಜಾಂತರವಿದೆ. ಯಾಕೆಂದರೆ ಮೊಗಳ್ಳಿಗಣೇಶರವರ ಪ್ರಕಾರ ಕಾರಂತರು ದಲಿತಾನುಭವದ ಆಳಕ್ಕೆ ಇಳಿಯಲಾರರು ಎಂದ ಮಾತ್ರಕ್ಕೆ ಅವರ ಸಾಹಿತ್ಯದ ಮಾನವೀಯ ಸಂಬಂಧಗಳನ್ನು ಉಪೇಕ್ಷಿಸಬೇಕಾದ್ದಿಲ್ಲ. ಸಾಹಿತ್ಯ ಪರಂಪರೆಯು ನಿರಂತರವಾಗಿ ಒಂದು ತಲೆಮಾರಿನ ಪ್ರಜ್ಞೆಯಿಂದ ಮತ್ತೊಂದು ತಲೆಮಾರಿನ ವಿವೇಕದಲ್ಲಿ ವಿಸ್ತರಿಸಿಕೊಳ್ಳುತ್ತಲೇ ಇರುತ್ತದೆ. ಕಾರಂತರು ರೂಪಿಸುವ ಚೋಮ ಬೆಳೆಯುವುದು ಹೀಗೆಯೇ"[೧೫]. ನನ್ನ ಪ್ರಕಾರ ಕಾರಂತರು ಚಿತ್ರಿಸಿದ ಚೋಮನೂ ಒಬ್ಬ ಅಸಹಾಯಕ ಕನಸನ್ನು ನನಸಾಗಿಸಿದ ವ್ಯಕ್ತಿ. ಅವನೂ ಒಬ್ಬ ದುರಂತ ಪಾತ್ರದ ವ್ಯಕ್ತಿಯಾಗಿ ಮೂಡಿಬರುತ್ತಾನೆ. ಒಂದು ತುಂಡು ಭೂಮಿಗೋಸ್ಕರ ಹಗಲಿರುಳೂ ದುಡಿಯುತ್ತಾನೆ. ಅದು ಕನಸಾಗೇ ಉಳಿಯುತ್ತದೆ.

'ಕುವೆಂಪು'ರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ತೆಗೆದುಕೊಂಡರೆ ಅಲ್ಲಿ ಬರುವ ಕಲ್ಲೆಗೌಡರು ತಿಮ್ಮಿ ಸಂಬಂಧವಾಗಿ ಸಣ್ಣ ಬೀರನನ್ನು ಕಟ್ಟಿ ಹೊಡೆಸುವ ಪ್ರಸಂಗ ಹಲವಾರು ದೃಷ್ಟಿಗಳಿಂದ ಮಹತ್ತರ ಎನಿಸುತ್ತದೆ. ಭೂ ಮಾಲೀಕನೊಬ್ಬ ಜೀತದಾಳಿನ ಮೇಲೆ ನಡೆಸುವ ಹಲ್ಲೆ ಅಮಾನುಷ ರೀತಿಯಲ್ಲಿ ಇದೆ. ಇನ್ನೊಂದು ಪ್ರಸಂಗ ನೋಡುವುದಾದರೆ ಕಾವೇರಿ ಗುತ್ತಿ ಸಂಬಂಧ ಅಸಂಭವ. ಕಾರಣ ಮೇಲ್ಜಾತಿಯ ಹೆಣ್ಣೊಬ್ಬಳು ದಲಿತ ಹುಡುಗನೊಬ್ಬನನ್ನು ನೋಡುವಾಗ ನಿಸರ್ಗ ವಿರೋಧ, ಅಸ್ವಾಭಾವಿಕ. ಅದೇ ಬ್ರಾಹ್ಮಣ ಹೆಣ್ಣೊಬ್ಬಳು ಗೌಡರ ಹುಡುಗನನ್ನು ನೋಡುವಾಗ ಅದು ಅಸ್ವಾಭಾವಿಕ, ಅಸಾಧ್ಯ ಏಕಿಲ್ಲ? ಇಲ್ಲಿ ಕುವೆಂಪುರವರು ದಲಿತ ಜೀವನ ಚಿತ್ರಣಕ್ಕೆ ಅಥೆಂಟಿಸಿಟಿಯನ್ನೂ, ಸಮತೋಲನವನ್ನೂ ತಂದುಕೊಡದೆ ಹೋಗುತ್ತಾರೆ. ಕಾರಣ ಅವರಲ್ಲಿನ ಮಿತಿಗಳು, ವರ್ಗ ಹಿತಾಸಕ್ತಿಗಳು ಎನ್ನಬಹುದು. ಅಂದರೆ ದಲಿತರು ದಲಿತರ ಕುರಿತು ಬಿಂಬಿಸುವಷ್ಟು ಸಮಂಜಸವಾಗಿ ಉಳಿದ ಸಾಹಿತಿಗಳು ಬಿಂಬಿಸುವುದಿಲ್ಲ ಎಂದು ಬಿ.ಕೃಷ್ಣಪ್ಪನವರ ಆಲೋಚನೆಯಾಗಿದೆ."[೧೬] ಭೂಮಾಲೀಕರು ಅಸ್ಪೃಶ್ಯರ ದೇಹ ಮತ್ತು ಬದುಕು ಸಂಪೂರ್ಣವಾಗಿ ತಮಗೆ ಸೇರಿದ್ದು ಎಂದು ಭಾವಿಸುವ ವ್ಯಂಗ್ಯವನ್ನು ಇದು ಚಿತ್ರಿಸುತ್ತದೆ.

---

೧೫ ಮೊಗಳ್ಳಿಗಣೇಶ್ – ದಲಿತ ಕಥನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು.ಸಂ-೧೬

೧೬ ಡಾ॥ ಅರವಿಂದ ಮಾಲಗತ್ತಿ – ದಲಿತ ಮಾರ್ಗ (ಸಂ) ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೨, ಪು.ಸಂ-೩೨೦,೩೨೧

'ಅನಂತಮೂರ್ತಿ'ಯವರ 'ಸಂಸ್ಕಾರ' ಕಾದಂಬರಿಯಲ್ಲಿ ಬ್ರಾಹ್ಮಣರಿಂದ ಶೂದ್ರ ಹೆಣ್ಣುಗಳು ಲೈಂಗಿಕ ಶೋಷಣೆ ಹೊಂದಿರುವುದನ್ನು ಕಾಣಬಹುದು. 'ಶೋಷಣೆ' ಎನ್ನುವುದು ಕೆಳಸ್ತರದವರಿಗೆ ಯಾವ ರೀತಿ ಎನ್ನುವುದನ್ನು ನೋಡಬಹುದು.

ದೇವನೂರವರ 'ಮಾರಿಕೊಂಡವರು' ಕಥೆಯ ಬೀರ ಸಮಾಜದ ಶೋಷಣೆಗೆ ಒಳಪಟ್ಟ ದಲಿತ ವರ್ಗಕ್ಕೆ ಸೇರಿದ ವ್ಯಕ್ತಿ. 'ಮೂಡಲಸೀಮೇಲಿ ಕೊಲೆಗಿಲೆ ಮುಂತಾಗಿ', 'ಅಮಾಸ' ಕಥೆಯಲ್ಲಿ ದೀನ ದಲಿತರ, ಸಮಾಜದ ಶೋಷಣೆಗೆ ಒಳಗಾದ ಚಿತ್ರಣ ಇದೆ. ಊರಿನ ಗೌಡರ ಅಡಿಯಾಳಾಗಿ ಬದುಕುವ ಚಿತ್ರಣವನ್ನು ಕಾಣಬಹುದು. 'ಡಾಂಬರು ಬಂದುದು' ಕಥೆಯಲ್ಲೂ ಊರಿನ ಗೌಡ ತನ್ನ ಅಧಿಕಾರ ಪ್ರದರ್ಶಿಸುತ್ತಾನೆ. ಪ್ರಶ್ನಿಸಿದ ಹೈಕಳಿಗೆ ಚೆನ್ನಾಗಿ ಶಿಕ್ಷೆ ಕೊಡಿಸುವುದು ಇಲ್ಲೆಲ್ಲ ಶೋಷಣೆಯ ವಿವಿಧ ಮುಖಗಳನ್ನು ಕಾಣಬಹುದು. ದಲಿತರಿಗಾಗುವ ಅನ್ಯಾಯ, ಅಸಮಾನತೆ ವ್ಯಕ್ತವಾಗುತ್ತಿದೆ. 'ಅಮಾಸ' ಕಥೆಯಲ್ಲಿ ಬರುವ ಅಮಾಸ ಒಬ್ಬ ಪ್ರತಿಭಾವಂತ ಆತನನ್ನು ಊರಗೌಡ ತನ್ನ ಕೆಲಸಕ್ಕೆ ಬಳಸುವ ರೀತಿ, ಕುರಿಯಯ್ಯ ಗೌಡರ ಸ್ವತ್ತಾಗುವ ರೀತಿ. ಇಲ್ಲೆಲ್ಲಾ ತಳಸ್ತರದ ಪ್ರತಿಭೆ ಶೋಷಣೆಗೆ ಒಳಗಾಗುತ್ತಿರುತ್ತದೆ. ಇವೆಲ್ಲಾ ದಲಿತತ್ವದ ರೂಪಗಳೂ ಹೌದು.

ತೇಜಸ್ವಿ ಚಿತ್ರಿಸಿದ 'ಅವನತಿ' ಕಥೆಯಲ್ಲಿನ ಸೂರಾಚಾರಿ ಚಿತ್ರಣ, ಗೌರಿ ಚಿತ್ರಣವನ್ನೂ ಇಲ್ಲಿ ಉದಾರೀಕರಿಸಬಹುದು. ಸೂರಾಚಾರಿ ಪ್ರತಿಭಾವಂತ, ಆತನ ಕಲೆ ಮಾರಾಟವಾದ ರೀತಿಯನ್ನು ಅಲ್ಲಿ ನೋಡಬಹುದು. ಕಲೆ, ಪ್ರತಿಭೆ, ಸೌಂದರ್ಯವು ಶ್ರೀಮಂತಿಕೆ ಎದುರು ಗೌಣ ಆಗುವ ಪ್ರಕ್ರಿಯೆ ಆಗಿದೆ ಎಂದರೆ ತಪ್ಪಾಗಲಾರದು.

ಮೇಲೆ ತಿಳಿಸಿದ ಕುವೆಂಪು, ತೇಜಸ್ವಿ, ಅನಂತಮೂರ್ತಿ, ದೇವನೂರವರ ಹೀಗೆ ಬೇರೆ ಬೇರೆ ಲೇಖಕರ ಕಥೆಯಲ್ಲಿನ ಚಿತ್ರಣವನ್ನು ನೋಡಿದಾಗ ಅಲ್ಲೂ ದಲಿತರ ಪ್ರತಿಭೆ, ಕನಸು, ಸೌಂದರ್ಯ, ಶೋಷಣೆಯಿಂದ ತನ್ನತನವನ್ನು ಕಳೆದುಕೊಳ್ಳುವಿಕೆ ಮುಂತಾದವು ಕಂಡುಬರುತ್ತದೆ. ಇದನ್ನು ಮೊಗಳ್ಳಿಗಣೇಶರವರ ಕಥೆಗಳಲ್ಲಿ ನೋಡಬಹುದು. ಹೀಗೆ ದಲಿತತ್ವದ ಸ್ವರೂಪದ ಸಾಮ್ಯತೆ ಇಲ್ಲೆಲ್ಲ ಕಂಡುಬರುತ್ತದೆ.

ಮೊಗಳ್ಳಿ ಗಣೇಶರವರ 'ಪಟೇಲ' ಕಥೆ ದಲಿತ ವಿದ್ಯಾವಂತ ಶಾಲಾ ಹೆಡ್ ಮಾಸ್ಟರ್ ಕರ್ತವ್ಯ ಪ್ರಜ್ಞೆಯಲ್ಲಿ ದಲಿತ ಹುಡುಗನ ಕ್ರೀಡಾ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಿ ಸಂಘಟಿಸುವ ಕಲೆಗಾರಿಕೆ ಚೆನ್ನಾಗಿದೆ. ಆಂದ್ರಪ್ರದೇಶದಿಂದ ಬಂದಿರುವ ಹರಿಜನಕೇರಿಯ ಶಾಲಾ ಹೆಡ್‌ಮಾಸ್ಟರರು ಇಲ್ಲಿಯ ಶಾಲೆಯ ಹರಿಜನ ಹುಡುಗರ ಕಬ್ಬಡಿ ಕ್ರೀಡಾ ಪ್ರತಿಭೆ ಕಂಡು ಪ್ರೋತಾಹಿಸಿ ಅವರನ್ನು ಬ್ರಾಹ್ಮಣ ಜಾತಿಯೆಂದು ಸುಳ್ಳು ಹೇಳಿಕೊಂಡು ಅದನ್ನು ಸಾಧಿಸಿಕೊಳ್ಳಲು

ರೂಪಿಸಿಕೊಂಡಿರುವುದು. ಆತನ ದಲಿತ ಪ್ರಜ್ಞೆಗೆ ಸಾಕ್ಷಿಯಾಗಿದೆ. ಇಲ್ಲಿ ಮೇಲ್ಜಾತಿಯ ವ್ಯವಸ್ಥೆಯ ವಿರುದ್ಧ ಪ್ರತಿತಂತ್ರಗಾರಿಕೆ ಆಗುತ್ತದೆ. ಒಟ್ಟಾಗಿ ನೋಡಿದಾಗ ಮೊಗಳ್ಳಿಗಣೇಶರವರ ಕಥಾಸಾಹಿತ್ಯದ 'ದಲಿತತ್ವ' ಸ್ವರೂಪ ಭಿನ್ನ ಎಂದೇ ಮೇಲಿನ ಹಲವು ಕಥೆ, ಪಾತ್ರ, ನಿದರ್ಶನಗಳಿಂದ ತಿಳಿದುಬರುತ್ತದೆ. ಇದೇ ನನ್ನ ಅಧ್ಯಯನ ಪ್ರಧಾನವಾದ ಮುಖ್ಯ ಉದ್ದೇಶವೂ ಹೌದು.

ಒಟ್ಟಿನಲ್ಲಿ ಮೊಗಳ್ಳಿಗಣೇಶರವರ ಕಥಾ ಸಾಹಿತ್ಯದ ವಿಶಿಷ್ಟತೆ ಏನು ಹಾಗೂ ಅವರ ಕಥೆಗಳಲ್ಲಿ ದಲಿತತ್ವ ಸ್ವರೂಪ ಹೇಗೆ ಮೂಡಿಬಂದಿದೆ ಎಂಬುದನ್ನು ಈ ಅಧ್ಯಾಯವು ಗುರುತಿಸಲು ಪ್ರಯತ್ನಿಸಿದೆ. ಅವುಗಳನ್ನು ಹೀಗೆ ಸಂಕ್ಷಿಪ್ತವಾಗಿ ಪಟ್ಟಿ ಮಾಡಬಹುದಾಗಿದೆ.

೧. ದಲಿತರನ್ನು ಸದಾ ಶೋಷಣೆಗೆ ಒಳಪಡಿಸುವುದು ಮತ್ತು ಶಿಕ್ಷಿತ ಲೋಕದಿಂದ ವಂಚಿತರಾದ ಅವರು ಶಿಕ್ಷಣ ಪಡೆಯಬಾರದು ಎನ್ನುವ ಮೇಲ್‌ಸ್ತರದ ಹುನ್ನಾರ ಇವರ ಕಥೆಗಳಲ್ಲಿ ಕಂಡುಬರುತ್ತದೆ. ಇಲ್ಲಿ ದಲಿತರ ಅವಮಾನ, ನೋವು, ಅಸಹಾಯಕತೆಯನ್ನು ಗುರುತಿಸಲಾಗಿದೆ. ಒಟ್ಟಾರೆ ಮೊಗಳ್ಳಿಗಣೇಶರವರ ಕಥೆಗಳಲ್ಲಿ ದಲಿತತ್ವದ ಸ್ವರೂಪ ಇವೆಲ್ಲಾ ವ್ಯಕ್ತವಾಗುತ್ತದೆ.

೨. ಸಾಮಾಜಿಕ ಅಸ್ಮಿತೆಯನ್ನು ಕಳೆದುಕೊಳ್ಳುವುದರ ಜೊತೆಗೆ, ದಲಿತರ ಕನಸು, ಪ್ರತಿಭೆ ಛಿದ್ರವಾಗುವಿಕೆ ಹಾಗೂ ನಿರಂತರವಾಗಿ ನೋವಿಗೊಳಗಾಗುವ ಅವರ ಬದುಕು ಕಂಡುಬರುತ್ತದೆ. ಮುಖ್ಯವಾಗಿ ಒಬ್ಬ ದಲಿತ ತನ್ನ ಸೃಜನಾತ್ಮಕವಾದ ಬೆಳವಣಿಗೆಗೆ ಕಾರಣಕರ್ತನಾಗಬಾರದು ಎನ್ನುವ ಅಂಶ ಸಮಾಜದ ಮೇಲ್‌ಸ್ತರದ ಜನರ ಯೋಚನೆಯಾಗಿರುವುದು ವ್ಯಕ್ತವಾಗುತ್ತದೆ.

೩. ಮೊಗಳ್ಳಿಗಣೇಶರವರು ತಮ್ಮ ಕಥೆಗಳಲ್ಲಿ ತಳ ಸಮುದಾಯದವರ ಕನಸು ನನಸಾಗದಿರುವ ಬೇರೆ ಬೇರೆ ನಿದರ್ಶನಗಳನ್ನು ಚಿತ್ರಿಸಿರುವುದನ್ನು ಕಾಣಬಹುದು. ಪ್ರತಿಭಾವಂತ ದಲಿತರು ಅವಕಾಶಗಳಿಂದ ವಂಚಿತರಾಗುವ ಅನೇಕ ವಿವರಗಳು ಮೇಲ್ಜಾತಿಯವರಿಗೆ ಅಡಿಯಾಳಾಗಿ ಬದುಕುವ ಚಿತ್ರಣ ವ್ಯಕ್ತವಾಗುತ್ತದೆ.

೪. ಮುಖ್ಯ ವಾಹಿನಿಯಲ್ಲಿ ಕಾಣಿಸದ ದಲಿತರ ಬದುಕಿನ ಕ್ರಮಗಳು, ಅನುಭವಗಳು, ಮುಖ್ಯವಾಹಿನಿಯ ಬದುಕಿನ ಕ್ರಮಕ್ಕಿಂತ, ಅನುಭವಕ್ಕಿಂತ ಭಿನ್ನವಾಗಿರುವಂತವು. ಮೊಗಳ್ಳಿಗಣೇಶರವರ ಕಥಾಸಾಹಿತ್ಯ ಈ ರೀತಿಯ ದಲಿತರ ಬದುಕಿನ ಸಾಮಾಜಿಕ ವಿವರಗಳ ಅನೇಕ ಆಯಾಮಗಳನ್ನು ಕಟ್ಟಿಕೊಡುತ್ತದೆ. ಇದು ಕನ್ನಡದ ಸಾಂಸ್ಕೃತಿಕ ವಲಯಕ್ಕೆ ಒಂದು ಹೊಸ ಅನುಭವವನ್ನು ಪರಿಚಯಿಸುತ್ತದೆ. ಈ ಅನುಭವದ ವಿಭಿನ್ನ ಆಯಾಮಗಳು ವ್ಯಕ್ತವಾಗುತ್ತದೆ.

ಅಧ್ಯಾಯ – ೩

ಕಥೆಗಳಲ್ಲಿ ಕಂಡುಬರುವ ಅಧಿಕಾರ ಮತ್ತು ಯಾಜಮಾನಿಕೆಯ ರಚನೆಗಳು

ಈ ಅಧ್ಯಾಯದ ಪ್ರಮುಖ ಉದ್ದೇಶ ಏನೆಂದರೆ ಮೊಗಳ್ಳಿಗಣೇಶರವರ ಕಥೆಗಳಲ್ಲಿ ಅಧಿಕಾರ ಮತ್ತು ಯಾಜಮಾನಿಕೆಯು ದಲಿತ ಸಮುದಾಯಗಳೊಂದಿಗೆ ಯಾವ ರೀತಿಯಾದ ಸಂಬಂಧಗಳನ್ನು ಸ್ಥಾಪಿಸಿಕೊಂಡಿದೆ ಎಂಬುದನ್ನು ಪರಿಶೀಲಿಸುವುದಾಗಿದೆ.

ಆಧುನಿಕ ಪೂರ್ವ ಕಾಲದಲ್ಲಿ ರಾಜಕೀಯ ಎಂದರೆ ರಾಜ್ಯ ಮತ್ತು ಸರಕಾರಗಳ ಅಧ್ಯಯನವೆಂದು ತಿಳಿಯಲಾಗಿತ್ತು. ರಾಜಕೀಯವು ಅಧಿಕಾರದ ಸೃಷ್ಟಿ, ಚಲಾವಣೆ, ವಿಸ್ತರಣೆ, ಮನಃಸ್ಥಿತಿ ಅದರ ಮೂಲ ಹಾಗೂ ಪರಿಣಾಮ ಮತ್ತು ಅದರ ವ್ಯಾಪ್ತಿಯ ಬಗ್ಗೆ ಕಾಳಜಿಯನ್ನು ಹೊಂದಿರುವುದಾಗಿತ್ತು. ರಾಜ್ಯಶಾಸ್ತ್ರವು ಇವುಗಳನ್ನು ಅಧಿಕಾರ ಸಿದ್ಧಾಂತದ ಅಡಿಯಲ್ಲಿ ವಿಶ್ಲೇಷಿಸುತ್ತ ಬಂದಿದೆ. ಪುರಾತನ ಗ್ರೀಕ್ ರಾಜಕೀಯ ಚಿಂತನೆಯಲ್ಲೇ ಅಧಿಕಾರ ಎಂಬ ಪದದ ಬಳಕೆಯನ್ನು ನಾವು ಕಾಣುತ್ತೇವೆ. ಗ್ರೀಕ್ ರಾಜಕೀಯ ಚಿಂತಕರಾದ ಸಾಕ್ರಟೀಸ್, ಪ್ಲೇಟೋ ಮತ್ತು ಅರಿಸ್ಟಾಟಲ್ ಮೊದಲಾದ ಚಿಂತಕರು ಅಧಿಕಾರ, ವಿಧಿಬದ್ಧ ಅಧಿಕಾರ, ಆಳ್ವಿಕೆ ಮೊದಲಾದ ಪದಗಳನ್ನು ತಮ್ಮ ಚಿಂತನೆಯಲ್ಲಿ ಬಳಸಿದ್ದಾರೆ. ಮಧ್ಯಯುಗದ ರಾಜಕೀಯ ಚಿಂತಕ ಮೆಕೆವೆಲಿಯು 'ಅಧಿಕಾರ ಸಿದ್ಧಾಂತವನ್ನು ಪ್ರತಿಪಾದಿಸಿದ್ದು, ಈ ತನ್ನ ದಿ ಪ್ರಿನ್ಸ್ ಗ್ರಂಥದಲ್ಲಿ ರಾಜನಾದವನು ಅತಿಶ್ರೇಷ್ಟವಾದ ಶಕ್ತಿ ಅಥವಾ ಅಧಿಕಾರವನ್ನು ಹೊಂದಿರಬೇಕೆಂಬುದನ್ನು ಪ್ರಸ್ತಾಪಿಸಿದ್ದಾನೆ. ಈತನ ಪ್ರಕಾರ ಅಧಿಕಾರವೆನ್ನುವುದು ಪ್ರಭುತ್ವ, ಯಾಜಮಾನ್ಯ (ಹೆಜೆಮಾನಿ) ಹಿಂಸೆ ಮತ್ತು ಸರ್ವಾಧಿಕಾರ ಇವುಗಳ ಸಂಬಂಧಗಳಿಂದ ರೂಪುಗೊಂಡಿದ್ದು, ಒಂದು ದೇಶದ ಜನರ ಮೇಲೆ ಮತ್ತೊಂದು ದೇಶದ ಜನರ ಸರ್ವಾಧಿಕಾರವನ್ನು "ಹೆಜೆಮಾನಿ" ಎಂದು ಈತ ಕರೆಯುತ್ತಾನೆ. ಅಂದರೆ ಸಾಮಾನ್ಯವಾಗಿ ಅಧಿಕಾರವು ಪ್ರಬಲರು ದುರ್ಬಲರ ಇಚ್ಛೆ ಅಥವಾ ಅಪೇಕ್ಷೆಗೆ ವಿರುದ್ಧವಾಗಿ ತನ್ನ ಇಚ್ಛೆಯನ್ನು ಹೇರುವ ಶಕ್ತಿಯೇ ಆಗಿದೆ. ಅಂದರೆ ಮೆಕೆವೆಲ್ಲಿಯ ದಿ ಪ್ರಿನ್ಸ್ ಪುಸ್ತಕವು ಏಕಚಕ್ರಾಧಿಪತ್ಯ ಮತ್ತು ನಿರಂಕುಶ ಪ್ರಭುತ್ವಗಳನ್ನು ಎತ್ತಿ ಹಿಡಿಯುತ್ತದೆ ಎಂದು ಪ್ರೊ.ಹೆಚ್.ಆರ್.ದಾಸೇಗೌಡರ್ ಅಭಿಪ್ರಾಯಿಸುತ್ತಾರೆ."[೧]

ಅಧಿಕಾರದ ವ್ಯಾಖ್ಯಾನ, ಸ್ವರೂಪ :

'ಅಧಿಕಾರ' ಎಂಬ ಪದ ಇಂಗ್ಲೀಷ್‌ನ 'ಪವರ್' ಪದದ ಅನುವಾದವಾಗಿದೆ. ವೆಬ್‌ಸ್ಟರ್ ಇಂಗ್ಲೀಷ್ ನಿಘಂಟಿನ ಪ್ರಕಾರ, ಅಧಿಕಾರ ಎಂಬ ಪದಕ್ಕೆ ಶಕ್ತಿ, ಸಾಮರ್ಥ್ಯ, ಪ್ರಭುತ್ವ, ಆಳ್ವಿಕೆ, ಆಡಳಿತ, ಬೇರೆಯವರ ಮೇಲೆ ನಿಯಂತ್ರಣ ಹೊಂದಿರುವುದು. ಏನಾದರೂ ಮಾಡುವ ಸಾಮರ್ಥ್ಯ ಹೊಂದಿರುವುದು ಕಾನೂನು ಅಥವಾ ಶಾಸನಬದ್ಧ ಅಧಿಪತ್ಯ ಹೊಂದಿರುವುದು

---

[೧] ಡಾ॥ ಟಿ.ವೆಂಕಟೇಶಮೂರ್ತಿ – ಕನ್ನಡ ನಾಟಕ ಯಾಜಮಾನ್ಯ ಸಂಕಥನ, ಅಧ್ಯಯನ ಮಂಡಲ, ೨೦೦೯, ಪು-ಸಂ-೯

ಎಂಬ ಅರ್ಥ ವಿವರಣೆಗಳು ಸಿಗುತ್ತವೆ. ಚೇಂಬರ್ಸ್ ಡಿಕ್ಷನರಿಯ ಪ್ರಕಾರ ಭೌತಿಕ, ಮಾನಸಿಕ, ಆಧ್ಯಾತ್ಮಿಕ, ಕಾನೂನು ಇತ್ಯಾದಿಗಳ ಸನ್ನಿವೇಶದಲ್ಲಿ ಏನನ್ನಾದರೂ ಮಾಡುವ ಸಾಮರ್ಥ್ಯ ಅಥವಾ ಎಂತಹುದೇ ಪರಿಣಾಮವನ್ನುಂಟು ಮಾಡುವ ಸಾಮರ್ಥ್ಯವೇ ಅಧಿಕಾರ."[೨]

ಆಧುನಿಕ ರಾಜಕೀಯ ಚಿಂತಕರು ಅಧಿಕಾರ ಕುರಿತು – 'ಕೆ.ಜೆ.ಸುರೇಶ್' ಅವರ ಪುಸ್ತಕದಲ್ಲಿ ಉಲ್ಲೇಖಿಸಿರುವ ಕೆಲವು ವ್ಯಾಖ್ಯಾನಗಳು ಹೀಗಿವೆ : ಡೇವಿಡ್ ಈಸ್ಟನ್‌ನ ಪ್ರಕಾರ : "ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ಮತ್ತೊಬ್ಬ ವ್ಯಕ್ತಿ ಅಥವಾ ಮತ್ತೊಂದು ಗುಂಪಿನ ಮೇಲೆ ತನ್ನ ಗುರಿಸಾಧನೆಗಾಗಿ ನಿರ್ದೇಶನ ನೀಡುವ ಕ್ರಿಯಾತ್ಮಕ ಚಟುವಟಿಕೆಯೇ ಅಧಿಕಾರ", ಮಾರ್ಗಂಥೋ – "ಅಧಿಕಾರ ಎನ್ನುವುದು ಅದನ್ನು ಚಲಾಯಿಸುವವರ ಹಾಗೂ ಅಧಿಕಾರದ ವ್ಯಾಪ್ತಿಗೆ ಒಳಪಡುವವರ ನಡುವಿನ ಮಾನಸಿಕ ಸಂಬಂಧವಾಗಿದೆ." ಎಂದು ವ್ಯಾಖ್ಯಾನಿಸುತ್ತಾರೆ. ಮ್ಯಾಕ್ಸ್‌ವೆಬರ್ ಗುರುತಿಸುವಂತೆ, "ಅಧಿಕಾರವೆಂದರೆ ಇತರರ ವರ್ತನೆಯನ್ನು ಅವರ ಪ್ರತಿರೋಧದ ನಡುವೆಯೂ ನಿಯಂತ್ರಿಸುವ ಸಾಮರ್ಥ್ಯ ಶಕ್ತಿಯೇ ಆಗಿದೆ." ಅಧಿಕಾರವೆನ್ನುವುದು "ಸಂಘರ್ಷ ಮತ್ತು ಸಹಕಾರಗಳಿಂದ ಕೂಡಿದ ಒಂದು ಆಟ" ಎಂದು "ಕೀತ್ ಡೌಡಿಂಗ್" ಕರೆದಿದ್ದಾನೆ (ಪವರ್, ೧೯೯೬, ಪು–೧೦) ಕೆಲವು ಉದಾರವಾದಿ, ಸಮತಾವಾದಿ ಮತು ಪ್ರಜಾಪ್ರಭುತ್ವವಾದಿಗಳು ರಾಜ್ಯದ ಅಧಿಕಾರ ಸಿದ್ಧಾಂತವನ್ನು ದಬ್ಬಾಳಿಕೆಯ, ಕ್ರೌರ್ಯದ, ಅಧಿಕಾರ ದುರುಪಯೋಗದ, ಭ್ರಷ್ಟಾಚಾರದ ಸಂಕೇತವೆಂದು ಟೀಕಿಸುತ್ತಾರೆ. ನಿರಂಕುಶಾಧಿಕಾರಿಗಳಾದ ಹಿಟ್ಲರ್, ಮುಸಲೋನಿ, ಮಾವೋ ಮೊದಲಾದವರು "ಅಧಿಕಾರ ತುಪಾಕಿಯಿಂದ ಉಗುಳುವಂತಹುದು ಎಂಬ ನಿಲುವಿಗೆ ತಲುಪುತ್ತದೆ. ಆದರೆ ಗಾಂಧೀಜಿ, ಟಾಲ್‌ಸ್ಟಾಯ್ ಮೊದಲಾದವರು ಅಧಿಕಾರ "ಜನರ ಪ್ರೀತಿ ವಿಶ್ವಾಸದಿಂದ ಉಗಮಗೊಳ್ಳುವಂತಹುದು" ಎಂದು ಗ್ರಹಿಸುತ್ತಾರೆ."[೩]

ಒಟ್ಟಿನಲ್ಲಿ ಅಧಿಕಾರದ ಕೆಲವು ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು ;

೧. ಅಧಿಕಾರ ಇತರರಿಂದ ಗೌರವಿಸಲ್ಪಡುವ ವಿಧೇಯತೆಗೆ ಸಂಬಂಧಿಸಿದ ಪರಿಕಲ್ಪನೆಯನ್ನು ಹೊಂದಿದೆ. ಖ್ಯಾತ ರಾಜ್ಯಶಾಸ್ತ್ರಜ್ಞ ರಾಬರ್ಟ್‌ದಾಲ್ ಅಧಿಕಾರ ಸಂಬಂಧೀ ಪರಿಕಲ್ಪನೆಗೆ ಪೂರಕವಾಗಿ ಇಡೀ ಸಮಾಜವನ್ನು ಎರಡು ಘಟಕಗಳಾಗಿ ಗುರುತಿಸಿದ್ದಾನೆ. ಒಂದು ಪ್ರತಿಸ್ಪಂದನ ಘಟಕಗಳು, ಎರಡು ನಿಯಂತ್ರಣ ಘಟಕಗಳು. ಈ ಎರಡು ಘಟಕಗಳ ನಡುವೆ ಒಂದಕ್ಕೊಂದು ಸಂಬಂಧವಿದ್ದು, ಒಂದು ಮತ್ತೊಂದರ ಮೇಲೆ ಅಧಿಕಾರ

[೨] ಕನ್ನಡ ವಿಶ್ವಕೋಶ – ಸಂಪುಟ–ಒಂದು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೬೯, ಪು.ಸಂ.೨೮೨

[೩] ಡಾ॥ ಟಿ.ವೆಂಕಟೇಶಮೂರ್ತಿ – ಕನ್ನಡ ನಾಟಕ ಯಾಜಮಾನ್ಯ ಸಂಕಥನ, ಅಧ್ಯಯನ ಮಂಡಲ, ೨೦೦೯, ಪು.ಸಂ–೧೩

ಚಲಾಯಿಸುತ್ತಿರುತ್ತದೆ. ಹಾಗೆಯೇ ಅಧಿಕಾರ ನಿಯಂತ್ರಣ ಘಟಕಗಳು ತನ್ನ ಅಧೀನ ಕೇಂದ್ರಗಳ ಮೇಲೆ ನಿಯಂತ್ರಣವನ್ನು ಅಥವಾ ವಿಧೇಯತೆಯನ್ನು ಪಡೆಯುತ್ತಿರುತ್ತವೆ.

೨. ಅಧಿಕಾರವು ಎರಡು ಅಲಗುಳ್ಳ ಖಡ್ಗ ಒಂದು ಕಡೆ ಆಜ್ಞೆಯನ್ನು ಹೊರಡಿಸುವ ಸಾಮರ್ಥ್ಯದಿಂದ ಕೂಡಿದ್ದರೆ ಮತ್ತೊಂದು ಕಡೆ ನಿಯಂತ್ರಣ, ನಿರ್ಬಂಧ ಹಾಗೂ ಬಲಪ್ರಯೋಗ ಮಾಡುವ ಶಕ್ತಿಯನ್ನು ಹೊಂದಿರುತ್ತದೆ.

೩. ಅಧಿಕಾರ ಚಲಾವಣೆ, ಚಲಾಯಿಸುವ ವ್ಯಕ್ತಿಯ ಸ್ಥಾನಮಾನ, ದಕ್ಷತೆ ಹಾಗೂ ಚುಂಬಕಶಕ್ತಿಯ ಗುಣಗಳನ್ನು ಅವಲಂಬಿಸಿರುತ್ತದೆ.

೪. 'ಪ್ರಭುತ್ವದ ಅಧಿಕಾರ ಸರ್ವವ್ಯಾಪ್ತಿಯಾದದ್ದು' ಎಂಬ ಗ್ರಹಿಕೆ 'ಫ್ಯೂಕೋ'ನದ್ದಾಗಿದೆ.

೫. ಜ್ಞಾನ, ಸಂಘಟನಾ ಶಕ್ತಿ, ಶಾಸನಬದ್ಧತೆ ಅಥವಾ ಕಾಯಿದೆ, ಸಂವಿಧಾನ, ಸಾಂಪ್ರದಾಯಿಕತೆ, ಅನುವಂಶಿಕತೆ, ನ್ಯಾಯಾಂಗ, ಜನತೆ, ಧರ್ಮ ದೇವರು, ಸಂಪತ್ತು ಮುಂತಾದವುಗಳೆಲ್ಲವೂ ಅಧಿಕಾರದ ಮೂಲಾಂಗಗಳೇ ಆಗಿವೆ."[೪]

ಫ್ಯೂಕೋನ ಅಧಿಕಾರದ ಸ್ವರೂಪ

'ಸಿ.ಎನ್.ರಾಮಚಂದ್ರನ್' ಅವರ ಪುಸ್ತಕದಲ್ಲಿರುವ 'ಫ್ಯೂಕೋ'ನ ಚಿಂತನೆಗಳನ್ನು ಹೀಗೆ ಸಂಗ್ರಹಿಸಬಹುದು. ಫ್ರೆಂಚ್ ತತ್ವಶಾಸ್ತ್ರಜ್ಞ 'ಫ್ಯೂಕೋ'ನ 'ಡಿಸ್‌ಕೋರ್ಸ್' ಪರಿಕಲ್ಪನೆಯು ಯಾವುದೇ ಸಮಾಜದಲ್ಲಿ ಯಾವುದೇ ಕಾಲದಲ್ಲಿ ಇರುವ ಅಧಿಕಾರದ ಸಂಬಂಧಗಳ ಸ್ವರೂಪವನ್ನು ಕುರಿತ ಚಿಂತನೆಯಾಗಿದೆ. "ಪರಿಕಲ್ಪನೆಗಳು, ವಿರೋಧಗಳು ಮತ್ತು ಸಂಕಥನಗಳ ಶ್ರೇಣೀಕರಣ ಇವುಗಳೆಲ್ಲವೂ ಸಾಮಾಜಿಕ ಅಧಿಕಾರದ ಸಂಬಂಧಗಳ ಸ್ವರೂಪವನ್ನು ವ್ಯಕ್ತಪಡಿಸುತ್ತವೆ. ಜ್ಞಾನ, ಸತ್ಯ, ಅಧಿಕಾರದ ಸಂಬಂಧಗಳ ಸ್ವರೂಪವನ್ನು ವ್ಯಕ್ತಪಡಿಸುತ್ತವೆ. 'ಜ್ಞಾನ', 'ಸತ್ಯ' ಎಂಬ ಸಂಗತಿಗಳೆಲ್ಲವೂ ಸಾಮಾಜಿಕ ಅಧಿಕಾರದ ವಿನ್ಯಾಸದಿಂದಲೇ ನಿರ್ಧಾರಗೊಳ್ಳುತ್ತವೆ. ಹುಚ್ಚುತನ ಅಪರಾಧ ಮತ್ತು ಲೈಂಗಿಕ ಅಂಶಗಳು ಕೂಡ ಸಮಾಜದಲ್ಲಿನ ಅಧಿಕಾರದ ವಿನ್ಯಾಸಕ್ಕೆ ಒಳಪಟ್ಟವರಾಗಿರುತ್ತವೆ. ಪ್ರಜೆಗಳ ಯೋಗಕ್ಷೇಮ ತನ್ನ ಕರ್ತವ್ಯವೆಂದು ನಂಬಿಸಿ ಅಧಿಕಾರವು ಆ ನಿಟ್ಟಿನಲ್ಲಿ ಅನೇಕ ಬಗೆಯ ಸಂಸ್ಥೆಗಳನ್ನು ನಿರ್ಮಿಸುತ್ತದೆ. ಈ ಎಲ್ಲಾ ಬೌದ್ಧಿಕ ಚಟುವಟಿಕೆಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಅಧಿಕಾರ ಮತ್ತು ನಿಯಂತ್ರಣವನ್ನಾಧರಿಸಿರುವ ರಾಜಕೀಯ ಸ್ವರೂಪದ್ದಾಗಿರುತ್ತವೆ" ಎಂಬುದು 'ಫ್ಯೂಕೋ'ನ ಪ್ರತಿಪಾದನೆಯಾಗಿದೆ.

---

[೪] ಡಾ॥ ಟಿ.ವೆಂಕಟೇಶಮೂರ್ತಿ – ಕನ್ನಡ ನಾಟಕ ಯಾಜಮಾನ್ಯ ಸಂಕಥನ, ಅಧ್ಯಯನ ಮಂಡಲ, ೨೦೦೯, ಪು.ಸಂ-೧೪

'ಫ್ಯೂಕೋ'ನ 'ಡಿಸ್‌ಕೋರ್ಸ್' ಪರಿಕಲ್ಪನೆಯನ್ನು ಸ್ಥೂಲವಾಗಿ "ಭಾಷೆ ಮತ್ತು ಸಾಮಾಜಿಕ ಸಂಸ್ಥೆಗಳ ನಡುವಿನ ಸಂಬಂಧ ಎಂದು ವ್ಯಾಖ್ಯಾನಿಸಬಹುದು"[೫] ಅಲ್ಲದೆ ಜ್ಞಾನದ ವಿಶಿಷ್ಟ ರೂಪಗಳನ್ನು ಮತ್ತು ಸಾಂಸ್ಥಿಕ ನಿಯಮ ನಿಬಂಧನೆಗಳನ್ನು ಗುರುತಿಸುವುದು. ಈ ಸಂದರ್ಭದಲ್ಲಿ 'ಸಾಂಸ್ಥಿಕ' ಪದವನ್ನು 'ಫ್ಯೂಕೋ' ವ್ಯಾಪಕಾರ್ಥದಲ್ಲಿ ಉಪಯೋಗಿಸುತ್ತಾನೆ. ಒಂದು ಜ್ಞಾನಕ್ಷೇತ್ರದ ಪ್ರಭಾವೀ, ವಿದ್ವಾಂಸರ ಸಮೂಹ, ಮಾನ್ಯತೆ ಗಳಿಸಿರುವ ಕೃತಿಗಳ ಹಾಗೂ ನಿಯತಕಾಲಿಕಗಳ ಸಮೂಹ, ಜ್ಞಾನ ಪ್ರಸಾರ ಕೇಂದ್ರಗಳಾದ ಶಾಲಾ-ಕಾಲೇಜು-ವಿಶ್ವವಿದ್ಯಾಲಯಗಳು ಮತ್ತು ಅಕಾಡೆಮಿಗಳು ಇವುಗಳನ್ನು ಪೋಷಿಸುವ ಸರಕಾರದ ಅಂಗಗಳು ಇವೆಲ್ಲವನ್ನೂ ಸಂಸ್ಥೆಗಳು ಅಥವಾ ಅಧಿಕಾರ ಕೇಂದ್ರಗಳು ಎಂದು 'ಫ್ಯೂಕೋ' ಕರೆಯುತ್ತಾನೆ."[೬] ಈ ಅಧಿಕಾರ ಕೇಂದ್ರಗಳ ಸಂಕಥನದ ನಿಯಂತ್ರಣ ಹಾಗೂ ಒತ್ತಡಗಳಿಲ್ಲದೆ ಯಾವ ಜ್ಞಾನವೂ ಜ್ಞಾನಮಾರ್ಗವೂ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ ಎಂಬುದು ಈತನ ವ್ಯಾಖ್ಯಾನವಾಗಿದೆ. ಆಯ್ಕೆ ಮತ್ತು ಪ್ರತ್ಯೇಕತೆಗಳ ಕ್ರಿಯಾಶೀಲತೆಯನ್ನು ಜ್ಞಾನದ ಸಂಕಥನಗಳು ನಿರ್ಧರಿಸುತ್ತವೆ. "ಬೌದ್ಧಿಕ ಪ್ರಭುತ್ವಕ್ಕೆ ಹೊರತಾದ ಸ್ವತಂತ್ರ ಅಸ್ತಿತ್ವ ವ್ಯಕ್ತಿಗಾಗಲೀ ಸಮೂಹಕ್ಕಾಗಲೀ ಇಲ್ಲ ಎಂಬುದನ್ನು ಜ್ಞಾನಾಧಾರಿತ ಅಧಿಕಾರ ಕೇಂದ್ರಗಳು ನಿರ್ದೇಶಿಸುತ್ತವೆ ಹಾಗೂ ನಿಯಂತ್ರಿಸುತ್ತವೆ ಎಂಬುದು 'ಫ್ಯೂಕೋ'ನ ಚಿಂತನೆಯಾಗಿದೆ. ಇದನ್ನೇ ಆತ 'ಡಿಸ್‌ಕೋರ್ಸ್' (ಸಂಕಥನ) ಎಂದು ಕರೆಯುತ್ತಾನೆ."[೭]

ಹೀಗೆ ವ್ಯವಸ್ಥಿತವಾಗಿ ಯಾವುದು ಭಾರತೀಯ ಸಂಸ್ಕೃತಿ, ಯಾವುದು ಅಲ್ಲ ಯಾವುದು ಸ್ಪೃಶ್ಯ ಯಾವುದು ಅಸ್ಪೃಶ್ಯ ಯಾವುದು ಜ್ಞಾನಾರ್ಜನೆಗೆ ಯೋಗ್ಯ, ಯಾವುದು ಅಲ್ಲ ಇವೇ ಮೊದಲಾದ ತೀರ್ಮಾನಗಳನ್ನು ಮಾಡುತ್ತಿರುತ್ತದೆ. ಈ ನಿರ್ಣಯಗಳ ಹಿಂದೆ ಧರ್ಮ, ಜಾತಿ, ಪುರೋಹಿತಶಾಹಿ, ಲಿಂಗ, ಕಾನೂನು, ಭಾಷೆ ಇತ್ಯಾದಿ ಅಧಿಕಾರ ಕೇಂದ್ರಗಳು ಕಾರ್ಯ ಮಾಡುತ್ತಿರುತ್ತವೆ ಎಂಬುದು ಫ್ಯೂಕೋನ ಗ್ರಹಿಕೆಯಾಗಿದೆ. ಕಾಲದಿಂದ ಕಾಲಕ್ಕೆ ಜ್ಞಾನ ಮತ್ತು ಸತ್ಯದ ಪರಿಕಲ್ಪನೆಗಳು ಭಿನ್ನವಾಗುತ್ತಾ ಹೋಗುತ್ತವೆ. ಹೀಗೆ ಯಾವುದು ಜ್ಞಾನ ಮತ್ತು ಯಾವುದು ಅಲ್ಲದೆ ಸತ್ಯವೇ ಎನ್ನುವುದನ್ನು ವ್ಯಾಖ್ಯಾನಿಸುವ ಕೆಲಸವನ್ನು ಅಧಿಕಾರ ಮಾಡುತ್ತಿರುತ್ತದೆ.

ಸಂಕ್ರಾಂತಿ ನಾಟಕಗಳಲ್ಲಿ ಅನುಲೋಮ ವಿವಾಹ ಪದ್ಧತಿಯ ವಿವರಣೆಯನ್ನು ನೋಡಬಹುದು. ಹೀಗೆ ಜಾತಿಯ ಚೌಕಟ್ಟನ್ನು ಉಲ್ಲಂಘಿಸಬಾರದು ಎನ್ನುವುದು ಒಂದು ನಿರ್ದಿಷ್ಟ ವರ್ಗದ ಅಧಿಕಾರದ ಸಿದ್ಧಾಂತವೇ ಆಗಿದೆ. ಆದರೆ ಇಂತಹ ಸಾಮಾಜಿಕ ಕಟ್ಟುಕಟ್ಟಳೆಗಳನ್ನು ಶೂದ್ರತಪಸ್ವಿ, ಬೆರಳ್‌ಗೆ ಕೊರಳ್ ನಾಟಕಗಳು ಪ್ರಶ್ನಿಸುತ್ತವೆ. ಹೀಗೆ ಪ್ರಶ್ನಿಸುವಲ್ಲಿ ಅಧಿಕಾರದ ರಚನೆಗಳನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವ ಕುವೆಂಪುರವರ ಸಮಾನತಾವಾದಿ ಮನೋಭಾವ ವ್ಯಕ್ತವಾಗುತ್ತದೆ.

---

[೫] ಡಾ॥ ಸಿ.ಎನ್.ರಾಮಚಂದ್ರನ್ – ವಸಾಹತೋತ್ತರ ಚಿಂತನೆ, ಅಂಕಿತ ಪುಸ್ತಕ, ೨೦೧೩, ಪು.ಸಂ-೨೫

[೬] ಅದೇ, ಪು.ಸಂ-೧೫

[೭] ಅದೇ, ಪು.ಸಂ-೧೬

ಆದರೆ ಮೊಗಳ್ಳಿ ಗಣೇಶರವರ ಕಥೆಗಳಲ್ಲಿ ಕಾಣುವ ಅಧಿಕಾರ ಎನ್ನುವುದು ಅವು ಕೇವಲ ಮೇಲುಜಾತಿಗೆ ಸೀಮಿತ ಅಲ್ಲ ಎಂಬುದನ್ನು ಕಾಣಬಹುದಾಗಿದೆ. ಇದು ನನ್ನ ಅಧ್ಯಯನದ ಪ್ರಧಾನವಾದ ಅಂಶವೂ ಅಗಿದೆ. ಯಾಕೆಂದರೆ ಅಧಿಕಾರ ಎನ್ನುವುದು ಎಲ್ಲಾ ವರ್ಗದ, ಎಲ್ಲಾ ಸಮುದಾಯದಲ್ಲೂ ವ್ಯಕ್ತವಾಗುತ್ತದೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ.

ಯಾಜಮಾನಿಕೆ (ಯಾಜಮಾನ್ಯ) / ಹೆಜಿಮಾನಿ

'ಯಾಜಮಾನ್ಯ' ಎಂಬ ಪರಿಕಲ್ಪನೆಯು ತನ್ನ ಶಕ್ತಿಮೂಲಕ ತನ್ನ ಪ್ರಾಬಲ್ಯ ಹಾಗೂ ನಿಯಂತ್ರಣಗಳನ್ನು ಪ್ರಕಟಿಸುತ್ತಿರುತ್ತದೆ. ಅಧೀನರು ಕೇವಲ ಆಳಿಸಿಕೊಳ್ಳಲು ಮಾತ್ರ ಯೋಗ್ಯರು ಎಂಬ ಧೋರಣೆಯಿಂದಾಗಿ, ಯಜಮಾನರು ಆಳ್ವಿಕೆ ಮಾಡಲು ಅರ್ಹರು ಎಂಬ ಗ್ರಹಿಕೆ ವ್ಯಾಪಿಸಿದ್ದನ್ನು ಗುರುತಿಸಬಹುದಾಗಿದೆ. ಈ ಪರಿಕಲ್ಪನೆ ತನ್ನ ಅಧೀನಕ್ಕೆ ಒಳಪಟ್ಟ ವ್ಯಕ್ತಿ ಮತ್ತು ಸಮುದಾಯವನ್ನು ನಿಯಂತ್ರಿಸುವುದರ ಜೊತೆಗೆ ತನ್ನ ಸಾಧನೆಯ ಗುರಿಯನ್ನು ತಲುಪುತ್ತದೆ. ಅಂದರೆ ಯಾಜಮಾನ್ಯ ರೂಪವನ್ನು ಅಲ್ಲಿ ತಳೆದು ತನ್ನದೇ ಆದ ಪ್ರಭಾವವನ್ನು ಬೀರುತ್ತದೆ. ಇಲ್ಲಿ ಯಾಜಮಾನಿಕೆ ಎನ್ನುವುದು ವ್ಯಕ್ತಿ, ಸಮುದಾಯ, ಸಂಘ-ಸಂಸ್ಥೆ, ಕುಟುಂಬ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಹೀಗೆ ಬೇರೆ ಬೇರೆ ಸ್ತರದಲ್ಲಿ ಪ್ರದರ್ಶಿತವಾಗುತ್ತದೆ. ಹೀಗೆ ಯಾಜಮಾನ್ಯ ಬೇರೆ ಬೇರೆ ಮುಖದಿಂದ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಕಥೆಗಳಲ್ಲಿ ಯಾಜಮಾನಿಕೆ ಹೇಗೆ ಚಿತ್ರಿತವಾಗಿದೆ ಎಂಬುದನ್ನು ಪರಿಶೀಲಿಸುವುದು ನನ್ನ ಪ್ರಧಾನವಾದ ಉದ್ದೇಶವಾಗಿದೆ.

ಪ್ರಸಿದ್ಧ ಮಾರ್ಕ್ಸ್‌ವಾದಿ ಹಾಗೂ ಸಾಂಸ್ಕೃತಿಕ ಚಿಂತಕ ಆಂಟೋನಿಯಾ ಗ್ರಾಮ್ಸಿ (೧೮೯೧-೧೯೩೭) ಮೊದಲಬಾರಿಗೆ 'ಯಾಜಮಾನ್ಯ' (ಹೆಜಿಮಾನಿ) ಎಂಬ ಪರಿಕಲ್ಪನೆಯನ್ನು ರೂಪಿಸಿದ. 'ಹೆಜಿಮಾನಿ' ಎಂಬ ಪದವನ್ನು 'ಸರ್ವಾಧಿಕಾರ' ಎಂಬ ವಿಶಾಲಾರ್ಥದಲ್ಲಿ ಬಳಸಿದ. ಈತನ ಪ್ರಕಾರ ಹೆಜಿಮಾನಿಗೆ ಪ್ರಾಬಲ್ಯ, ಅಧಿಕಾರ, ಸಾರ್ವಭೌಮತ್ವ ಮೊದಲಾದ ಅರ್ಥಗಳೂ ಇವೆ. "ಪ್ರಭುತ್ವ ಪೋಷಿತ ರಾಜಕೀಯ, ಸಾಮಾಜಿಕ, ಆರ್ಥಿಕ ಅಧಿಕಾರ ಕೇಂದ್ರಗಳು ಸಮಾಜದ ಮೇಲೆ ನೇರ ಹಿಡಿತ ಸಾಧಿಸಲು ಪ್ರಯತ್ನಿಸಿದವು. ಆದರೆ ಪ್ರಭುತ್ವವು ಜನಸಮುದಾಯದ ಸಂಸ್ಕೃತಿಯ ಒಳಸೂಕ್ಷ್ಮಗಳನ್ನು ಮತ್ತೊಂದು ರೀತಿಯಲ್ಲಿ ಪ್ರಭಾವಿಸಿತು. ಅಂದರೆ, ಪ್ರಭುತ್ವವು ಸಮಾಜದ ಬಾಹ್ಯ ವ್ಯಾಪಾರಗಳನ್ನು ಮಾತ್ರ ನಿಯಂತ್ರಿಸದೆ, ಅದು ಸಮಾಜದ ಆಂತರಿಕ ವ್ಯಾಪಾರಗಳನ್ನು ನಿಯಂತ್ರಿಸಲು ಯತ್ನಿಸುತ್ತದೆ. ಸಮಾಜ ವ್ಯವಹಾರದ ಬೇರೆ ಬೇರೆ ಅಂಗಗಳಾದ ಧರ್ಮ, ವಿಜ್ಞಾನ, ಶಿಕ್ಷಣ, ತಂತ್ರಜ್ಞಾನ, ನೈತಿಕತೆ, ಭಾವನಾಕ್ರಮಗಳು ಇವುಗಳ ಮೂಲಕ ತನ್ನ ಅಸ್ತಿತ್ವಕ್ಕೆ, ತನ್ನ ಕಾರ್ಯಚಟುವಟಿಕೆಗಳಿಗೆ ಪೂರಕವಾದ ನಡವಳಿಕೆಯನ್ನು ಉಂಟುಮಾಡುತ್ತದೆ. ಈ ಪರೋಕ್ಷ ಹಿಡಿತವನ್ನು ಅರ್ಥೈಸಿಕೊಳ್ಳಲು ಗ್ರಾಂಷಿಯ ಯಾಜಮಾನ್ಯ ಪರಿಕಲ್ಪನೆ ನೆರವಾಗುತ್ತದೆ. ಜನಾಂಗಿಕ ದ್ವೇಷ, ವರ್ಗ ಕಲ್ಪನೆ, ಖಚಿತ ಮಡಿ ಮೈಲಿಗೆಯ ಕಲ್ಪನೆ, ಶ್ರೇಣೀಕೃತ

ಸಮಾಜದ ಬಗ್ಗೆ ಆಸ್ಥೆ, ಲೈಂಗಿಕ ಪ್ರತ್ಯೇಕವಾದ, ಅಧಿಕಾರ ವ್ಯಾಮೋಹ ಹೀಗೆ ಹಲವು ಗುಣಗಳು ಯಾಜಮಾನ್ಯದ ಮುಖ್ಯ ಲಕ್ಷಣಗಳಾಗಿರುತ್ತವೆ. ಯಾಜಮಾನ್ಯ ಎನ್ನುವುದು ದೊಡ್ಡ ಅಧಿಕಾರ. ಅದು ಭೌತಿಕ ಜಗತ್ತಿನ ಕೇಂದ್ರಗಳ ಸ್ವಾಮ್ಯದಿಂದ ಹೊಮ್ಮುವಂಥದ್ದು. ಆದರೆ ಮುಖ್ಯಾಧಿಕಾರ ಎನ್ನುವುದು ಪ್ರಭುತ್ವ ಮತ್ತು ಸಂಪನ್ಮೂಲಗಳಿಂದ ಹುಟ್ಟಿ ನಂತರ ಇಡೀ ಸಮಾಜಕ್ಕೆ ವ್ಯಾಪಿಸುತ್ತದೆ. ಇದನ್ನೇ ಗ್ರಾಂಷಿ 'ಯಾಜಮಾನ್ಯ' ಎನ್ನುತ್ತಾನೆ. ಭಾರತದ ಆಳುವ ವರ್ಗಗಳ ಯಾಜಮಾನ್ಯ ಕುರಿತು ಲೋಹಿಯಾ ಅವರ ಚಿಂತನೆ ಹೀಗಿದೆ: "ಭಾರತದ ಆಳುವ ವರ್ಗಗಳ ಯಾಜಮಾನ್ಯತೆಯ ವಿಶಿಷ್ಟ ಲಕ್ಷಣಗಳೆಂದರೆ ಮೇಲುಜಾತಿ, ಇಂಗ್ಲೀಷ್ ಶಿಕ್ಷಣ ಮತ್ತು ಹಣ, ಫ್ಯೂಡಲ್, ಶ್ರೀಮಂತ ಹಾಗೂ ಜಾತಿ ಆಳ್ವಿಕೆಯ ಚಿರಪರಿಚಿತ ಸಾಧನಗಳ ಮೂಲಕ ಆಳುವ ವರ್ಗ ಯಾಜಮಾನ್ಯವನ್ನು ಸಾಧಿಸಿತು. ಇದರಿಂದ ಆಳುವ ವರ್ಗವು ತನ್ನ ಜನರಿಂದಲೇ ತನ್ನನ್ನು ಪ್ರತ್ಯೇಕಗೊಳಿಸಿಕೊಳ್ಳಲು ಸಾಧ್ಯವಾಯಿತು. ಜೊತೆಗೆ ಅದು ಜನಸಮೂಹವು ಈ ಪ್ರತ್ಯೇಕತೆಯನ್ನು ಸರಿಯಾದುದು ಹಾಗೂ ನ್ಯಾಯವಾದುದು ಎಂದು ತಂತಾವೇ ಒಪ್ಪಿಕೊಳ್ಳುವಂತೆಯೂ ಮಾಡಿಬಿಟ್ಟಿತು"[೮]

'ಅಧಿಕಾರ'ದ ಕುರಿತು 'ಮೊಗಳ್ಳಿಗಣೇಶ'ರವರ ಅಭಿಪ್ರಾಯ "ಡಾ.ಅಂಬೇಡ್ಕರ್ ಇಡೀ ದಲಿತಸಮುದಾಯದ ಸಬಲೀಕರಣಕ್ಕೆ ಪೂರಕವಾದ ಸಂವಿಧಾನಬದ್ಧ ಪರ್ಯಾಯಗಳು ರೂಪಿಸಿದರು. ಆದರೆ ಆಧುನಿಕ ರಾಜಕೀಯ ಪರಿಸರ ಹಾಗೂ ಅಧಿಕಾರದ ರಚನೆಯಲ್ಲಿ ಬಲಿಷ್ಠ ಸಮುದಾಯಗಳು ದಲಿತ ಸಮುದಾಯಗಳನ್ನು ನಿರ್ಣಾಯಕವಾಗಿ ಖರೀದಿಸುವ ಬಲವನ್ನು ಹೊಂದಿರುತ್ತದೆ. ಇದರಿಂದಾಗಿ ಸ್ವಾತಂತ್ರ್ಯವಿದ್ದೂ ದಲಿತರ ಸಮುದಾಯಗಳು ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಲೇ ಇರುತ್ತವೆ."[೯]

'ಒಂದು ಹಳೇ ಚಡ್ಡಿ' ಕಥೆಯಲ್ಲಿ ನಾಗರಾಜ ಸಿದ್ದಿಯನ್ನು ಮದುವೆ ಮನೆಯಲ್ಲಿ ಹೊಡೆಯುವ ಪ್ರಸಂಗ ಇದು ಹೆಣ್ಣಿನ ಮೇಲಿನ ಗಂಡು ತೋರಿಸುವ ಯಾಜಮಾನಿಕೆ ಮತ್ತು ಅಧಿಕಾರವನ್ನು ಬಿಂಬಿಸುತ್ತದೆ. ಅವಾಚ್ಯ ಪದಗಳಿಂದ ನಾಗರಾಜ ಹೆಂಡತಿಯನ್ನು ಬೈಯ್ಯುವುದು ಇದು ಆತ ತನ್ನ ಹೆಂಡತಿ ಮೇಲೆ ಅಧಿಕಾರವನ್ನು ಪ್ರದರ್ಶಿಸುತ್ತಾನೆ. ಮಗನನ್ನ ಹೊಡೆಯುವ ಪ್ರಸಂಗ, ನಾಗರಾಜ ಮೂರು ಮದುವೆ ಆದ ಆತನ ಸ್ಥಿತಿ. ಇಲ್ಲಿ ಆತ ತಾನೇ ಯಜಮಾನ, ಮನೆ ಯಜಮಾನ ಏನು ಮಾಡಿದರೂ ನಡೆಯುತ್ತದೆ ಎಂದು ಅರಿತಿದ್ದಾನೆ. ಪುರುಷ ಪ್ರಧಾನ ಸಮಾಜದ ಇನ್ನೊಂದು ಮುಖವನ್ನೂ ಈ ಕಥೆ ತೆರೆದಿಡುತ್ತದೆ. ಸೀನಿಯ ಅಪ್ಪ ನಾಗರಾಜ ಆಧುನಿಕತೆಯ ಪ್ರಭಾವಕ್ಕೊಳಗಾದವನು. ಆದ್ದರಿಂದ ತನ್ನ ಒಡೆತನದಲ್ಲಿ ನನ್ನ ಬದುಕು, ನನ್ನ ಸುತ್ತಲಿನ ಪರಿಸರ ಹೀಗೆನೇ ಇರಬೇಕೆಂದು ಬಯಸುತ್ತಾನೆ. ಇದೇ ಕಥಾವಸ್ತುವನ್ನು

---

[೮] ಡಾ। ಟಿ.ವೆಂಕಟೇಶಮೂರ್ತಿ – ಕನ್ನಡ ನಾಟಕ ಯಾಜಮಾನ್ಯ ಸಂಕಥನ, ಅಧ್ಯಯನ ಮಂಡಲ, ೨೦೦೯, ಪು.ಸಂ–೩೨,೩೩

[೯] ಡಾ। ಮೊಗಳ್ಳಿ ಗಣೇಶ್ – ದಲಿತ ಕಥನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯, ಪು.ಸಂ–೧೫೩

'ದೇವನೂರವರ' 'ಮೂಡಲಸೀಮೇಲಿ ಕೊಲೆಗಿಲೆ ಮುಂತಾಗಿ' ಅಲ್ಲೂ ಕಾಣಬಹುದು. ಅಲ್ಲಿ ಒಡೆಯನಾದ ಪಟೇಲನ ಅಧಿಕಾರ ರಂಗಪ್ಪನ ಮೇಲೆ ಆತನ ಮಗನ ಮೇಲೆ ಪ್ರದರ್ಶನ ನಡೆಯುತ್ತಿರುತ್ತದೆ. 'ದೇವನೂರರ' 'ಒಡಲಾಳ' ಕಾದಂಬರಿಯಲ್ಲೂ ಮೇಲ್ವರ್ಗದ ಅಧಿಕಾರಶಾಹಿ ವ್ಯವಸ್ಥೆಯ ಅಧಿಕಾರ ಸಾಕವ್ವಳು ಸಾಕಿದ ಕೋಳಿ ಮೇಲೆ ನಡೆಯುತ್ತದೆ. ಒಡೆಯನ ಕಣ್ಣು ಆ ಕೋಳಿ ಮೇಲೆ, ಆ ಕೋಳಿಯ ಸಾರಿನ ರುಚಿಯಾದ ಊಟದ ಮೇಲೆ ಉಂಟಾಗುತ್ತದೆ. ಇಲ್ಲಿ ಒಡೆಯನ, ಪೋಲೀಸಪ್ಪನ ದೌರ್ಜನ್ಯ ದಬ್ಬಾಳಿಕೆ ಚಿತ್ರಣಗೊಂಡಿದೆ. ಅಂದರೆ ತನ್ನ ಮಾತಿನಂತೆ ನಡೆಯಬೇಕು ತಾನೇ ಇಲ್ಲಿ ಹೇಳಿದ ಮಾತು ಅಂತಿಮ ಎಂಬ ನಿಲುವನ್ನು ತಾಳುವ ಚಿತ್ರಣ ಕಂಡುಬರುತ್ತದೆ.

'ಡಾಂಬರು ಬಂದುದು' ಕಥೆಯಲ್ಲೂ 'ದೇವನೂರರು' ಊರಿನ ಹೈಕಳಾದ ಶಂಬು, ಮಧುವಿನ ಮೂಲಕ ಪ್ರಶ್ನೆ ಕೇಳಿಸುವ ಪ್ರಸಂಗ. ಆಗ ಒಡೆಯ ರೌದ್ರಾವತಾರ ತಾಳುವ ಚಿತ್ರಣ ಇಲ್ಲೆಲ್ಲ ತನ್ನ ಅಧಿಕಾರವನ್ನು ತಳಸಮುದಾಯದ ಕೆಳವರ್ಗದ ಜನರ ಮೇಲೆ ಪ್ರದರ್ಶಿಸುವ ಅಂಶ ಕಂಡುಬರುತ್ತದೆ. 'ಮೊಗಳ್ಳಿ ಗಣೇಶ'ರವರ ಕಥೆಗಳಲ್ಲೂ ನಾನು ಈ ಅಂಶವನ್ನು ಪ್ರಧಾನವಾಗಿ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಮೊಗಳ್ಳಿಗಣೇಶರವರ 'ಬುಗುರಿ' ಕಥೆಯಲ್ಲಿ ಅಧಿಕಾರಶಾಹಿ ವ್ಯವಸ್ಥೆಯನ್ನು ನೋಡಿದರೆ ಚಲುವನ ಅಪ್ಪ ಚಿಕ್ಕಣ್ಣ ಊರಿಗೆ ಬಂದ ನಂತರ ಉಗ್ರನಾಗಿರುವುದು ಈಗಾಗಲೇ ಸ್ಥಾಪಿತವಾದ ವ್ಯವಸ್ಥೆಯೊಳಗೆಡೆನೇ ಇದ್ದು ಅಲ್ಲಿ ಆತ ತೋರುವ ಪ್ರತಿಭಟನೆಯಾಗಿದೆ. ಚಿಕ್ಕ ಹುಡುಗ ಆ ಬುಗುರಿಯನ್ನು ಹೇಲುಗುಂಡಿಗೆ ಎಸೆಯುತ್ತಾನೆ. ಮತ್ತೆ ಅವ್ವನ ಬಸಿರು ಸೇರಬೇಕೆನ್ನುವ ಬಯಕೆ ಆತನಿಗಾಗುತ್ತದೆ. ಚಲುವನೂ ಈ ಕ್ರೌರ್ಯದ ಜಗತ್ತಿನಿಂದ ತಾನು ಮುಕ್ತನಾಗಬೇಕೆಂದು ಬಯಸುತ್ತಾನೆ.

'ಜೀವ' ಕಥೆಯಲ್ಲಿ ಮುತ್ತಾತನಿಗಾದ ಅನ್ಯಾಯವನ್ನು ಗುರುತಿಸಬಹುದು. ಜಾತಿ ಹೆಸರಿನಲ್ಲಿ ಆ ಕೇರಿಯಲ್ಲಿನ ಗೌಡರ ಸಮುದಾಯ ಹೇಗೆ ತನ್ನ ಯಜಮಾನಿಕೆಯನ್ನು ಮೆರೆಯಿತು ಎಂಬುದನ್ನು ನೋಡಬಹುದು. ಯಾರಿಗೂ ಕಾಣದಂತೆ ಆ ಭಿಕ್ಷುಕನಾದ ಮುತ್ತಾತ ಗೌಡರ ಮಗಳೊಂದಿಗೆ ಗುಹೆಯೊಳಗೆ ಸಂಸಾರ ಹೂಡಿದರೂ ಕ್ರಮೇಣ ಆ ಊರಿನ ಸಮುದಾಯ ಅವರಿಬ್ಬರನ್ನು ಹೇಗೆ ನಾಶಮಾಡಲು ಹೊರಟಿತು ಎಂಬುದನ್ನು ನೋಡಬಹುದು. ಇಲ್ಲಿ ಮುಖ್ಯವಾಗಿ 'ಯಜಮಾನಿಕೆ' ಪ್ರದರ್ಶಿತವಾಗುವುದನ್ನು ನೋಡಬಹುದು. ಇಲ್ಲಿ ಮೇಲ್‌ಸ್ತರದ ಸಮುದಾಯದವರಿಗೆ ಪ್ರತಿಷ್ಠೆ, ಗೌರವನೇ ಮುಖ್ಯವಾಗಿರುತ್ತದೆ. ಹೊರತು ಮಾನವೀಯತೆ ಅಲ್ಲ ಎನ್ನುವುದನ್ನು ಕಾಣಬಹುದು.

ದೇವನೂರವರ "ಒಡಲಾಳ" ಕಥೆಯಲ್ಲಿ ಅಸ್ಪೃಶ್ಯತೆಯ ಕಾರಣಕ್ಕಾಗಿ ಒಂದು ಚಳುವಳಿಯೇ ನಡೆದು ಹೋದ ಘಟನೆಯನ್ನು ಸಾಕವ್ವನ ಕಿರಿಯ ಮಗ ಗುರುತಿಸಿದ್ದು ಬಹಳ ಹೆಮ್ಮೆಯಿಂದಲೇ ತನ್ನ ಮನೆಯವರೆಗೆ ಹೇಳಿಕೊಂಡು ಖುಷಿಪಡುತ್ತಾನೆ. ಸಾಕವ್ವನ ಮಗ ಕಾಳಣ್ಣ, ಕುಟುಂಬದ ಹಸಿದ ಹೊಟ್ಟೆಗೆ ಕಡಲೆಕಾಯಿ ತಂದಾಗ ಅದರ ಸಂತೋಷದಲ್ಲಿ ಹಸಿವು ನೀಗಿಸಿಕೊಂಡ ಸಾಕವ್ವನ ಕುಟುಂಬ ಲೋಕಾಭಿರಾಮವಾಗಿ ಬದುಕಿನ ಸಂತೋಷದ ದಿನಗಳನ್ನು ಕುರಿತು ಚರ್ಚೆ ಮಾಡುತ್ತಾರೆ. ಆಗ ಮಾರಿಗುಡಿಯಿಂದ ಬಂದ ಗುರುಸಿದ್ಧ ತನ್ನ ಪ್ರಜ್ಞೆಯ ಪರಿಸರದಲ್ಲಿ ಕಂಡ ತಗಡೂರಿನಲ್ಲಿ ದಲಿತ ಚಳುವಳಿ ನಡೆಸಿದ ಹೋಟೇಲ್ ಪ್ರವೇಶದ ಪ್ರಸಂಗಗಳನ್ನು ಹೇಳುತ್ತಾನೆ."[೧೦] ಇಲ್ಲೂ ದಲಿತರು ಅಸ್ಪೃಶ್ಯತೆಯ ಅವಮಾನ ಎದುರಿಸುವುದನ್ನು ಕಾಣಬಹುದು. ಮೇಲ್ವರ್ಗ ಕೆಳವರ್ಗದವರನ್ನು ನೋಡುತ್ತಿದ್ದ ವ್ಯವಸ್ಥೆಯ ಕುರಿತು ಅವಮಾನಿಸುತ್ತಿದ್ದ ರೀತಿಯನ್ನು ದೇವನೂರವರು ಚಿತ್ರಿಸಿದ್ದಾರೆ. ಇಲ್ಲಿ ಅಧಿಕಾರಶಾಹಿ ವ್ಯವಸ್ಥೆ ಬಿಂಬಿತವಾಗುತ್ತದೆ.

ಇವತ್ತಿನ ಬಹುಪಾಲು ಜಾತಿಗಳು ಅಧಿಕಾರ ಕೇಂದ್ರಿತವಾಗಿವೆಯೇ ಹೊರತು ಕೇವಲ ಹಳೆಯ ಜಾತಿ ಸಾಂಪ್ರದಾಯಿಕ ಜಾತಿಕಟ್ಟುಗಳಾಗಿ ಮಾತ್ರ ಉಳಿದಿಲ್ಲ. ಇದಕ್ಕೆ ಪೂರಕವೆಂಬಂತೆ ಹುಲಿ ಇಲಿ ರೂಪಕದ ಕಥೆಯನ್ನು ವಿವರಿಸುವ ಮೊಗಳ್ಳಿ ಗಣೇಶರವರು ಇಂದು ಮೇಲ್ಜಾತಿಯ ಅಧಿಕಾರ ಮತ್ತು ಯಾಜಮಾನಿಕೆ ಅವು ನಮ್ಮ ತಳಸ್ತರದ ಸಂಸ್ಕೃತಿಯನ್ನು ನಾಶಮಾಡುವುದಕ್ಕೆ ಸಾಧ್ಯವಿಲ್ಲ.

'ಬೆಸಗರಹಳ್ಳಿ ರಾಮಣ್ಣ'ನವರ 'ಜೀತ' ಕಥೆಯು ದಲಿತರ ಬದುಕಿನ ಶೋಷಣೆಯನ್ನು ಅರ್ಥಪೂರ್ಣವಾಗಿ ತೆರೆದಿಡುತ್ತದೆ. ಕುವೆಂಪುರವರ 'ಸಾಲದ ಮಗು' ಕಥೆಯ ಊಳಿಗಮಾನ್ಯ ವ್ಯವಸ್ಥೆಯ ಕ್ರೌರ್ಯವನ್ನು ನೆನಪಿಸುತ್ತದೆ. ಚಿಕ್ಕರಾಮ ಸಾಹುಕಾರ ದೇವೀರಯ್ಯನ ಹತ್ತಿರ ಊಳಿಗದಲ್ಲಿದ್ದರೆ, ಆತನ ಅಣ್ಣ ಪುಟ್ಟಸ್ವಾಮಿ ಶಿವಲಿಂಗೇಗೌಡರ ಊಳಿಗದ ಆಳಾಗಿದ್ದಾನೆ. ಇಬ್ಬರು ಬದುಕಿನ ಶೋಷಣೆಯಲ್ಲಿ ಸಿಕ್ಕಿಕೊಂಡು ಅದನ್ನು ಬಿಡಿಸಿಕೊಳ್ಳಲಾಗದೆ ದುರಂತದಲ್ಲಿದ್ದಾರೆ. ಸಾಹುಕಾರ ಹಟ್ಟಿಯ ದನಗಳಿಂದಲೇ ತಮ್ಮ ಕಬ್ಬಿನಗದ್ದೆ ಮೇಯಿಸಿದ್ದುದರಿಂದ ಚಿಕ್ಕರಾಮ ಸಾಹುಕಾರನ ದೌರ್ಜನ್ಯಕೆ ಒಳಗಾಗುತ್ತಾನೆ. ಇಲ್ಲಿ ಮೇಲುಜಾತಿ ಅಧಿಕಾರ, ಕೆಳಜಾತಿ ಮೇಲೆ ಎಂಬುದನ್ನು ಪುನರ್‌ಸ್ಥಾಪಿತವಾಗುತ್ತದೆ ಎಂಬುದನ್ನು ಗಮನಿಸಬಹುದು. ಅಧಿಕಾರದ ಹೆಸರಿನಲ್ಲಿ ನಡೆಯುವ ಶೋಷಣೆ ಕ್ರೂರವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

'ಒಡಲಾಳದ' ಸಾಕವ್ವಳ ಮೇಲೆ ನಡೆಸಿದ ಅಧಿಕಾರ ಅದು ಇಡೀ ದಲಿತ ಸಮುದಾಯದ ಮೇಲೆ ನಡೆಸಿದ ದೌರ್ಜನ್ಯವೂ ಹೌದು. ಯಾಕೆಂದರೆ ಇಡೀ ದಲಿತಕೇರಿಯನ್ನೇ ತನ್ನ ಅಧಿಕಾರದ

---

[೧೦] ಡಾ.ಸಿ.ಬಿ.ಹೊನ್ನಯ್ಯ – ಕನ್ನಡ ಸಣ್ಣಕತೆಗಳಲ್ಲಿ ದಲಿತ ಸಂಸ್ಕೃತಿ – ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ೨೦೦೪, ಪುಸಂ–೨೦೬

ಹತೋಟಿಯಲ್ಲಿಡುವುದು. ಅಧಿಕಾರದ ಮತ್ತೊಂದು ಮುಖವೂ ಹೌದು. ಮೊಗಳ್ಳಿ ಗಣೇಶರವರು ದಲಿತರು ಅಧಿಕಾರವನ್ನು ಹೇಗೆ ವಿರೋಧಿಸುತ್ತಾರೆ ಎಂಬ ವಿವರವನ್ನು 'ಬುಗುರಿ' ಕಥೆಯಲ್ಲಿ ವಿವರಿಸಿದ್ದಾರೆ. ಊರಿಗೆ ಬಂದ ನಂತರ ಚಿಕ್ಕಣ್ಣ ಉಗ್ರನಾಗುವುದು ಅಂದರೆ ವ್ಯವಸ್ಥೆಯೊಳಗೆ ಆತ ತೋರುವ ಪ್ರತಿಭಟನೆಯಾಗಿದೆ. ಅಂದರೆ ದಲಿತರು ಸಮಾನತೆಯನ್ನು ಪಡೆಯುವಲ್ಲಿ ಸಫಲರಾಗುತ್ತಿದ್ದಾರೆ ಎನ್ನುವ ವಿವರಗಳನ್ನು ಅಲ್ಲಲ್ಲಿ ಕೆಲವು ಕಥೆಗಳಲ್ಲಿ ಕಥೆಗಾರರು ಬಿಂಬಿಸುತ್ತಾರೆ.

'ಮೊಗಳ್ಳಿಗಣೇಶ'ರವರ 'ಭತ್ತ' ಕಥೆ ದಲಿತರ ಹಸಿವಿನ ಜೊತೆಗೆ ಜಾತಿ ಶೋಷಣೆಯನ್ನು ಪ್ರತಿಪಾದಿಸುತ್ತದೆ. ಹಸಿವಿನಿಂದ ಕಂಗಾಲಾದ ದಲಿತರು ಅನ್ನ ಉಂಡು ಬಹಳ ವರ್ಷಗಳಾಗಿ, ತಮ್ಮ ದುಡಿಮೆಯ ಮೂಲಕ ಸಿಗಬಹುದಾದ 'ಭತ್ತ'ದ ಕನಸಿಗಾಗಿ ಕಾಯುತ್ತಾರೆ. ಅಲ್ಪಪ್ರಮಾಣದ ಕಳ್ಳತನದಲ್ಲಿ ಸಂಪಾದಿಸುವ ಪ್ರಯತ್ನ ಮಾಡುವುದು ಅವರ ದಾರಿದ್ರ್ಯದ ಸ್ಥಿತಿಗೆ ಪ್ರತೀಕವಾಗಿದೆ. ಮೇಲ್ಜಾತಿಯವರ ಜಾತಿ ಶೋಷಣೆ ಇದೆ. ತಹಸೀಲ್ದಾರ್ ಕ್ರಮ ಕೈಗೊಂಡಿದ್ದು ಇಲ್ಲಿ ಜಾತಿ ಬೆಂಬಲವಾಗಿದೆ. ಅದಕ್ಕೆ ವಿರುದ್ಧವಾಗಿ ಜಿಲ್ಲಾಧಿಕಾರಿಯ ದೌರ್ಜನ್ಯ ಮೇಲ್ಜಾತಿಯ ಪರವಾಗಿ ನಿಲ್ಲುತ್ತದೆ. ಇದನ್ನು ದೇಶರಕ್ಷಣೆಯಾಗಿ ಕಾಣುವುದು ವ್ಯವಸ್ಥೆಯ ವ್ಯಂಗ್ಯವಾಗಿದೆ. ಮುಖ್ಯವಾಗಿ ಇಲ್ಲಿ ಅಧಿಕಾರ ಪ್ರದರ್ಶಿತವಾಗುವ ಚಿತ್ರಣ ಇದೆ. ಮಾಯಮ್ಮ ಭತ್ತವನ್ನು ಬೇಯಿಸುವ ನೆಪದಲ್ಲಿ ಅದನ್ನು ಬಚ್ಚಿಟ್ಟುಕೊಳ್ಳುವ ತಂತ್ರ ಹೂಡುತ್ತಾಳೆ. ಇವುಗಳೆಲ್ಲ ದಲಿತರ ಹೋರಾಟದ ಪ್ರತೀಕವೇ ಆಗಿದೆ. ಅವುಗಳು ದಲಿತರು ಬದುಕುವ ಚೈತನ್ಯಗಳು ಈ ರೀತಿಯ ಚೈತನ್ಯಶೀಲತೆಯಿಂದಲೇ ದಲಿತರು ಬದುಕಿರುವುದನ್ನು ವ್ಯವಸ್ಥೆ ಅವರನ್ನು ತುಳಿದು ನಾಶಮಾಡಿರುವ ಚಿತ್ರ ಕಣ್ಣಿಗೆ ಕಟ್ಟುತ್ತದೆ. 'ಭತ್ತ' ದಲಿತರ ಹಸಿವನ್ನು ಇಂಗಿಸುವ ಮಾಯೆಯಾಗಿ ಬಂದು ಬದುಕನ್ನು ಕಷ್ಟಕ್ಕೆ ಸಿಕ್ಕಿಸಿ, ವ್ಯವಸ್ಥೆಯ ನಗುವಿಗೆ ಕಾರಣವಾಗುತ್ತದೆ. ಅಧಿಕಾರಶಾಹಿ ವ್ಯವಸ್ಥೆ ಹೇಗೆ ನಡೆದುಕೊಳ್ಳುತ್ತದೋ ಹಾಗೆ ಭೂ ಮಾಲೀಕ ವ್ಯವಸ್ಥೆ ನಡೆದುಕೊಂಡು ದಲಿತರನ್ನು ಶೋಷಣೆ ಮಾಡುವುದು ಇಲ್ಲಿಯ ದುರಂತವೂ ಆಗುತ್ತದೆ. ಯಾಜಮಾನಿಕೆ ಮತ್ತು ಅಧಿಕಾರವನ್ನು ಇಲ್ಲಿ ಮೊಗಳ್ಳಿಗಣೇಶರವರು ಮುಖ್ಯವಾಗಿ ಬಿಂಬಿಸುವುದನ್ನು ಕಾಣಬಹುದು.

ದಲಿತರು ತಮ್ಮ ಬದುಕಿನ ಮೇಲಿನ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಳ್ಳುತ್ತಿರುವ ಉದಾಹರಣೆಗಳಾಗಿ ಈ ಕಥೆಗಳು ವ್ಯಕ್ತವಾಗುತ್ತದೆ.

'ಭತ್ತ' ಕಥೆಯಲ್ಲಿ ತಹಸೀಲ್ದಾರ್‌ನ ಅಧಿಕಾರ ಕೆಳಜಾತಿಗಳ ಹಕ್ಕನ್ನು ರಕ್ಷಿಸುವ ಅಧಿಕಾರವಾಗಿದೆ. ಆದರೆ ಸರ್ಕಾರದ ಪ್ರತಿನಿಧಿಯಾದ ಆತ ಅದನ್ನು ಮಾಡುತ್ತಿಲ್ಲ.

ಇಲ್ಲಿ

೧. ಮೇಲ್ಜಾತಿ ಅಧಿಕಾರ

೨. ಸರ್ಕಾರದ ಅಧಿಕಾರ

೩. ಜಮೀನ್ದಾರಿ ವ್ಯವಸ್ಥೆ ಅಧಿಕಾರ

ಮೊದಲಾದವುಗಳನ್ನು ಮೊಗಳ್ಳಿಗಣೇಶರವರ ಕಥೆಗಳಲ್ಲಿ ವಿಶೇಷವಾಗಿ ಕಾಣಬಹುದು. ಇದು ನಾನು ಕಂಡುಕೊಂಡಿರುವ ಈ ಅಧ್ಯಯನದ ವಿಶೇಷತೆ ಮತ್ತು ಹುಡುಕಾಟವೂ ಆಗಿದೆ.

'ದೇವನೂರು ಮಹಾದೇವ'ರವರ 'ಅಮಾಸ' ಕಥೆಯಲ್ಲಿ ಅಮಾಸ ಒಬ್ಬ ಪ್ರತಿಭಾವಂತ ವ್ಯಕ್ತಿಯಾಗಿದ್ದ. ಆತನ ಪ್ರತಿಭೆಯು ಗೌಡರ ಸ್ವತ್ತಾಗುತ್ತದೆ. ಕುರಿಯಯ್ಯ ಮತ್ತು ಅಮಾಸರ ಪ್ರತಿಭೆ ಶೋಷಣೆಗೊಳಗಾಗುತ್ತದೆ. ತನ್ನ ಅಧಿಕಾರವನ್ನು ಬಳಸಿ ಅವರನ್ನು ಜೀತದಾಳಾಗಿ ಪರಿವರ್ತಿಸದೆ ಗೌಡ ಬುದ್ಧಿವಂತನಾಗುತ್ತಾನೆ.

ಮೊಗಳ್ಳಿಗಣೇಶರವರ 'ಭೂಮಿ' ಕಥೆಯಲ್ಲಿ ದೊಂಬನು ದೊಂಬರಾಟವನ್ನು ಆಡುತ್ತಾ ತನ್ನ ವೃತ್ತಿಯಲ್ಲಿ ದೈವತ್ವವನ್ನು ಕಾಣುತ್ತಾನೆ. ಆದ್ದರಿಂದ ಆತ ಪ್ರಸಿದ್ಧಿ ಆಗುತ್ತಾನೆ. ಊರಿನ ಜನ ದೊಂಬನ ದೊಂಬರಾಟ ಮೆಚ್ಚುತ್ತಾರೆ. ಇತ್ತ ಊರಿನ ಯಜಮಾನನಾದ ಪಾಳೆಯಗಾರನ ಆಗಮನ ನಿರ್ಲಕ್ಷಿಸಿದ್ದ ದೊಂಬ ಮತ್ತು ಊರಿನ ಜನರನ್ನು ಕಂಡ ಪಾಳೆಯಗಾರನಿಗೆ ಆಕ್ರೋಶ, ಸಿಟ್ಟು ಉಂಟಾಗುತ್ತದೆ. ಆಗ ಪಾಳೆಯಗಾರ ಒಂದು ಕ್ರೋಧದಿಂದ ಕೂಗಿ "ಹೇ, ದೊಂಬಾ ನಾನು ಯಾರೆಂದು ಬಲ್ಲೆಯೇನೋ" ಅರ್ಥವಾಗುತ್ತದೆ ಸ್ವಾಮಿ, ನೀವು ಈ ಊರಿನ ದಣಿಗಳಿರಬೇಕು" ನಿನಗೆ ಇಲ್ಲಿ ಆಟ ಕಟ್ಟಿ ಮೋಡಿ ಮಾಡಲು ಯಾರು ಹೇಳಿದವರು ? ನನ್ನ ಸೀಮೆಯಲ್ಲಿ ನನ್ನನ್ನೇ ಕಡೆಗಣಿಸಲು ನಿನಗೆಷ್ಟು ಧೈರ್ಯ?"[೧೧] ಇಲ್ಲಿ ಮುಖ್ಯವಾಗಿ ತನ್ನ ಯಾಜಮಾನಿಕೆಯನ್ನು ಪಾಳೆಯಗಾರ ಪ್ರದರ್ಶಿಸುತ್ತಾನೆ. ನಾನೊಬ್ಬ ಊರಿನ ಯಜಮಾನ ನಾನು ಹೇಳಿದಂತೆ ನೀನು ಕೇಳಬೇಕು ಎಂದು ಹೇಳುವ ಪಾಳೆಯಗಾರನ ಮಾತು ತಳಸಮುದಾಯದ ಮೇಲೆ ಪ್ರದರ್ಶಿಸುವ ಆತನ ಹಕ್ಕನ್ನು ಬಿಂಬಿಸುತ್ತದೆ.

ಮೊಗಳ್ಳಿಗಣೇಶರವರ 'ಮಿಂಚುಳ' ಕಥೆಯಲ್ಲಿ ತಳಸಮುದಾಯದ ಮಕ್ಕಳು ಶಿಕ್ಷಿತರಾಗುವುದನ್ನು ಮೇಲ್‌ಸ್ತರದ ಸಮುದಾಯ (ಮೇಲ್ಜಾತಿ) ಒಪ್ಪುವುದಿಲ್ಲ. ಇಲ್ಲಿ ಅವರ ಯಾಜಮಾನಿಕೆ ವ್ಯಕ್ತವಾಗುತ್ತದೆ. ಶಾಲೆಯ ಲೆಕ್ಕದ ಮಾಸ್ತರು ಕೆಳಜಾತಿಯವರನ್ನು ನೋಡುವ ವಿಧಾನ, ಇಲ್ಲಿ ಅವರ ಯಾಜಮಾನಿಕೆ ಚಿತ್ರಿತವಾಗುತ್ತಿದೆ.

[೧೧] ಮೊಗಳ್ಳಿ ಗಣೇಶ – ಮೊಗಳ್ಳಿ ಕಥೆಗಳು – ಸ್ವಪ್ನ ಬುಕ್‌ಹೌಸ್, ೨೦೦೮, ಪು.ಸಂ.೧೨೧

‘ಮಿಂಚುಳ’ ಕಥೆಯಲ್ಲಿ ತಳಸಮುದಾಯದ ಕಲೆಗೆ ಬೆಲೆ ಇಲ್ಲದೆ ಮಾಸ್ತರರು ಮತ್ತು ಮೇಲ್ಜಾತಿಯವರು ವರ್ತಿಸುವ ರೀತಿ, ಅಲ್ಲಿ ಮೇಲ್ಜಾತಿಯವರ ಅಧಿಕಾರ ಕೆಳಜಾತಿಯವರ ಮೇಲೆ ತೋರ್ಪಡಿಸಿರುವುದು ವ್ಯಕ್ತವಾಗುತ್ತದೆ.

‘ಸಿ.ವೀರಣ್ಣ’ರವರು ಬರೆದ ‘ಕಪಿಲ’ ನಾಟಕದಲ್ಲಿ ಕಪಿಲ ಬ್ರಾಹ್ಮಣ ಜಾತಿಯವರಿಂದ ಶೋಷಣೆಗೆ ಒಳಗಾಗುತ್ತಾನೆ. ಯಜಮಾನ ಅನ್ನುವ ಒಂದೇ ಕಾರಣ ಕಪಿಲ ತನ್ನ ಪ್ರತಿಭೆಯನ್ನು ಯಜಮಾನನ ಎದುರು ಪ್ರದರ್ಶಿಸದೆ ತನ್ನ ತಾಯಿಯ ಮಾತಿನಂತೆ ಜೀತದಾಳಾಗಿ ಕೆಲಸ ಮಾಡುತ್ತಾನೆ. ಕುವೆಂಪುರವರ ‘ಸಾಲದ ಮಗು’ ಕತೆಯಲ್ಲೂ ಇದೇ ರೀತಿಯ ಚಿತ್ರಣ ನೋಡಬಹುದು.

ಭಾರತೀಯ ಸಮಾಜದಲ್ಲಿ ಅನಾದಿ ಕಾಲದಿಂದಲೂ ಹಲವಾರು ಅನಿಷ್ಟ ಪದ್ಧತಿಗಳು ಆಚರಣೆಯಲ್ಲಿರುವುದನ್ನು ಗುರುತಿಸಬಹುದಾಗಿದೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಒಬ್ಬ ಯಜಮಾನನಿಗೆ ಹಲವಾರು ನಿರ್ದಿಷ್ಟ ನಿಯಮಗಳಿಗೆ ಬದ್ಧವಾಗಿ ಹಗಲು ರಾತ್ರಿ ಎನ್ನದೆ ಸತತವಾಗಿ ಸೇವೆ ಸಲ್ಲಿಸುವುದನ್ನು ಜೀತ ಎನ್ನುತ್ತೇವೆ. ಬಹುತೇಕ ಮಂದಿ ಜೀತದಾಳುಗಳು ತಾವು ಹಿಂದೆ ಪಡೆಯಲಾಗಿದ್ದ ಸಾಲದ ಹಣಕ್ಕೆ ಪ್ರತಿಯಾಗಿ ಸೇವೆ ಸಲ್ಲಿಸುವವರಾಗಿದ್ದರು.”[೧೨] ಈ ಜೀತಪದ್ಧತಿಯು ಯಾಜಮಾನಿಕೆ ರೂಪದಿಂದ ಉಂಟಾಗಿರುವುದಾಗಿದೆ. ಆದ್ದರಿಂದ ಯಜಮಾನನ ಅನುಮತಿಯಂತೆ ಜೀತದಾರನು ಜೀತ ಮಾಡಬೇಕಾಗುತ್ತದೆ. ಇದನ್ನು ಉದಾಹರಣೆ ಎಂಬಂತೆ ‘ಕುವೆಂಪು’ರವರ ‘ಸಾಲದ ಮಗು’ ಕಥೆ ನೋಡಬಹುದು. ಆ ಕಥೆಯಲ್ಲಿ “ಗೌಡರಿಗೆ ರೇಗಿತು, ಎರಡು ಮೂರು ಸಲ ಕೂಗಿದರು. ಆ ಮಳೆಯ ಗಲಬೆಯಲ್ಲಿ ಅವರ ಧ್ವನಿ ಅವರಿಗೇ ಕೇಳಿಸುವಂತಿರಲಿಲ್ಲ. ಆದರೂ ರೇಗಿದ್ದರು, ಹಾಸಿಗೆಯಿಂದೆದ್ದು ಒಂದು ಬೆತ್ತ ತೆಗೆದುಕೊಂಡು ಮೇಲುಜಗಲಿಯಿಂದ ಕೆಳಗಿಳಿದರು”[೧೩] ಈ ಕಥೆಯಲ್ಲಿ ಗೌಡರು ಮನೆಯ ಯಜಮಾನರು, ಶ್ರೀಮಂತರು, ಗ್ರಾಮಕ್ಕೆಲ್ಲಾ ಒಡೆಯರು. ಅವರು ಪ್ರದರ್ಶಿಸುವ ಯಜಮಾನತ್ವದ ಸ್ವರೂಪವನ್ನು ನೋಡಬಹುದು.

ಮೇಲಿನ ಕಥೆಗೆ ಪೂರಕ ಎಂಬಂತೆ “ಕೊರಡ್ಕಲ್ ಶ್ರೀನಿವಾಸ್”ರವರ ‘ಧನಿಯರ ಸತ್ಯನಾರಾಯಣ’ ಕಥೆ ಅಲ್ಲೂ ಆ ಮಕ್ಕಳ ಮೇಲೆ ತೋರಿಸುವ ಯಜಮಾನಿಕೆಯನ್ನು ನೋಡಬಹುದು. ಅಲ್ಲಿ ಯಜಮಾನ ಎಂದು ಬಾಳೆಕಂದೀಲು ನಮ್ಮ ಮನೆ ಪೂಜೆಗೆ ಬೇಕೆನ್ನುವ ಆತನ ಮಾತು ಕೆಳವರ್ಗ ಕೆಳಜಾತಿ ಮೇಲೆ ತೋರಿಸುವ ಯಾಜಮಾನಿಕೆಯ ರಚನೆಯನ್ನು ಕಾಣಬಹುದಾಗಿದೆ. ಅಂದರೆ ತಳಸಮುದಾಯವರನ್ನು ನಿಯಂತ್ರಣದಲ್ಲಿಡುವುದಾಗಿದೆ.

---

[೧೨] ಪ್ರೊ| ಕೆ.ಬೈರಪ್ಪ – ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ಧಿ, ಸಪ್ನ ಬುಕ್‌ಹೌಸ್, ೨೦೦೯, ಪು.ಸಂ-೨೬೩

[೧೩] ಕುವೆಂಪು – ನನ್ನ ದೇವರು ಮತ್ತು ಇತರ ಕಥೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೬, ಪು.ಸಂ-೧೪

ತಳಸಮುದಾಯದ ಮಕ್ಕಳು ಬಾಳೆಕಂದೀಲಿನ ಕುರಿತು ಕಂಡ ಕನಸು, ಬೆಳೆಸಿದ ರೀತಿ, ಅದರ ಆರೈಕೆ ಇವೆಲ್ಲವೂ ಊರಿನ ಗೌಡನ ಪಾಲಾಗುವುದನ್ನು ಆ ಕಥೆಯಲ್ಲಿ ಕಾಣಬಹುದು. ಗೌಡನ ಯಾಜಮಾನಿಕೆ ತಳ ಸಮುದಾಯದವರನ್ನು ಹೇಗೆ ಹತೋಟಿಯಲ್ಲಿಡುತ್ತದೆ ಎಂಬುದನ್ನು ನೋಡಬಹುದಾಗಿದೆ.

'ಮೊಗಳ್ಳಿಗಣೇಶ'ರವರ 'ಪಟೇಲ' ಕಥೆಯಲ್ಲಿ ಪಟೇಲ ತನ್ನ ಅಧಿಕಾರದಿಂದ ದಲಿತರು ಪ್ರತಿಭೆಯಿಂದ ಬೆಳೆಯುತ್ತಿದ್ದರೆ ಅವರ ಪ್ರಗತಿಯನ್ನು ಬಗ್ಗು ಬಡಿಯಲು ಸಂಚು ನಡೆಸುತ್ತಿರುತ್ತಾನೆ.

ಬುಗುರಿ ಕಥೆಯಲ್ಲಿ ಬುಗುರಿ ಚಲುವನ ಲವಲವಿಕೆಯ, ಚಲನೆಯ ಸಂಕೇತವಾಗಿ ಗುರುತಿಸಬೇಕಾಗಿದೆ. ಚಲುವನ ಅಪ್ಪ ಚಿಕ್ಕಣ್ಣ ತನ್ನ ಬದುಕನ್ನು ಬಡಸ್ತರದಿಂದ ಪ್ರತಿಭಟಿಸುವುದರಿಂದ ವಿರೋಧಿಯಾಗುತ್ತಾನೆ. ಇಲ್ಲಿ ಕೆಳಸ್ತರದ ಚಿಕ್ಕಣ್ಣನ ಪ್ರತಿಭಟನೆಗೆ ಬೆಲೆ ಇಲ್ಲ. ಈ ಕಥೆಯಲ್ಲಿ ಪ್ರತಿಭಟಿಸುತ್ತಲೇ ಇಬ್ಬರು ಪರಸ್ಪರ ವಿರೋಧವಾದರೂ ಅದಕ್ಕೆ ಅಧಿಕಾರಶಾಹಿಯ ಭಯದ ನೆರಳಿನಲ್ಲಿ ಶರಣಾಗುವುದು ಅವರಿಬ್ಬರ ಹಿನ್ನೆಲೆಯಲ್ಲಿ ವ್ಯಂಗ್ಯವಾಗುವ ಹಾಗೆ ವ್ಯವಸ್ಥೆಯು ಜಾತಿಯ ಕಾರಣದಲ್ಲಿ ಶೋಷಿಸುತ್ತಿರುವುದಕ್ಕೆ ಪ್ರತೀಕವಾಗಿದೆ. ಚಿಕ್ಕಣ್ಣ ಉಗ್ರನಾಗುವುದು ಖಚಿತವಾಗಿ ವ್ಯವಸ್ಥೆಯೊಳಗೆ ತೋರುವ ಪ್ರತಿಭಟನೆಯಾಗಿದೆ. ಆದರೂ ಅಂತಿಮವಾಗಿ ಮೇಲ್ವರ್ಗದ ಅಧಿಕಾರ ಪ್ರದರ್ಶಿತವಾಗುವುದನ್ನು ಕಾಣಬಹುದು.

'ಅತ್ತೆ' ಕಥೆಯಲ್ಲಿ ಕಥೆಗಾರರು ಹೆಣ್ಣಿನ ಮೇಲೆ ಶೋಷಣೆ ಮಾಡುತ್ತಾ ಪುರುಷ ತನ್ನ ಯಜಮಾನ್ಯವನ್ನು ಸ್ಥಾಪಿಸುತ್ತಾನೆ. ಹೆಣ್ಣಿನ ಅಸಹಾಯಕತೆಯನ್ನು ತನ್ನ ಯಜಮಾನಿಕೆ ಮೂಲಕ ಬಳಸಿಕೊಳ್ಳುವುದು ವ್ಯಕ್ತವಾಗುತ್ತದೆ.

ಹಾಗೆಯೇ 'ಶಿವರಾಮ ಕಾರಂತ'ರ 'ಚೋಮನದುಡಿ' ಕಾದಂಬರಿಯಲ್ಲಿನ ಚೋಮನ ಸ್ಥಿತಿ ಮೇಲ್ವರ್ಗದವರಿಂದ ಶೋಷಣೆಗೊಳಗಾಗುವ ರೀತಿ ಅಸಾಧಾರಣವಾದುದು. ಚೋಮನ ಕನಸು ನುಚ್ಚು ನೂರು ಆಗುವಂತೆ ಮಾಡಿದ ಮೇಲ್‌ಸ್ತರದ ಯಜಮಾನ ತಾನು ಯಜಮಾನ ಎಂದು ತಿರುಗಾಡುತ್ತಿರುವ ಅವನ ವೈಭವ ನೋಡಿದರೆ...... ಆ ಸಂದರ್ಭದಲ್ಲಿನ ಚೋಮನ ಸ್ಥಿತಿ ನೋಡಿದರೆ ಮನಕರಗುವಂತೆ ಚಿಂತಾಜನಕವಾಗಿರುತ್ತದೆ.

'ಸಿದ್ಧಲಿಂಗಯ್ಯ'ನವರ 'ಏಕಲವ್ಯ' ನಾಟಕ ದಲಿತರ ಮೇಲೆ ನಡೆಯುತ್ತಿರುವ ಹಲ್ಲೆ ಎರಡು ರೀತಿಯದ್ದು

೧. ಕಾಡಿನ ಪರಿಸರದ ಯಾಜಮಾನಿಕೆ.

೨. ರೂಢಿಗತ ಸಮಾಜ ನೀಡಲು ಒಪ್ಪದ ಹೊಸ ಹಕ್ಕುಗಳನ್ನು ಪಡೆಯಲು ದಲಿತರು ನಡೆಸುವ ಪ್ರಯತ್ನ. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಮೇಲ್ಜಾತಿಯ ಪುರುಷರು, ಕೆಳಜಾತಿ ಹೆಣ್ಣು ಮಕ್ಕಳ ಮೇಲೆ ನಡೆಸುವ ಯಾಜಮಾನಿಕೆಯನ್ನು ಕಾಣಬಹುದು.

'ಅನಂತಮೂರ್ತಿ'ಯವರ 'ಸಂಸ್ಕಾರ' ಕಾದಂಬರಿಯಲ್ಲೂ ಪ್ರಾಣೇಶಾಚಾರ್ಯ ಮತ್ತು ನಾರಣಪ್ಪ ಕೆಳಸ್ತರದ ಹೆಣ್ಣುಗಳ ಮೇಲೆ ಯಾಜಮಾನ್ಯ ಸ್ಥಾಪಿಸುವುದನ್ನು ನೋಡಬಹುದು.

ಯಾವುದೇ ಒಂದು ಹಳ್ಳಿ ಗ್ರಾಮದ ಜನರ ಮೇಲೆ ಬ್ರಾಹ್ಮಣ ಸಮುದಾಯ ತನ್ನ ಯಾಜಮಾನಿಕೆಯನ್ನು ಪ್ರದರ್ಶಿಸುತ್ತಿದ್ದವು. ಆ ಹಳ್ಳಿಯಲ್ಲಿ ಬ್ರಾಹ್ಮಣ ಸಮುದಾಯದವರೇ ನ್ಯಾಯ ತೀರ್ಮಾನ ಮಾಡುವವರಾಗಿರುತ್ತಿದ್ದರು. ಕೆಳಜಾತಿ, ತಳಸ್ತರದ ವ್ಯಕ್ತಿಗಳನ್ನು ತನ್ನ ಯಾಜಮಾನಿಕೆ ಮೂಲಕ ತನಗೆ ಬೇಕಾದಂತೆ ಬಳಸುವ ಪ್ರವೃತ್ತಿ ಆಗ ಸಂಪೂರ್ಣವಾಗಿ ಇತ್ತು. ಒಂದು ಸೀಮೆಗೆ ಒಬ್ಬ ನಾಯಕನಿರುತ್ತಿದ್ದನು. "ನಮ್ಮ ಗ್ರಾಮಗಳಲ್ಲಿ ಕೈಗಾರಿಕೆ, ವ್ಯವಸಾಯ, ಸಾಮಾಜಿಕ ಅಧೋಗತಿಗೆ ನಮ್ಮಲ್ಲಿರುವ ಹೆಚ್ಚಿನ ಸಂಖ್ಯೆ ಅನಕ್ಷರಸ್ಥರೇ ಕಾರಣ" ಎಂದು ವಿಶ್ವೇಶ್ವರಯ್ಯನ್ವರು ಹೇಳಿದ್ದಾರೆ.[೧೪] ಈ ಮಾತನ್ನು ಯಾಕಿಲ್ಲಿ ಪ್ರಸ್ತಾಪಿಸಿದ್ದೇನೆಂದರೆ ಪ್ರತಿ ಹಳ್ಳಿ ಗ್ರಾಮದಲ್ಲಿ ತಳಸಮುದಾಯದ ಜನರಿಗೆ ಆಗುತ್ತಿದ್ದ ಮತ್ತು ಆಗುತ್ತಿರುವ ಅಸಮಾನತೆ ಅನ್ಯಾಯವನ್ನು ನಾವು ಕಾಣುತ್ತೇವೆ. ಇದಕ್ಕೆ ಒಂದು ಉದಾಹರಣೆ ಮೂಲಕ ಹೇಳುವುದಾದರೆ ಮೇಲ್‌ಸ್ತರದ ಜನರ ಯಾಜಮಾನಿಕೆ ಮೊದಲು ಬ್ರಾಹ್ಮಣರು ನಂತರ ಗೌಡರು ಬಂದು ತಳಸಮುದಾಯವನ್ನು ತನ್ನ ಹತೋಟಿಯಲ್ಲಿ ಇಡತೊಡಗಿದರು. ಅವರಿಗೆ ತನ್ನ ಯಾಜಮಾನಿಕೆ, ಸ್ಥಾನಮಾನವೇ ಮುಖ್ಯ ಹೊರತು ಇತರರ ನೋವು, ದುಃಖ ಬೇಕಾಗಿರಲಿಲ್ಲ. ಇಲ್ಲಿನ ಯಾಜಮಾನಿಕೆ ಸ್ವರೂಪವನ್ನು ಕಾಣಬಹುದು. ಇದೇ ರೀತಿಯ ಚಿತ್ರಣವನ್ನು ಮೊಗಳ್ಳಿ ಕಥೆಗಳಲ್ಲಿ ಪ್ರಧಾನವಾಗಿ ನೋಡಬಹುದು.

ದೇವನೂರು ಮಹಾದೇವರವರ 'ಡಾಂಬರು ಬಂದುದು' ಕಥೆಯಲ್ಲಿ ಮೇಲ್ವರ್ಗದ ಗೌಡರು ಊರಿಗೆ ಡಾಂಬರು ಬಂದ ಸಮಯದಲ್ಲಿ ದೇವಾಲಯವನ್ನು ಊರ್ಜಿತಗೊಳಿಸುವ ಕೆಲಸಕ್ಕೆ ಮುಂದೆ ಹೋಗುತ್ತಾರೆ. ಆಗ ಯುವಕರು ಅದನ್ನು ವಿರೋಧಿಸುತ್ತಾರೆ. ಆಗ ಗೌಡರು ತನ್ನ ಮಕ್ಕಳಿಗೆ ಚೆನ್ನಾಗಿ ಬೈಯ್ಯುವನು. ಇಲ್ಲಿ ಗೌಡ ಯಾಜಮಾನ್ಯ ಪ್ರತಿಪಾದಿಸುವುದನ್ನು ಕಾಣಬಹುದು.

ಮೊಗಳ್ಳಿಗಣೇಶರವರ 'ಅಲ್ಲಿ ಆ ಆ ಆಳು ಈಗಲೂ' ಕಥೆಯಲ್ಲಿ ಸಿದ್ಧಿ ಮಗ ಹೂವ ವಿಪರೀತ ಅಳುತ್ತಾನೆ. ಮಗುವನ್ನು ಸಮಾಧಾನಪಡಿಸುವಲ್ಲಿ ತಾಯಿ ವಿಫಲಳಾಗುತ್ತಾಳೆ.

---

[೧೪] ಡಾ.ಎನ್.ಚಿನ್ನಸ್ವಾಮಿ ಸೋಸಲೆ – ನಮ್ಮ ಗ್ರಾಮಗಳು ಅಂದು ಇಂದು – ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪು.ಸಂ–೧೭

ಕೋಪದಿಂದ ತಾಯಿ ಮಗುವಿಗೆ ಹೊಡೆಯುತ್ತಾಳೆ. ಇಲ್ಲಿ ತಾಯಿ ಮಗ ಮೇಲೆ ತೋರಿಸುವ ಯಾಜಮಾನಿಕೆಯನ್ನು ಚಿತ್ರಿಸಬಹುದು. ಯಾವ ಸುಕುಕ್ಕೆ ನಿನ್ನೆತ್ತುದ್ನೋ....."[೧೫] ಮಗುವಿನ ಕುತ್ತಿಗೆ ಹಿಡಿದು ಬೈಯ್ಯುವ ಪ್ರಸಂಗ ಯಾರನ್ನೂ ಮನಕರಗಿಸುವಂತಿದೆ. ಇಲ್ಲಿ ಮಗುವಿನ ತಾಯಿಯ ಆವೇಶ, ಆಕ್ರೋಶ ವ್ಯಕ್ತವಾಗಿವುದರೊಂದಿಗೆ ಆಕೆಯ ಯಾಜಮಾನಿಕೆನೂ ವ್ಯಕ್ತವಾಗುತ್ತದೆ.

ಮೊಗಳ್ಳಿಗಣೇಶರವರ ಹೆಚ್ಚಿನ ಎಲ್ಲಾ ಕಥೆಗಳಲ್ಲೂ ಅಧಿಕಾರ ಮತ್ತು ಯಾಜಮಾನಿಕೆಯ ರಚನೆಗಳು ಕಂಡುಬರುತ್ತದೆ. ಇದು ನನ್ನ ಈ ಅಧ್ಯಾಯದ ಪ್ರಧಾನವಾದ ಉದ್ದೇಶವೂ ಹೌದು.

ಒಟ್ಟಿನಲ್ಲಿ ಮೊಗಳ್ಳಿಗಣೇಶರವರ ಕಥೆಗಳಲ್ಲಿ ಕಂಡು ಬರುವ ಅಧಿಕಾರ ಮತ್ತು ಯಾಜಮಾನಿಕೆಯ ರಚನೆಗಳು ಹೇಗೆ ಮೂಡಿಬಂದಿದೆ ಎಂಬುದನ್ನು ಈ ಅಧ್ಯಾಯವು ಗುರುತಿಸಲು ಪ್ರಯತ್ನಿಸಿದೆ ಅವುಗಳನ್ನು ಹೀಗೆ ಸಂಕ್ಷಿಪ್ತವಾಗಿ ಪಟ್ಟಿ ಮಾಡಬಹುದಾಗಿದೆ.

೧. ಮೇಲ್ಜಾತಿಯವರು ಕೆಳಜಾತಿಯವರ ಮೇಲೆ ಚಲಾಯಿಸುವ ಅಧಿಕಾರವು ವ್ಯಕ್ತವಾಗುತ್ತದೆ. ಊರಿನ ಗೌಡ ತನ್ನ ಅಧಿಕಾರದಿಂದ ತಳಸಮುದಾಯದವರನ್ನು ಹತೋಟಿಯಲ್ಲಿರುವ ವಿವಿಧ ಮುಖಗಳನ್ನು ಗುರುತಿಸಬಹುದು.

೨. ಜಮೀನ್ದಾರಿ ವ್ಯವಸ್ಥೆಯಲ್ಲಿ ತೋರಿಸುವ ಅಧಿಕಾರ ಅಂದರೆ ತಳಸಮುದಾಯದ ಮೇಲೆ ನಡೆಸುವ ದೌರ್ಜನ್ಯ, ತಾನು ಕೈಗೊಂಡ ತೀರ್ಮಾನವೇ ಅಂತಿಮ ಎಂದು ಭಾವಿಸುವುದು.

೩. ಸರ್ಕಾರಿ ಹುದ್ದೆಯಲ್ಲಿ ಸರ್ಕಾರಿ ಪ್ರತಿನಿಧಿಗಳಾಗಿ ಸಾರ್ವಜನಿಕ ಹಿತಾಸಕ್ತಿ ಕಾಪಾಡುವ ಉನ್ನತ ಇಲಾಖಾ ಅಧಿಕಾರಿಗಳೇ ತಮ್ಮ ಸ್ವಾರ್ಥದಿಂದ ಮೆರೆಯುವ ಪ್ರಕ್ರಿಯೆ ಕಂಡುಬರುತ್ತದೆ.

೪. ಸೃಜನಾತ್ಮಕವಾಗಿ ಬೆಳೆದು ತನ್ನನ್ನು ಗುರುತಿಸಿಕೊಂಡ ತಳಸ್ತರದ ವ್ಯಕ್ತಿಗಳ ಮೇಲೆ ಯಜಮಾನ ತನ್ನ ಹತೋಟಿಯನ್ನಿಟ್ಟುಕೊಂಡು, ತನ್ನ ಸೀಮೆ ಎಂದು ಅಧಿಕಾರ ಚಲಾಯಿಸುವುದರೊಂದಿಗೆ ತಳಸ್ತರದ ಪ್ರತಿಭೆಯನ್ನು ಕಸಿದುಕೊಳ್ಳುವ ಮೂಲಕ ತನ್ನ ಯಾಜಮಾನಿಕೆಯನ್ನು ಪ್ರದರ್ಶಿಸುವುದು ಕಂಡುಬರುತ್ತದೆ.

೫. ಪುರುಷ ಪ್ರಧಾನ ಸಮಾಜದಲ್ಲಿ ಗಂಡನಾದವನು ಆತನ ಹೆಂಡತಿ ಮಕ್ಕಳ ಮೇಲೆ ಪ್ರದರ್ಶಿಸುವ ಯಾಜಮಾನಿಕೆಯ ಸ್ವರೂಪಗಳು ಚಿತ್ರಿತವಾಗಿದ್ದನ್ನು ಗುರುತಿಸಬಹುದು. ಅಲ್ಲದೆ ಅವಿಭಕ್ತ ಕುಟುಂಬದ ಹಲವು ದುಃಖಗಳನ್ನು ಅಂದರೆ ಲೈಂಗಿಕ ಶೋಷಣೆ ಇದನ್ನು ಗುರುತಿಸಬಹುದು.

---

[೧೫] ಮೊಗಳ್ಳಿ ಗಣೇಶ – ಮೊಗಳ್ಳಿ ಕಥೆಗಳು, ಸಪ್ನ ಬುಕ್‌ಹೌಸ್, ೨೦೦೮, ಪು.ಸಂ–೧೦

ಅಧ್ಯಾಯ – ೪

ಕಥೆಗಳಲ್ಲಿ ಕಂಡು ಬರುವ ಮಹಿಳೆಯರ ಚಿತ್ರಣ.

ಪ್ರಸ್ತುತ ಅಧ್ಯಾಯದಲ್ಲಿ ಮೊಗಳ್ಳಿಗಣೇಶರವರ ಕಥೆಗಳಲ್ಲಿ ಕಂಡುಬರುವ ಮಹಿಳೆಯರ ಚಿತ್ರಣವನ್ನು ಪರಿಶೀಲಿಸುವುದು ಮುಖ್ಯ ಉದ್ದೇಶವಾಗಿದೆ.

ಯಾವುದೇ ಒಂದು ಜನಸಮುದಾಯದಲ್ಲಿ ಗಂಡು-ಹೆಣ್ಣು ಇರುವುದು ಮತ್ತು ಆ ಸಂಸ್ಕೃತಿಯ ರಚನೆಯಲ್ಲಿ ಅವರ ಪಾಲ್ಗೊಳ್ಳುವಿಕೆ ಸಹಜವಾದುದು. ಆದರೆ ನಮ್ಮ ಪುರುಷಪ್ರಧಾನ ಸಮಾಜದ ಚಿಂತನೆಗಳು ಹೆಣ್ಣಿನ ಅಸ್ಮಿತೆಯನ್ನು ದಾಖಲಿಸದೆ ಹೋಗಿವೆ. ಪುರುಷ ರಾಜಕಾರಣ ಹೆಣ್ಣಿನ ಚರಿತ್ರೆ ಪರಂಪರೆ ಇದನ್ನು ಮರೆಗೆ ತಳ್ಳಿದೆ. ಇದರಿಂದ ನಮ್ಮ ಮುಂದಿರುವ ಸಂಸ್ಕೃತಿಯ ಇತಿಹಾಸವು ಬೇಟೆ, ಯುದ್ಧ, ರಾಜ್ಯ ವಿಸ್ತರಣೆ, ದಿಗ್ವಿಜಯ ಸೃಜನ ಪರಂಪರೆಯಂತಹ ಗಂಡಿನ ಯಶೋಗಾಥೆ ಹಾಗೂ ಅವನ ಅನುಭವಗಳನ್ನು ಮಹತ್ವೀಕರಿಸುವ ದಾಖಲೆಯಾದರೆ, ಈ ನಿಲುವು ಗಂಡಿನ ಚಟುವಟಿಕೆಗಳನ್ನು ಮುಖ್ಯ ಎಂದು ಗ್ರಹಿಸುವುದರಿಂದ ಹೆಣ್ಣಿನ ಗರ್ಭದಾರಣೆ, ತಾಯ್ತನ, ಸಂಗೋಪನ, ಲೈಂಗಿಕತೆಗಳಂತಹ ಚಟುವಟಿಕೆಗಳನ್ನು ಅಮುಖ್ಯವಾಗಿ ಕಂಡಿದೆ ಅಥವಾ ತೀರಾ ಸಾಮಾನ್ಯ ಎಂದು ನಿರಾಕರಿಸಿ ಇತಿಹಾಸದ ಜಗತ್ತಿನಿಂದ ಮರೆಯಾಗಿಸಿದೆ. ಸಂಸ್ಕೃತಿಯ ಇತಿಹಾಸದಲ್ಲಿ ಹೆಣ್ಣಿನ ಈ ಗೈರುಹಾಜರಿ ಅತ್ಯಂತ ಮುಖ್ಯ ಪ್ರಶ್ನೆಗಳನ್ನು ಎತ್ತುತ್ತದೆ. ಸ್ತ್ರೀವಾದಿ ಅಧ್ಯಯನ ಇಂತಹ ದೃಷ್ಟಿಕೋನದಿಂದ ನಡೆಸುವ ಅಧ್ಯಯನ ವಿಧಾನವಾಗಿದ್ದು ಅದೃಶ್ಯಗೊಳಿಸಲಾಗಿದ್ದ ನಿರಾಕೃತ ಮಹಿಳಾ ಅನುಭವ ಲೋಕವನ್ನು ಅನಾವರಣಗೊಳಿಸುವ ಮಹತ್ವದ ಕೆಲಸವಾಗಿದೆ.

ನಾವೀಗ ಹೀಗೆ ಮರೆಯಾದ, ಹೂಳಲಾದ ಮಹಿಳಾ ಮುಖವನ್ನು ಹೊರತೆಗೆದು ಹೆಣ್ಣಿನ ಚರಿತ್ರೆಯನ್ನು ಕಟ್ಟಬೇಕಾಗಿದೆ. ಹೂತುಹೋದ ಈ ಇತಿಹಾಸದ ಸಿಕ್ಕನ್ನು ಬಿಡಿಸಲಾಗದಿದ್ದರೂ, ಪುರುಷಪರವಾದ ಅಧ್ಯಯನ ಸತ್ಯಗಳ ಮಧ್ಯದ ಸೀಳುಗಳನ್ನು ಕಂಡು ಅಲ್ಲಿ ಹೆಣ್ಣಿನ 'ಮೌನ ಸಾಂಸ್ಕೃತಿಕ ಸೂಕ್ಷ್ಮ'ಗಳನ್ನು ಆಲಿಸಬೇಕು. "ಈ ಮೌನಗಳನ್ನು ಆಲಿಸುವುದು ಕಷ್ಟ ಆದರೆ ಹೆಣ್ಣಿನ ಅನುಭವಗಳನ್ನು ಅರ್ಥಮಾಡಿಕೊಳ್ಳಲು ಇದು ತೀರಾ ಅವಶ್ಯಕ"[೧]

ಆಯಾ ಕಾಲಘಟ್ಟದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವಿದ್ಯಮಾನಕ್ಕನುಗುಣವಾಗಿ ಲಿಂಗವ್ಯವಸ್ಥೆಯಲ್ಲೂ ಬದಲಾವಣೆಗಳು ಕಂಡುಬರುತ್ತಿರುತ್ತದೆ. ಈ ಬದಲಾವಣೆಗಳು ಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲೂ, ಎಲ್ಲಾ ಕಾಲಘಟ್ಟಗಳಲ್ಲೂ ಅಧಿಕಾರವರ್ಗ, ಯಾಜಮಾನ್ಯ ವರ್ಗ ಮತ್ತು ಬಂಡವಾಳಶಾಹಿವರ್ಗ ಮಧ್ಯೆ ನಡೆಯುತ್ತಿರುತ್ತದೆ.

---

[೧] ಡಾ.ಗಾಯತ್ರಿ ನಾವಡ – ಭಾರತೀಯ ಸ್ತ್ರೀವಾದ ; ಒಂದು ಸಂಕಥನ – ಕನ್ನಡ ವಿಶ್ವವಿದ್ಯಾಲಯ ಹಂಪಿ – ೨೦೦೦ – ಪು.ಸಂ.೧.೨.

ಆಧುನಿಕ ಬಂಡವಾಳಶಾಹಿ ವ್ಯವಸ್ಥೆಗೆ ಹೊಂದುವ ಮಹಿಳೆಯನ್ನು ಹೇಗೆ ರಚಿಸಲಾಗುತ್ತಿತ್ತು ಎನ್ನುವುದನ್ನು ಗ್ರಾಮ್ಷಿ ಹೀಗೆ ವಿವರಿಸಿದ್ದಾನೆ :-

ಹೆಂಗಸರು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲರು; ಮನೆಯ ಹೊರಗಿನ ವ್ಯಾವಹಾರಿಕ ಜಗತ್ತನ್ನು ನಿಭಾಯಿಸಲು ಅಸಮರ್ಥರು; ಅವರು ಮನೆವಾಳ್ತೆಯನ್ನು ನಿಭಾಯಿಸಿ ಗಂಡಸಿಗೆ ದೈಹಿಕ ಹಾಗೂ ಮಾನಸಿಕ ಸುಖ ನೀಡಿ, ಗಂಡಸು ಸಮಚಿತ್ತದಿಂದ ಲೌಕಿಕ ವ್ಯವಹಾರಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂಬ ಮೌಲ್ಯಗಳು ಊಳಿಗಮಾನ್ಯ ವ್ಯವಸ್ಥೆಯಲ್ಲಿ ರೂಢಿಗೆ ಬಂದವು ಎಂದಿಟ್ಟುಕೊಳ್ಳೋಣ. ಈ ಮೌಲ್ಯಗಳು ಎಷ್ಟು ಗಟ್ಟಿಯಾಗಿ ಜನರ ಮನಸ್ಸಿನಲ್ಲಿ ಕೂತಿರುತ್ತದೆ ಎಂದರೆ, ಹೆಂಗಸರನ್ನು ಸೇರಿಸಿಯೇ ಜನರು ಈ ಲಿಂಗಭೇದ ಪ್ರಕೃತಿ ಸಹಜವಾದದ್ದು ಎಂದೇ ನಂಬುತ್ತಾರೆ; ಈ ಮೌಲ್ಯಗಳನ್ನು ಉಲ್ಲಂಘಿಸಿಸುವವರು ಅತಿ ಉಗ್ರ ಶಿಕ್ಷೆಗೆ ಗುರಿಯಾಗುವುದು ನ್ಯಾಯ ಸಮ್ಮತ ಎಂದೇ ಜನರು ನಂಬುತ್ತಾರೆ.''[೨]

'The Bernada Cohn omnibus ನ ಲೇಖಕ Bernad Cohn 'Sanskrit the language of Indian law and lore ಎಂಬ ಪತ್ಯದಲ್ಲಿ ಮನುಧರ್ಮಶಾಸ್ತ್ರ ಯಾಕೆ ಮತ್ತು ಹೇಗೆ ಪುನರ್‌ಕಟ್ಟಲ್ಪಟ್ಟಿತು ಎಂದು ತಿಳಿಸುತ್ತಾರೆ'.[೩]

ಆಧುನಿಕ ಕಾಲದ ಭಾರತದ ನಾರಿಯು ಇಲ್ಲಿ ಕಂಡುಬರುವ ಆಧುನಿಕ ಮೌಲ್ಯಗಳನ್ನು ಒಳಗೊಂಡ ವ್ಯಕ್ತಿತ್ವವಾಗಿ ರೂಪುಗೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ ಮೊಗಳ್ಳಿಗಣೇಶರವರ ಕಥೆಗಳಲ್ಲಿ ಯಾವ ರೀತಿ ಹೆಣ್ಣು ರೂಪುಗೊಳ್ಳುತ್ತಿದ್ದಳು ಎಂಬುದನ್ನು ಪರಿಶೀಲಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶ.

ದಲಿತ ಮಹಿಳಾ ಪರಿಕಲ್ಪನೆ ಕುರಿತು ಡಾ.ಮೊಗಳ್ಳಿ ಗಣೇಶರವರ ಅಭಿಪ್ರಾಯ – 'ಕಟ್ಟುವ ಹಾಗೂ ಕೆಡವುವ ಎರಡು ಕೆಲಸಗಳನ್ನು ಪುರುಷ ಸಮಾಜ ತಾನೇ ಮಾಡಿಕೊಳ್ಳುತ್ತಾ ಬಂದಿದ್ದು ಸ್ತ್ರೀ ಲೋಕದ ಎಲ್ಲಾ ಬಗೆಯ ಚಿಂತನೆಯನ್ನು ತಡೆದದ್ದರಿಂದ ಮಹಿಳಾ ಪರಂಪರೆಗಳನ್ನೆಲ್ಲ ಅಪಮೌಲ್ಯಗೊಳಿಸಿದೆ. ಸಾಮಾಜಿಕ ವ್ಯವಸ್ಥೆಯನ್ನು ಮಾನವೀಯ ಸಂಬಂಧಗಳಿಂದ ಕಟ್ಟುವ ಪ್ರಾಥಮಿಕ ಎಲ್ಲಾ ಕಾರ್ಯಗಳನ್ನು ಮಾಡುವವರೇ ಮಹಿಳೆಯರು. ಪುರುಷ ಸಮಾಜವು ಸಮಾಜದ ಹೊರಗಿನ ರೂಪವನ್ನು ರೂಪಿಸಬಲ್ಲದು. ಸಮಾಜದ ಆಂತರಿಕ ವ್ಯವಸ್ಥೆಯು ಮಹಿಳೆಯರ ಅನಿವಾರ್ಯತೆಯಿಂದಲೆ ವಿಕಾಸಗೊಳ್ಳುವುದು. ಪುರುಷ ಮತ್ತು ಮಹಿಳೆಯರ

---

[೨] ಕೆ.ಫಣಿರಾಜ್ – ಆಂಟೋನಿಯೋ ಗ್ರಾಮ್ಷಿ – ಅಭಿನವ ಪ್ರಕಾಶನ – ೨೦೧೧, ಪು.ಸಂ.-೮೨.

[೩] **The Bernad cohn omnibus – Author Bernad Cohn – oxford University Press – 2004.**

ಸಾಂಸ್ಕೃತಿಕ ಹಾಗೂ ಧಾರ್ಮಿಕ ನೆಲೆಗಳು ಸಂಕೀರ್ಣವಾದ ಮೌಲ್ಯವ್ಯವಸ್ಥೆಯನ್ನು ರೂಪಿಸಿಕೊಂಡಿವೆ. ಆಧುನಿಕೋತ್ತರ ಜಗತ್ತಿನಲ್ಲಿ ಈ ಎರಡು ವ್ಯವಸ್ಥೆಗಳ ಮೂಲಕ ಅವರ ಗತಕಾಲದ ಜೊತೆಗೆ ವರ್ತಮಾನವನ್ನು ಸಮೀಕರಿಸಿ ಭವಿಷ್ಯವನ್ನು ನಿರ್ಧರಿಸಬೇಕಾಗುತ್ತದೆ.'[೪]

'ಸ್ತ್ರೀವಾದ ಏಕರೂಪಿ ಪರಿಕಲ್ಪನೆ ಅಲ್ಲ, ಯಾವುದೇ ಒಂದು ಸಿದ್ಧ ಸೂತ್ರದಿಂದ ಸ್ತ್ರೀವಾದ ತನ್ನ ಪರಿಕಲ್ಪನೆ ಮತ್ತು ತಾತ್ವಿಕ ನೆಲೆಕಟ್ಟನ್ನು ರೂಪಿಸಿಕೊಂಡಿಲ್ಲ. ಬದಲಾಗಿ ಅದು ಬಹುಮುಖವಾದ ವಿಚಾರಗಳು ಮತ್ತು ಚಟುವಟಿಕೆಗಳಿಂದ ರೂಪುಗೊಂಡಿದೆ.'[೫]

೧೯ನೇ ಶತಮಾನದಲ್ಲಿ 'ಸ್ತ್ರೀವಾದ' ಎಂಬ ಪದ ಮೊದಲು ಬಳಕೆಯಾದಾಗ ಒಂದು ಅರ್ಥವನ್ನು ಪಡೆದಿತ್ತು. ಅದೇ ಸ್ತ್ರೀವಾದ ೧೯೮೦ರ ಹೊತ್ತಿಗೆ ಇನ್ನೊಂದು ರೀತಿಯ ಬದಲಾವಣೆಯನ್ನು ಪಡೆದುಕೊಂಡಿತು. ಹಾಗೆಯೇ, ೨೧ನೇ ಶತಮಾನಕ್ಕೆ ಅದರ ವೈಚಾರಿಕ ಸ್ವರೂಪವೇ ಭಿನ್ನವಾಗಿರುವ ಸಾಧ್ಯತೆ ಇದೆ. ಏಕೆಂದರೆ ಜಾತಿ, ವರ್ಗ ಧರ್ಮ, ಶಿಕ್ಷಣ, ನಗರೀಕರಣ ಮತ್ತು ತಿಳುವಳಿಕೆಯ ಮಟ್ಟ ಮತ್ತು ಮೊದಲಾದ ಅಂಶಗಳನ್ನು ಅದು ಆಧರಿಸಿರುತ್ತದೆ. ಉದಾಹರಣೆ ಹಳ್ಳಿಯ ಹೆಣ್ಣು ಮಗಳೊಬ್ಬಳು ತನ್ನ ತಂದೆ, ತಾಯಿ ಮತ್ತು ಗಂಡನ ವಿರೋಧದ ನಡುವೆಯೂ ಅಕ್ಷರ ಕಲಿಯಲು ಹೊರಡುವುದು, ಹಾಗೆಯೇ, ನಗರದ ಹೆಣ್ಣುಮಗಳೊಬ್ಬಳು ಆಸ್ತಿ ವಿವಾದಕ್ಕಾಗಿಯೇ, ವಿವಾಹ ವಿಚ್ಛೇದನಕ್ಕಾಗಿಯೇ ಕೋರ್ಟ್ ಮೆಟ್ಟಿಲೇರುವುದು ಇವೆಲ್ಲವೂ ಆಯಾ ನಿರ್ದಿಷ್ಟ ಸನ್ನಿವೇಶಗಳಲ್ಲಿ ಸ್ತ್ರೀವಾದವಾಗುತ್ತವೆ.'[೬]

ಕಮಲಾಭಾಸಿನ್ ಮತ್ತು ನಿಘಾತ್‌ಖಾನ್‌ರವರ ಪ್ರಕಾರ, "ಸಮಾಜ, ಉದ್ಯೋಗದ ಸ್ಥಳ ಅಥವಾ ಮನೆಯಲ್ಲಿ ಮಹಿಳೆಯರ ಮೇಲೆ ನಡೆಯುವ ಧಮನ ಮತ್ತು ದೌರ್ಜನ್ಯಗಳ ಬಗೆಗೆ ಅರಿವು ಹೊಂದಿರುವುದರ ಜೊತೆಗೆ ಇಂತಹ ಪರಿಸ್ಥಿತಿಯನ್ನು ಬದಲಾಯಿಸಲು ಮಹಿಳೆಯರು ಮತ್ತು ಪುರುಷರಿಂದ ನಡೆಯುತ್ತಿರುವ ಕಾರ್ಯ ಚಟುವಟಿಕೆಗಳನ್ನು ಸ್ತ್ರೀವಾದ ಎಂದು ವಿಶಾಲಾರ್ಥದಲ್ಲಿ ಗ್ರಹಿಸಬಹುದು" (೨೦೦೪) ಮೇಲಿನ ನಿರೂಪಣೆಯ ಆಧಾರದ ಮೇಲೆ ಸ್ತ್ರೀವಾದದ ಎರಡು ಸಾಮಾನ್ಯ ಗುಣಲಕ್ಷಣಗಳನ್ನು ಗುರುತಿಸಬಹುದು; ಅವು ಯಾವುದೆಂದರೆ –

೧. ಮಹಿಳೆಯರ ಸಾಮಾಜಿಕ ಅಧೀನತೆ ಮತ್ತು ಮಹಿಳೆಯರಾದ ಕಾರಣಕ್ಕಾಗಿ ಅನುಭವಿಸುವ ತಾರತಮ್ಯವನ್ನು ಎಲ್ಲಾ ನಿರೂಪಣೆಗಳು ಗಮನಿಸುತ್ತವೆ.

[೪] ಡಾ.ಮೊಗಳ್ಳಿ ಗಣೇಶ್ – ದಲಿತಕಥನ – ಕನ್ನಡ ವಿಶ್ವವಿದ್ಯಾಲಯ ಹಂಪಿ – ೨೦೦೬, ಪು.ಸಂ.–೧೧೧.
[೫] ಡಾ.ಸುಧಾ ಸೀತಾರಾಮನ್ – ಮಹಿಳಾ ಅಧ್ಯಯನ, ಸ್ತ್ರೀಲೇಖ ಪ್ರಕಟಣೆ, ಸಮಾಜ ಶಾಸ್ತ್ರೀಯ ದೃಷ್ಟಿಕೋನ, ೨೦೧೦, ಪು.ಸಂ.೪೧.
[೬] ಅದೇ ಪು.ಸಂ–೪೨

೨. ಸ್ತ್ರೀಯರ ವಿರುದ್ಧ ನಡೆಯುವ ದಬ್ಬಾಳಿಕೆಯನ್ನು ಕ್ರಮೇಣ ನಿರ್ಮೂಲನಗೊಳಿಸುವ ಸಾಮಾಜಿಕ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಲಯಗಳಲ್ಲಿನ ಬದಲಾವಣೆಗೆ ಎಲ್ಲಾ ಸ್ತ್ರೀವಾದಗಳು ಒತ್ತು ನೀಡುತ್ತವೆ.

ಮೇಲಿನ ನಿರೂಪಣೆಯಿಂದ ಸ್ಪಷ್ಟವಾಗುವ ಒಂದು ವಿಚಾರವೆಂದರೆ ಲಿಂಗತಾರತಮ್ಯದ ಮತ್ತು ಪುರುಷ ಪ್ರಾಧಾನ್ಯತೆಯ ಸವಾಲನ್ನು ಎದುರಿಸಲು ಸ್ತ್ರೀವಾದಿ ತಿಳುವಳಿಕೆ ಮಾತ್ರವಲ್ಲದೆ, ಅದಕ್ಕೆ ಪೂರಕವಾದ ಕಾರ್ಯಚಟುವಟಿಕೆಯೂ ಬೇಕು. ಆದುದರಿಂದ ಲಿಂಗತಾರತಮ್ಯ, ಪುರುಷ ಪ್ರಾಧಾನ್ಯತೆ ಮತ್ತು ಪಿತೃಪ್ರಾಧಾನ್ಯತೆಯನ್ನು ಗುರುತಿಸಿ ಅದರ ವಿರುದ್ಧದ ಚಿಂತನೆ ಮತ್ತು ಚಟುವಟಿಕೆಯಲ್ಲಿ ತೊಡಗಿಕೊಳ್ಳುವವರನ್ನು ಸ್ತ್ರೀವಾದಿ ಎನ್ನಬಹುದು.

ಸ್ತ್ರೀವಾದಿ ನಿಘಂಟಿನ ಪ್ರಕಾರ ಸ್ತ್ರೀವಾದದಲ್ಲಿ ಮೂರು ಪ್ರಾಥಮಿಕ ಹಂತಗಳಿವೆ, ಅವು ಯಾವುದೆಂದರೆ;

೧. ಮಹಿಳೆಯರ ಮೇಳೆ ಆಗುವ ಅವಮಾನ ಮತ್ತು ದೌರ್ಜನ್ಯವನ್ನು ಪ್ರಜ್ಞಾಪೂರ್ವಕವಾಗಿ ವಿರೋಧಿಸುತ್ತದೆ; ಹಾಗಾಗಿ ಅದು ಲಿಂಗವಾದದ ಬಗ್ಗೆ ಸಾಂದರ್ಭಿಕ ಪ್ರತಿರೋಧವನ್ನು ಪ್ರತಿನಿಧಿಸುತ್ತದೆ.

೨. ಲಿಂಗವ್ಯವಸ್ಥೆ ಕೇವಲ ಜೈವಿಕ ಮಾತ್ರವಲ್ಲ, ಸಾಂಸ್ಕೃತಿಕವಾಗಿಯೂ ರೂಪುಗೊಂಡಿರುವುದು ಎಂಬ ಗ್ರಹಿಕೆಯನ್ನು ಸ್ತ್ರೀವಾದವು ನಮ್ಮ ಮುಂದಿಡುತ್ತದೆ. ಜೈವಿಕ ಆಧಾರದ ಮೇಲೆ ಇಬ್ಬರೂ ವ್ಯಕ್ತಿಗಳ ನಡುವೆ ಇರಬಹುದಾದ ಅಸಮಾನತೆಯನ್ನು ಅದು ವಿರೋಧಿಸುತ್ತದೆ.

೩. ಸ್ತ್ರೀವಾದವು ಈಗಾಗಲೇ ಒಪ್ಪಿತವಾಗಿರುವ ಮೌಲ್ಯ ವ್ಯವಸ್ಥೆಯನ್ನು ಮೀರುತ್ತದೆ. ಮಹಿಳೆಯರ ಬದುಕನ್ನು ಸೀಮಿತಗೊಳಿಸುವ, ಪೂರ್ವಾಗ್ರಹ ಪೀಡಿತ ಮನೋಭಾವವನ್ನು ಅನಾವರಣಗೊಳಿಸುವುದರ ಜೊತೆಗೆ ವಿರೋಧವನ್ನು ವ್ಯಕ್ತಪಡಿಸುತ್ತದೆ. ನವ ಸಮಾಜದ ನಿರ್ಮಾಣ, ಲಿಂಗಸಮಾನತೆ ಆಧಾರದ ಮೇಲೆ ಇಡೀ ವಿಶ್ವದ ಪುನರ್ರಚನೆಯಾಗಿ ನಡೆಯುವ ಚಳವಳಿಯನ್ನು ಸ್ತ್ರೀವಾದ ಎನ್ನಬಹುದು.'[೭]

'ಸ್ತ್ರೀವಾದ' ಎಂಬ ಪದ ಬಹುಪಾಲು ಆಧುನಿಕವಾದುದು. ಇದನ್ನು ೧೮೭೧ರಲ್ಲಿ ಫ್ರೆಂಚ್ ವೈದ್ಯಕೀಯ ಗ್ರಂಥವೊಂದರಲ್ಲಿ ಮೊದಲ ಬಾರಿಗೆ ಬಳಸಲಾಯಿತು. ಸಮಾಜದಲ್ಲಿ ಮಹಿಳೆಯರ ಅಸಮಾನತೆ ಮತ್ತು ಅವರ ಮೇಲೆ ನಡೆಯುತ್ತಿದ್ದ ಅನ್ಯಾಯದ ವಿರುದ್ಧ ಸಾಕಷ್ಟು ಬರವಣಿಗೆ,

[೭] ಡಾ.ಸುಧಾ ಸೀತಾರಾಮನ್ – ಮಹಿಳಾ ಅಧ್ಯಯನ : ಸಮಾಜ ಶಾಸ್ತ್ರೀಯ ದೃಷ್ಟಿಕೋನ – ಪು.ಸಂ. – ೪೧

ಹೋರಾಟ ಮತ್ತು ಚಳವಳಿಗಳು ನಡೆದ ನಂತರವೇ, ಈ ಪದ ರೂಪುಗೊಂಡಿತು. ಒಟ್ಟಾರೆಯಾಗಿ ಹೇಳುವುದಾದರೆ ಆಧುನಿಕ ಸ್ತ್ರೀವಾದ ಎಂದರೆ ಮಹಿಳೆ ತನ್ನ ಸಮಾನತೆ ಮತ್ತು ಘನತೆ ಕಾಪಾಡಿಕೊಳ್ಳುವುದಾಗಿದೆ.

'ಸ್ತ್ರೀವಾದ' ಎನ್ನುವುದು ಸಾಮಾಜಿಕ ನೆಲೆಯಿಂದ ಚಿಂತನೆ ಮಾಡುವಂತಹುದು ಎನ್ನುವುದರಲ್ಲಿ ಸಂದೇಹವಿಲ್ಲ. ಮೇಲಿನ ಆಲೋಚನೆ 'ದಲಿತ ಮಹಿಳಾವಾದ' ದಲಿತರ ಆಂತರಿಕ ವಿಷಯಕ್ಕೆ ಸಂಬಂಧಿಸಿದ್ದು ಎಂದು ಸಂಕುಚಿತ ನೆಲೆಯಿಂದ ಗ್ರಹಿಸಿದಾಗ ಆತಂಕ ಮೂಡುತ್ತದೆ. ದಲಿತ ಮಹಿಳಾವಾದವು ಆಂತರಿಕ ಅಥವಾ ದಲಿತರ ಮನೆಯೊಳಗಿನ ವಿಷಯವಾಗುತ್ತದೆ ಎಂದು ಗ್ರಹಿಸುವುದಕ್ಕಿಂತ ಮನೆ ಸ್ವಚ್ಛಗೊಳಿಸುವುದು ಎಂದರೆ ಅಂಗಳ ಸ್ವಚ್ಛಗೊಳಿಸಿದಂತೆ ಎಂದೇ ಭಾವಿಸಬೇಕು. ಆಂತರಿಕ ಪರಿಶುದ್ಧತೆ, ಬಾಹ್ಯ ಹೋರಾಟದ ಸಮಸ್ಯೆಗಳಿಗೆ ನೈತಿಕ ಧೈರ್ಯ ಒದಗಿಸುತ್ತದೆ. ಹೀಗಾಗಿ ಸ್ತ್ರೀವಾದವಾಗಲಿ, ದಲಿತ ಮಹಿಳಾ ವಾದವಾಗಲಿ ಸಮಾಜವನ್ನು ಜರಡಿ ಹಿಡಿಯುವ ಸಾಧನಗಳಾಗಿ ಪರಿಗಣಿಸುವುದು ಅನಿವಾರ್ಯ ಹೀಗಾದಾಗ ಮಾತ್ರ ಸಾಮಾಜಿಕ ಪರಿವರ್ತನೆ ಸಾಧ್ಯ. ಆದ್ದರಿಂದ ಸ್ತ್ರೀವಾದಕ್ಕೆ ದಲಿತ ಮಹಿಳಾವಾದ ಬೆನ್ನೆಲುಬಾಗಿ ಕೆಲಸಮಾಡಬೇಕಾಗಿದೆ."[೮]

ದಲಿತವಾದಕ್ಕೆ ದಲಿತ ಹೆಣ್ಣು ಬದ್ಧಳಾಗುವುದು ಎಂದರೆ ದಲಿತ ಸ್ತ್ರೀವಾದದಿಂದ ಭಾರತೀಯ ಸಮಾಜವನ್ನು ಗೆಲ್ಲುವುದು ಎಂದೇ ಅರ್ಥ. ಅಸ್ಪೃಶ್ಯತೆ ಈ ದೇಶಕ್ಕೆ ಅಂಟಿದ ದಾರಿದ್ರ್ಯ! ಈ ಅಸ್ಪೃಶ್ಯತೆ ಎನ್ನುವುದು ಸಾಮಾಜಿಕ ರೋಗ ದಲಿತ ಮಹಿಳೆ ದಲಿತ ಸಮಸ್ಯೆಗಳಿಂದ ಹೊರಬರದೆ ಮಹಿಳಾ ಸಮಸ್ಯೆಗಳಿಂದ ಹೊರಬರಲು ಸಾಧ್ಯವಿಲ್ಲ. ದಲಿತ ಹೆಣ್ಣು ಅಸ್ಪೃಶ್ಯತಾ ಸಮಸ್ಯೆ ನೆಲಕಚ್ಚುವವರೆಗೆ ದಲಿತ ಸ್ತ್ರೀವಾದವನ್ನು ನೆಚ್ಚುವುದು ಅನಿವಾರ್ಯವಾಗುತ್ತದೆ.

ದಲಿತ ಗಂಡು ತನ್ನ ಮನೆಯ ಮಡದಿಯ ಮೇಲೆ ಅಥವಾ ತಾಯಿ, ಮಗಳ ಮೇಲೆ ಬಲ ಪ್ರಯೋಗವನ್ನು ಮಾಡುತ್ತಾನೆ. ಎಂದಾರೆ ಅದರ ಹಿಂದಿನ ಪ್ರೇರಣೆಗಳು ಯಾವುದು? ಎಂದು ಶೋಧಿಸುವುದು ಅಗತ್ಯವಾಗಿದೆ. ಯಾಕೆ ದಲಿತ ಹೆಣ್ಣು ಗಂಡನಿಂದ ಹೊಡೆಸಿಕೊಳ್ಳಬೇಕಾಗುತ್ತದೆ? ಬರ್ಬರವಾದ ಸಮಾಜದ ಹಿಂಸೆಯನ್ನು ಸಹಿಸಲಾರದ ಈ ಬಲಹೀನ ಗಂಡು, ಹಿಂಸಿಸುವ ಸಮಾಜದ ಮೇಲೆ ಕೈ ಎತ್ತಲಾಗದ ಈ ದೌರ್ಬಲಯದ ಗಂಡು, ಕಟ್ಟಿಕೊಂಡ ದುರ್ಬಲವಾದ ಹೆಣ್ಣಿನ ಮೇಲೆ ಹರಿಹಾಯುವಂತಾಗುತ್ತದೆ. 'ಒಂದು ಹಳೇ ಚಡ್ಡಿ" ಕಥೆಯಲ್ಲಿ ಈ ಮೇಲಿನ ಚಿತ್ರಣದ ವಿವರವನ್ನು ಮೊಗಳ್ಳಿಗಣೇಶರವರು ಚಿತ್ರಿಸಿರುವುದನ್ನು ಕಾಣಬಹುದು. ಅಲ್ಲಿ ಬರುವ ನಾಗರಾಜ ತನ್ನ ಮೂರನೇ ಹೆಂಡತಿ ಸಿದ್ಧಿಗೆ ಹಿಗ್ಗಾಮುಗ್ಗಾ

---

[೮] ಡಾ.ಅರವಿಂದ ಮಾಲಗತ್ತಿ – ದಲಿತವರ್ಗ (ಸಂ) – ಕನ್ನಡ ಪುಸ್ತಕ ಪ್ರಾಧಿಕಾರ – ೨೦೦೨. ಪ್ರಸ್ತಾವನೆ ಪು.ಸಂ.–೨೫

ಹೊಡೆಯುವುದರೊಂದಿಗೆ ಬೈಯ್ಯುತ್ತಾನೆ. ಇಲ್ಲಿ ಸಿದ್ದಿಗೆ ಮೌನವೇ ಮುಖ್ಯವಾಗುತ್ತದೆ. ಅವಾಚ್ಯ ಪದದಿಂದ ಗಂಡ ನಾಗರಾಜ ಹೆಂಡತಿ ಸಿದ್ದಿಯನ್ನು ಬೈಯುತ್ತಾನೆ. ಪುರುಷ ಪ್ರಧಾನ ಸಮಾಜ ಹೆಣ್ಣನ್ನು ನೋಡುವ ದೃಷ್ಟಿಕೋನವನ್ನು ಕಾಣಬಹುದು.

ಮೊಗಳ್ಳಿಗಣೇಶರವರ 'ಬುಗುರಿ' ಕಥೆಯಲ್ಲಿನ ಅವ್ವ ತನ್ನ ಮಗ ಚೆಲುವನ ಕನಸು ನನಸು ಮಾಡಿಲ್ಲವೆಂಬ ದುಃಖ ಆಕೆಯನ್ನು ಕಾಡುತ್ತದೆ. ಅಲ್ಲೂ ಆಕೆ ತನ್ನ ಸಿಟ್ಟನ್ನು ಒಂದು ಕಡೆ ಮಗನ ಮೇಲೆನೇ ತೋರಿಸುತ್ತಾಳೆ. ಇಲ್ಲೆಲ್ಲ ಮುಖ್ಯವಾಗಿ ತಳಸಮುದಾಯದ ಸ್ತ್ರೀಯರ ದುಃಖ ಹತಾಸೆ, ನೋವು ಕಾಣಬಹುದು. ಮನದೊಳಗೆ ಎಲ್ಲವನ್ನು ಸಹಿಸುತ್ತಾ ಜೀವನ ನಡೆಸುವ ಚಿತ್ರಣ ಕಾಣಬಹುದು.

ಕಥೆಗಾರರು 'ಜೀವ' ಕಥೆಯಲ್ಲಿ ಮುತ್ತಾತನ ಪ್ರೇಯಸಿ ಗೌಡರ ಮಗಳು ಅವರಿಬ್ಬರು ಗಂಡ ಹೆಂಡತಿಯಾಗುತ್ತಾರೆ. ಊರಿನ ಗೌಡನ ಮಗಳು ಆತ ತಳಸ್ತರದ ವ್ಯಕ್ತಿ ಎನ್ನುವ ಕಾರಣಕ್ಕೆ ಅವರಿಬ್ಬರ ಸಂಬಂಧ ನ್ಯಾಯಯುತವಾದುದಲ್ಲ ಎಂದು ಅವರು ವಾಸವಾಗಿದ್ದ ಬಂಡೆಯ ಸುತ್ತ ಬೆಂಕಿ ಹಾಗುತ್ತಾರೆ. ಆಗ ಹೆಣ್ಣು ಶಾಪ ಹಾಕುತ್ತಾಳೆ. ಇಡೀ ಊರಿಗೆ ವರ್ಷಕ್ಕೊಮ್ಮೆ ಬೆಂಕಿ ತಗುಲಲಿ ಅಷ್ಟೇ ಅಲ್ಲದೆ ನನ್ನ ಸುಡಲು ಬಂದ ಈ ಮಲ್ಲಿಗೆಪುರ ಹಾಳಾಗಿ ವರ್ಷಕ್ಕೊಂದು ಬಾರಿ ಬೆಂಕಿಬಿದ್ದು ಏಳೇಳು ಜನ್ಮಕ್ಕು ಹಾಳಾಗಿ ಹೋಗಲಿ ಇಲ್ಲಿ ಹೆಣ್ಣಿನ ಅಕಂದ್ರನ, ನೋವು, ಹತಾಶೆ, ಅಸಹಾಯಕತೆ ಸಿಟ್ಟನ್ನು ಕಾಣಬಹುದು. ಹೆಣ್ಣು ತನ್ನ ವೈಯಕ್ತಿಕ ಬದುಕಲ್ಲಿ ತನ್ನ ಬದುಕಿನ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಹಕ್ಕು ಗೌಡರ ಮಗಳಿಗಿರಲಿಲ್ಲ. ಜಾತಿ ಎನ್ನುವುದು ವೈವಾಹಿಕ ಜೀವನದಲ್ಲಿ ಎಷ್ಟು ಅಡ್ಡಗೋಡೆಯಾಗಿರುತ್ತಾರೆ. ಇಲ್ಲಿ ಹೆಣ್ಣಿಗೆ ಆಯ್ಕೆ ಎನ್ನುವ ಸ್ವಾತಂತ್ರ್ಯನೇ ಇಲ್ಲದಿರುವುದನ್ನು ಗುರುತಿಸಬಹುದು. ಇಲ್ಲಿ ಮೇಲ್‌ಸ್ತರದವರಿಂದಲೇ ಮೇಲ್‌ಸ್ತರದ ಹೆಣ್ಣು ಶೋಷಣೆಗೆ ಒಳಗಾಗುವುದನ್ನು ಕಾಣಬಹುದು.

ಕಥೆಗಾರರು 'ಅಲ್ಲಿ ಆ ಅಳು ಈಗಲೂ' ಈ ಕಥೆಯಲ್ಲಿ 'ಹೂವ'ನ ತಾಯಿ ಸಿದ್ಧಿ ತನ್ನ ದುಃಖವನ್ನು ಮಗುವಿನ ಮೇಲೆ ಹೇರುವಸ್ಥಿತಿ. ಇಲ್ಲಿ ಮಗು ಮುಗ್ಧ, ಅಸಹಾಯಕ ಎಂದು ಸಿದ್ದಿ ತಿಳಿಯದೆ ಆ ಮಗುವಿಗೆ ದನಕ್ಕೆ ಹೊಡೆದಂತೆ ಹೊಡೆಯುವ ತಾಯಿ ಇಲ್ಲಿ ಮುಖ್ಯವಾಗಿ ಸಮಸ್ಯೆ, ದುಃಖಕ್ಕೊಳಗಾದ ಹೆಣ್ಣು ಆಕೆಯ ರೋಷವನ್ನು ಮಗುವಿನ ಮೇಲೆ ತೋರಿಸುವ ಚಿತ್ರಣ ಕಾಣಬಹುದು.

ದಲಿತ ಸಾಹಿತ್ಯವು ಮಹಿಳೆಯನ್ನು ಒಂದು ಕ್ರಿಯಾತ್ಮಕ ಶಕ್ತಿಯಾಗಿ ಬಳಸಿಕೊಂಡಿದೆ. ಇಲ್ಲಿ ಕಾಮದ ಹೊಂಡವನ್ನೇ ತುಂಬಿಕೊಂಡ ಮಾಂಸದ ಮುದ್ದೆಯಾಗಿ ನಿಲ್ಲಿಸುವುದಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತರ ಸ್ಥಾನಮಾನಗಳು ಹತ್ತಿಕ್ಕಲ್ಪಟ್ಟಿವೆ ಎಂದರೆ ಮೂಲ ಹೆಣ್ಣಿನ ಸ್ಥಾನಮಾನದಲ್ಲಿ ಆದ ಬದಲಾವಣೆಗಳೇ ಕಾರಣವಾಗಿವೆ.

'ಮೊಗಳ್ಳಿಗಣೇಶ'ರವರ 'ಬಾಡೂಟ' ಕತೆಯಲ್ಲಿ ತನ್ನ ಮಲತಾಯಿಯಿಂದ ಶೋಷಣೆಗೆ ಒಳಗಾಗುವ 'ಸಾಕಿ'ಯ ಚಿತ್ರಣವನ್ನು ಗಮನಿಸಬಹುದು. 'ಸಾಕಿ'ಗೆ ಆ ಸಂದರ್ಭದಲ್ಲಿ ತನಗೆ ತಾಯಿ ಇಲ್ಲದ ಕೊರತೆಯನ್ನು ನೆನಪಿಸುತ್ತದೆ. ಮಲತಾಯಿಯಾದ 'ಮಾದೇವಿ' ತಿನ್ನಲು ಊಟವನ್ನು ಕೊಡದೆ ಸಾಕಿಗೆ ಚಿತ್ರಹಿಂಸೆ ನೀಡುವಳು. ಮನೆಯಲ್ಲಿದ್ದ ಊಟವನ್ನು ತಾನು ಊಟ ಮಾಡಿ ಉಳಿದಿದ್ದನ್ನು ತೆಗೆದಿಡುವ ಕನಿಕರವಿಲ್ಲದ ಆಕೆಯ ಚಿತ್ರಣ ಈ ಕಥೆಯಲ್ಲಿ ಮನಕಲಕುವಂತೆ ಕಥೆಗಾರರು ಚಿತ್ರಿಸಿದ್ದಾರೆ. ಹೆಣ್ಣಿನಿಂದಲೇ ಹೆಣ್ಣಿಗೆ ಶೋಷಣೆ ತಳಸಮುದಾಯದಲ್ಲೂ ಇದೆ. ಆದರೆ, ಅದೂ ತಾಯಿ ಸ್ಥಾನದಲ್ಲಿರುವ ಮಲತಾಯಿಯ ಶೋಷಣೆ ಇದ್ದಾಗ ಆ ಹೆಣ್ಣನ್ನು ಕಾಪಾಡುವವರು ಯಾರು? ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ, ಧರೆ ಹತ್ತಿಯುರಿದಡೆ ನಿಲಬಹುದೇ ?

ಏರಿ ನೀರುಂಬೊಡೆ, ಬೇಲಿ ಕೆಯ್ಯ ಮೇಯ್ದಡೆ

ನಾರಿ ತನ್ನ ಮನೆಯಲ್ಲಿ ಕಳವೊಡೆ, ತಾಯ ಮೊಲೆವಾಲು

ನಂಜಾಗಿ ಕೊಲುವೊಡೆ, ಇನ್ನಾರಿಗೆ ದೂರುವೆ, ಕೂಡ ಸಂಗಮದೇವಾ

ಎಂಬ 'ಬಸವಣ್ಣನ' ವಚನ ಮೇಲಿನ ಕತೆಯ ಸನ್ನಿವೇಶಕ್ಕೆ ಪೂರಕವೆಂಬಂತಿದೆ.

ಸುಕನ್ಯ ಮಾರುತಿ, ಮಲ್ಲಿಕಾ ಘಂಟಿ, ಬಿ.ಟಿ.ಲಲಿತಾ ನಾಯಕ್, ಧರಣಿದೇವಿಯವರಂಥ ಮೊದಲ ಘಟ್ಟದ 'ದಲಿತ ಕವಯತ್ರಿ ಬರಹಗಾರ್ತಿಯರೊಂದಿಗೆ ದುಃಸರಸ್ವತಿ, ಉಮಾ.ಎಚ್., ಸಮತಾ ದೇಶಮಾನೆ, ಮಿತಾ ದೇವನೂರು, ವೀಣಾ ವೇಟಕುರ್ಕ, ಅನಸೂಯ ಕಾಂಬಳೆಯಂಥವರು ದಲಿತೀಯ ಚಿಂತನೆಯ ಮಾರ್ಗದಲ್ಲಿ ಒಂದಾಗಿದ್ದಾರೆ. ಆದರೆ ದಲಿತ ಸಾಹಿತ್ಯದೊಂದಿಗಿನ ಸ್ತ್ರೀವಾದಿ ನೆಲೆಯನ್ನು ನೋಡಬೇಕಾಗಿದೆ.

ಸಮಾಜದಲ್ಲಿ ಹೆಣ್ಣಿನ ಶೋಷಣೆ ಹೇಗಿತ್ತು ಎಂಬುದಕ್ಕೆ ಉದಾಹರಣೆಯಾಗಿ 'ಅಮೇರಿಕೆಯಲ್ಲಿ ಹತ್ತೊಂಬತ್ತನೇ ಶತಮಾನದಿಂದಲೇ ಆರಂಭವಾದ 'ಕಪ್ಪು ಚಳುವಳಿ' ಆ ದೇಶದ ನಿಕ್ಕಿಗಿಯೋವನಿ ಎಂಬ ಕಪ್ಪು ಕವಯತ್ರಿಯ ಒಂದು ಪದ್ಯ ಹೀಗಿವೆ.

ನನ್ನದೆಲ್ಲವನ್ನೂ ಅವರು ಕದ್ದುಕೊಂಡಿದ್ದಾರೆ

ನನ್ನ ಟೆಲಿವಿಷನ್

ನನ್ನೆರಡು ಉಂಗುರಗಳು

ನನ್ನ ಆಫ್ರಿಕದ ಚೀಟಿ ಬಟ್ಟೆ

ನನ್ನ ಫೋನನ್ನೂ ಅವರು ಕದ್ದುಕೇಳುತ್ತಾರೆ
ನನ್ನ ಕಾಗದಗಳನ್ನು ಅವರು ಕದ್ದು ಓದುತ್ತಾರೆ
ಆದರೆ ಅವರು ನನ್ನನ್ನು ಮುಗಿಸಿಬಿಟ್ಟರೂ
ಕ್ರಾಂತಿಯಾಗುವುದು ಮಾತ್ರ ನಿಲ್ಲುವುದಿಲ್ಲ.[೯]

ಅಮೇರಿಕಾದಲ್ಲಿನ ಈ ಸ್ಥಿತಿ ನಮ್ಮ ದೇಶದಲ್ಲೂ ಇದೆ. ಆದರೆ ಶೋಷಣೆಯ ವಿರುದ್ಧ ಸಿಡಿದೇಳುವ ರೋಷ ನಿಕ್ಕಿಗಿಯೋವನಿಯ ಕವಿತೆಗಳಲ್ಲಿರುವದರಿಂದಲೇ ಆಕೆ ಕವಿತಾ ವಾಚನ ಮಾಡುತ್ತಾಳೆಂದರೆ ಅಸಂಖ್ಯ ಜನ ಸೇರುತ್ತಾರೆ. ಅಂದರೆ ಹೆಣ್ಣಿನ ಮೇಲಾಗುವ ಶೋಷಣೆಯ ಮುಖಗಳು ಹೇಗೆ ಭಿನ್ನವಾಗಿ ಇರುತ್ತವೆ ಎಂಬುದನ್ನು ಇಲ್ಲಿ ನೋಡಬಹುದಾಗಿದೆ.

ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯಲ್ಲಿ ಕೆಳಸ್ತರದ ಹೆಣ್ಣುಗಳಾದ ಬೆಳ್ಳಿಯನ್ನು ಬ್ರಾಹ್ಮಣನಾದ ಶ್ರೀಪತಿ ಭೋಗಿಸಿ ಲೈಂಗಿಕ ಶೋಷಣೆಯನ್ನು ಎಸಗುತ್ತಾನೆ. ಹೀಗೆ ಇಲ್ಲಿ ಅನ್ಯಜಾತಿಯಿಂದ ಶೋಷಣೆಗೊಳಗಾದ ಸ್ತ್ರೀಯರನ್ನು ನೋಡಬಹುದಾಗಿದೆ. ಬ್ರಾಹ್ಮಣಜಾತಿಯವರಿಂದ ಶೂದ್ರ ಹೆಣ್ಣೊಬ್ಬಳು ಲೈಂಗಿಕ ಶೋಷಣೆಗೆ ಒಳಗಾಗಿರುವುದನ್ನು ಕಾಣಬಹುದು.

ನಿರಂಜನರ 'ವೈಶಾಖ' ಕಾದಂಬರಿಯಲ್ಲಿ ಲಕ್ಕನ ಸಹೋದರಿ ಶಿವನಿ ಮತ್ತು ಬ್ರಾಹ್ಮಣರ ಕೇಶವಯ್ಯ ಇವರ ಸಂಬಂಧ ಇಲ್ಲಿ ದಲಿತ ಹೆಣ್ಣುಮಕ್ಕಳು ಮೇಲ್ಜಾತಿಯವರಿಂದ ಶೋಷಣೆಗೊಳಗಾಗುತ್ತಿದ್ದ ರೀತಿಯನ್ನು ಗಮನಿಸಬಹುದು.

'ಬಿ.ಟಿ.ಲಲಿತಾನಾಯಕ್'ರವರ 'ನೆಲೆ–ಬೆಲೆ' ಕಾದಂಬರಿಯ ಜಯಾಳ ಪಾತ್ರ ಇಲ್ಲಿ ಯಶಸ್ವೀ ಪಾತ್ರವಾಗಿ ಲೇಖಕಿ ಜಯಾರವರನ್ನು ಚಿತ್ರಿಸಿದ್ದಾರೆ. ಹೆಣ್ಣು ಎಲ್ಲಾ ಕಡೆಗಳಲ್ಲಿ ಶೋಷಣೆಗೊಳಗಾದರೂ ತನ್ನ ಸ್ವಾತಂತ್ರ್ಯ ಪಡೆದು ಕೊನೆಗೂ ಯಶಸ್ಸಾದ ಚಿತ್ರಣ ಅಲ್ಲೊಂದು ಇಲ್ಲೊಂದು ಇರುವಂತೆ ಈಕೆಯು ಕೊನೆಗೆ ಆಕೆ ಪಾತ್ರ ಯಶಸ್ವೀ ಆಗುತ್ತದೆ.

'ದೇವನೂರ'ರವರ 'ಒಡಲಾಳ' ಕಥೆಯಲ್ಲಿ ಬರುವ ಸ್ತ್ರೀ 'ಸಾಕವ್ವ' ಕೆಳಜಾತಿ ಹೆಣ್ಣಾಗಿದ್ದಳು. ತನ್ನ ಗುಡಿಸಿಲಿನಲ್ಲಿ ಸಮಸ್ತ ಆಸ್ತಿಗೂ ತಾನೇ ವಾರಸುದಾರಳು, ತಾನು ಹೆಂಗಸಾದರೂ ಕಚ್ಚೆ ಕಟ್ಟುಕೊಂಡು ಗೇದಿರುವುದನ್ನು ಮಗನಿಗೆ ಗಟ್ಟಿ ಧ್ವನಿಯಲ್ಲಿ ಹೇಳುತ್ತಾಳೆ. ಸಾಕವ್ವಳ ಹುಂಜ ಕೇವಲ ಹುಂಜವಾಗಿದೆ. ಆಕೆಯ ಬದುಕಿನ ಪ್ರಜ್ಞೆ ಆಗಿದೆ. ಆ ಕೋಳಿ ಗೌಡ ಮತ್ತು ಪೋಲೀಸಪ್ಪನ ಊಟಕ್ಕೆ ಆಹಾರವಾಗಿ ಹೋಗಿರುತ್ತದೆ. ಇಲ್ಲಿ ಸಾಕವ್ವಳ ಆಸ್ತಿ

[೯] ಡಾ.ಅರವಿಂದ ಮಾಲಗತ್ತಿ – ದಲಿತಮಾರ್ಗ (ಸಂ) – ಕನ್ನಡ ಪುಸ್ತಕಪ್ರಾಧಿಕಾರ – ೨೦೦೨, ಪು.ಸಂ.–೭೩.

ಮೇಲ್‌ವರ್ಗದ ಗೌಡ ಮತ್ತು ಸರ್ಕಾರಿ ಅಧಿಕಾರಿಯ ಪಾಲಾಗಿರುತ್ತದೆ. ಹೆಣ್ಣಿನ ಆಕ್ರಂದನವನ್ನು ರಕ್ಷಿಸಬೇಕಾದವನೇ ಭಕ್ಷಿಸುವ ಚಿತ್ರಣ ಕಾಣಬಹುದು. ಇಲ್ಲಿ ಹೆಣ್ಣಿನ ನೋವು ಹತಾಶೆ ದುಃಖವನ್ನು ಕಾಣುವುದರ ಜೊತೆ ಬದುಕಲ್ಲಿ ವಿಫಲಳಾದ ಸಂದರ್ಭವನ್ನು ಕಾಣಬಹುದು. ಮ.ನ.ಜವರಯ್ಯರವರ 'ಎಡೆಅನ್ನ' ಕಥೆಯಲ್ಲಿ ಹೆಣ್ಣಿನಿಂದಲೇ ಹೆಣ್ಣು ಶೋಷಣೆಗೊಳಗಾಗುವುದನ್ನು ನೋಡಬಹುದು. ಯಜಮಾನ ಕಾಡಯ್ಯನ ಹೆಂಡತಿ ಆಸ್ಪತ್ರಮ್ಮ ಹೀಯಾಳಿಸುವಂತೆ, ಸೀತೆ ಮಗ ಅಂದಾನಿ ಮಾಡಿದ ತಪ್ಪನ್ನು ಕುರಿತು "ಅದೆಂತಾ ಬರಗೆಟ್ ಮಗನಾ ಎತ್ತಿ ಮಡಗಿದ್ದೀಯಮ್ಮೀ ಸೀತೆ, ಅಮ್ಮನೋರ ಕಳಸದ ಮುಂದೆ ಇಕ್ಕಿದ್ದ ಎಡೆ ಅನ್ನವಾ ಗೋರ್‍ಕೊಂಡೋಗಿ ತಿಂದನಂತಲ್ಲ ನಿನ್ ಕುಲಪುತ್ರಾ" –ಇಲ್ಲಿ ಮೇಲ್ಜಾತಿ ಹೆಣ್ಣು ಕೆಳಜಾತಿ ಹೆಣ್ಣನ್ನು ನೋಡುವ ರೀತಿ ಎಷ್ಟು ವ್ಯಂಗ್ಯವಾದುದು ಅಲ್ಲವೇ? ಇದು ಹೆಣ್ಣಿನಿಂದ ಹೆಣ್ಣಿನ ಶೋಷಣೆ ಆಗಿವೆ.

'ಎಂ.ಕೆ.ಇಂದಿರಾ'ರವರ 'ಫಣಿಯಮ್ಮ' ಕಾದಂಬರಿ ಒಂದು ಆಧುನಿಕತೆಯ ಪ್ರತೀಕವಾಗಿ ಮೂಡಿಬಂದಿದೆ. ಬ್ರಾಹ್ಮಣ ವಿಧವೆ ಆದರೂ ಮಡಿ ಅಂತ ಆರಂಭದಲ್ಲಿ ಇದ್ದರೂ ನಂತರ ಆಕೆ ನೂರಾರು ಸ್ತ್ರೀಯರಿಗೆ ಹೆರಿಗೆ ಮಾಡಿಸುತ್ತಾಳೆ. ಈಗೆ ಜಾತಿ ವ್ಯವಸ್ಥೆಯನ್ನು ಮುರಿಯುವಲ್ಲಿ ಯಶಸ್ವಿ ಆಗುತ್ತಾಳೆ. ಎಷ್ಟೋ ಹೆಣ್ಣು ಮಕ್ಕಳಿಗೆ ಜೀವ ನೀಡಿದ ಜೀವಧಾನಿಯಾಗಿ ಮೂಡಿಬರುತ್ತಾಳೆ. ಈಕೆ ಪರಂಪರೆಯನ್ನು ಒಡೆಯುವ ಕೆಲಸ ಮಾಡುತ್ತಾಳೆ.

'ಕುಸುಮಬಾಲೆ'ಯಲ್ಲಿ ಬರುವ ಹೆಣ್ಣು ಆಕೆ ಸಮಾಜದ ನಿರ್ದೇಶನವನ್ನು ಪಾಲಿಸುತ್ತಾಳೆ. ಬೇಂದ್ರೆಯವರ 'ಪುಟ್ಟ ವಿಧವೆ ಕವನ' – ಚಿಕ್ಕವಯಸ್ಸಿನಲ್ಲಿ ವಿಧವೆ, ಕೇಶಮುಂಡನ, ಮದುವೆಗೆ ಹೋಗದಂತೆ ಮಾಡುವುದು – ಇಲ್ಲಿ ಹೆಣ್ಣಿನ ಶೋಷಣೆಯ ಬೇರೆ ಬೇರೆ ಮುಖಗಳನ್ನು ನೋಡಬಹುದು.

'ಸ್ಮಶಾನ ಕುರುಕ್ಷೇತ್ರ' ನಾಟಕದಲ್ಲಿ ಮುದುಕಿ ಮಾತು ಅಧಿಕಾರ ಮತ್ತು ಪ್ರತಿಷ್ಠೆಗಳಿಗೆ ನಾವು ಯಾಕೆ ಬಲಿ ಆಗಬೇಕು. ಇಲ್ಲಿ ಹೆಣ್ಣಿಗೆ ಪ್ರಶ್ನಿಸುವ ಕಾಲ ಈಗ ಬಂದಿದೆ. ಆದ್ದರಿಂದ ಹಿಂದೆ ಪ್ರಶ್ನಿಸಿದ ಹೆಣ್ಣು ಈಗ ಪ್ರಶ್ನಿಸುತ್ತಾಳೆ. ಆಕೆಗೆ ಈಗ ಹಕ್ಕಿದೆ. ಅಂದರೆ ಆ ಮುದುಕಿ ಮಾತು ಬದಲಾವಣೆಯ, ಹಕ್ಕಿನ ವಿವರವನ್ನು ಹೇಳುತ್ತದೆ. ಪ್ರಸ್ತುತ ಸಮಾಜದಲ್ಲಿ ನಾವು ನಮ್ಮ ಹಕ್ಕನ್ನು ಕೇಳಿ ಪಡೆಯಬೇಕಾಗುತ್ತದೆ.

ಒಂದು ಸ್ಥಾಪಿತವಾದ ಸಮಾಜದಲ್ಲಿದ್ದು ಬಾಳೀ ಬದುಕುವ ಹೆಣ್ಣಿನ ಚಿತ್ರಣಗಳು 'ಮೊಗಳ್ಳಿ ಗಣೇಶ'ರವರ ಕಥಾಸಾಹಿತ್ಯದಲ್ಲಿ ಕಂಡುಬರುತ್ತದೆ. 'ಒಂದು ಹಳೆಚಡ್ಡಿ', 'ಭೂಮಿ ಬುಗುರಿ', ಅಲ್ಲಿ ಆ ಅಳು ಈಗಲೂ ಮೊದಲಾದ ಅನೇಕ ಕಥೆಗಳು ಅದನ್ನೇ ಬಿಂಬಿಸುತ್ತವೆ. ಆದರೆ ಕೆಲವೊಂದು ಕತೆಗಳು ಬದಲಾದ ವ್ಯವಸ್ಥೆಯನ್ನೂ ಚಿತ್ರಿಸುತ್ತ ಸಾಗುತ್ತವೆ. ಒಟ್ಟು ಕಥೆಗಳಲ್ಲಿ ಬರುವ ಹೆಣ್ಣಿನ

ಚಿತ್ರಣವನ್ನು ಪರಿಶೀಲಿಸುವುದು ಮುಖ್ಯ ಉದ್ದೇಶವಾಗಿದೆ. ಬೇರೆ ಬೇರೆ ಕಥೆ, ಕಾದಂಬರಿ, ನಾಟಕಗಳೊಂದಿಗೆ ಸಮೀಕರಿಸಿದಾಗ ಮೊಗಳ್ಳಿ ಗಣೇಶರವರ ಕಥೆಗಳಲ್ಲಿ ಬರುವ ಹೆಣ್ಣಿನ ಚಿತ್ರಣ ಸ್ಥಾಪಿತವಾದ ಸಮಾಜದ ಪಾತ್ರಗಳೇ ಆಗಿ ಕೆಲವು ಮೂಡಿಬಂದರೆ ಕೆಲವು ಪಾತ್ರಗಳು ಬದಲಾದ, ಕಾಲಘಟ್ಟಕ್ಕೆ ತಕ್ಕಂತೆ ಪರಿವರ್ತಿತವಾದ ಪಾತ್ರಗಳೂ ಕಂಡುಬರುತ್ತವೆ.

ಮೊಗಳ್ಳಿಗಣೇಶರವರ "ನಾದದನದಿ' ಕಥೆಯಲ್ಲಿ ಮೊಗಳ್ಳಿ ಗಣೇಶರವರು – ಗೀಜುಗನ ಜೀವನದಲ್ಲಿ ವಾರಿಜ ಇಲ್ಲದ ಜೀವನ ಇಲ್ಲ ಎಂದು ಚಿತ್ರಿಸುತ್ತಾರೆ. ಹೆಣ್ಣಿಲ್ಲದ ನನ್ನ ಬದುಕು ದುಃಖತಪ್ತ, ವ್ಯರ್ಥ, ನೀರಸ...... ಎಂದು ಗೀಜುಗನಿಗೆ ಅನಿಸುತ್ತದೆ. ಇದು ಬದಲಾದ ಸಾಮಾಜಿಕ ಸ್ಥಿತಿ ಎಂದರೆ ತಪ್ಪಾಗಲಾರದು.

ಮೊಗಳ್ಳಿಗಣೇಶರವರ 'ಮಿಂಚುಳ' ಕಥೆಯಲ್ಲಿ ಕೆಂಪವ್ವ ಕೆರೆಗೆ ಹಾರವಾದ ರೀತಿ, ಅವಳಿಂದ ಇಡೀ ಊರು ಬದುಕಿ ಉಳಿಯುತ್ತದೆ. ಇಲ್ಲಿ ಕೆಂಪವ್ವನನ್ನು ಊರ ಜನ ದೇವತೆಯಾಗಿ ಪೂಜಿಸುತ್ತಾರೆ. ಕಥೆಗಾರರು ಆಧುನಿಕತೆ ಪ್ರತೀಕ ಎಂಬಂತೆ ತಮ್ಮ ಕಥೆಗಳಲ್ಲಿ ಹೆಣ್ಣನ್ನು ದೇವತೆ ಸ್ಥಾನದಲ್ಲಿಟ್ಟು ಪೂಜಿಸುತ್ತಾರೆ.

'ಹಬ್ಬ' ಕತೆಯಲ್ಲಿ ಮಾರಿಗುಡಿ ಚಿತ್ರಣ, ಅಲ್ಲಿ ಕಥೆಗಾರರ ಅತ್ತೆ ಮಾರಮ್ಮನಂತೆ ಕೆಂಡದ ಹಾದಿಯಲ್ಲಿ ನುಗ್ಗಿ ತಾನೇ ಬೆಂಕಿಯ ದೇವತೆಯಂತೆ ಕಾಣಿಸುವುದು ಕೊನೆಗೆ ಅತ್ತೆ ಮಾಯವಾಗುವುದು. ಇಲ್ಲಿ ಹೆಣ್ಣು ತನ್ನನ್ನು ಹಬ್ಬ ಆಚರಣೆಯಲ್ಲಿ ತೊಡಗಿಸುವ ಅಂಶ ವ್ಯಕ್ತವಾಗುತ್ತದೆ.

'ಅತ್ತೆ' ಕಥೆಯಲ್ಲಿ ಹೆಣ್ಣಿನ ಶೋಷಣೆಯ ಬೇರೆ ಬೇರೆ ಮುಖಗಳು ಹೇಗಿರುತ್ತವೆ ಎಂಬುದನ್ನು ನೋಡಬಹುದು ಲೇಖಕರ ಮೂರು ಜನ ಅತ್ತೆಯವರ ದುಃಖ, ನೋವು ಜೀವನದಲ್ಲಿ ಹತಾಶೆ ಚಿತ್ರಿತವಾಗಿವೆ. ಮನೆಯೊಳಗಿನ ಲೈಂಗಿಕ ಕಿರುಕುಳವನ್ನು ಲೇಖಕರು ವಿವರಿಸುತ್ತಾರೆ. 'ನಿನ್ನ ಇವತ್ತು ಸಾಯ್ಸಿಯೇ ನಾ ಸಾಯೋದು'[೧೦] ಇಲ್ಲಿ ಅತ್ತೆಯ ಪ್ರತಿಭಟನೆಯ ಕರಾಳರೂಪವೂ ಚಿತ್ರಿತವಾಗುತ್ತವೆ. ಹೆಣ್ಣು ಮುನಿದರೆ ಮಾರಿ ಎಂಬ ಮಾತು ಇಲ್ಲಿ ಹೋಲುವಂತಿದೆ.

ಮ.ನ.ಜವರಯ್ಯನವರ 'ಮಾಗಿ' ಕಾದಂಬರಿ ದಲಿತ ಮಹಿಳೆಯೊಬ್ಬಳ ಉತ್ಕಟ ಬದುಕಿನ ಅನಾವರಣವಾಗಿದೆ. ಬದುಕಿಗೆ ಬೆನ್ನು ಹಾಕದೇ ಛಲದಿಂದ ಹೋರಾಡುವ ಜೀವನೋತ್ಸಾದೊಂದಿಗೆ ದಲಿತೀಯತೆಯ ಅನುಭವಗಳನ್ನು ಕಟ್ಟಿಕೊಡುತ್ತದೆ. ಇಲ್ಲಿ ಸ್ತ್ರೀಯ

---

[೧೦] ಡಾ.ಮೊಗಳ್ಳಿ ಗಣೇಶ್ – ಮೊಗಳ್ಳಿ ಕಥೆಗಳು – ಸ್ವಪ್ನ ಬುಕ್ ಹೌಸ್ – ೨೦೦೧, ಪು, ಸಂ.–೨೪

ಅಂತಃಸತ್ವವನ್ನು ಪ್ರಧಾನವಾಗಿಟ್ಟುಕೊಂಡರೂ ಕೌಟುಂಬಿಕ ಬದುಕಿನ ಪಾಲನಶಕ್ತಿಯೂ ಪ್ರತಿನಿಧಿತವಾಗಿದೆ. ಇದರೊಂದಿಗೆ ಗಂಡ ಕೊಡುವ ಕಿರುಕುಳ, ಅತ್ತೆ ನಾದಿನಿಯರು ಸಾಧಿಸುವ ವೈರ, ಭಾವ – ಮೈದುನರ ಹಿಂಸೆ, ಈ ಎಲ್ಲಾ ಕಲಹದ ನಡುವೆ ಆಕೆ ಯಶಸ್ವೀ ಹೆಣ್ಣಾಗಿ ಮೂಡಿಬಂದಿದ್ದಾಳೆ. ದಲಿತ ಹೆಣ್ಣಿನ ಯಶಸ್ವೀ ಬದುಕನ್ನು ಇಲ್ಲಿ ನೋಡಬಹುದು.

ಕುವೆಂಪು ಕಾದಂಬರಿಗಳಲ್ಲಿ ಬರುವ ತಳಸ್ತರದ ಹೆಣ್ಣನ್ನು ಮೇಲ್‌ಸ್ತರದ ಪುರುಷರು ಲೈಂಗಿಕ ಕಾಮನೆಯನ್ನು ಪೂರೈಸಲು ಬಳಸಿದ್ದನ್ನು ಕಾಣಬಹುದು ಇಲ್ಲಿ ತಳಸಮುದಾಯ ಹೆಣ್ಣುಮಕ್ಕಳನ್ನು ತಮ್ಮ ತೀಟೆ ತೀರಿಸಿಕೊಳ್ಳಲು ಬಳಸುತ್ತಿದ್ದರು ಇಲ್ಲಿ ಸ್ತ್ರೀಯರಿಗೆ ಎಲ್ಲಿದೆ ಒಳ್ಳೆಯ ಸ್ಥಾನಮಾನ ಎಂಬ ಪ್ರಶ್ನೆ ಉದ್ಭವವಾಗುತ್ತದೆ.

'ಕೊಡಗಿನ ಗೌರಮ್ಮ'ರ 'ವಾಣಿ ಸಮಸ್ಯೆ', 'ಸಾರಾ'ರವರ 'ಸಹನಾ', 'ತ್ರಿವೇಣಿ'ಯವರ 'ಅಪಸ್ವರ–ಅಪಜಯ', ಕಾರಂತರ 'ಅಜ್ಜಿ.....' ಹೀಗೆ ಅನೇಕ ಕೃತಿಗಳು ಸಂಪ್ರದಾಯಸ್ಥ ಸಮಾಜವನ್ನು ಪ್ರಶ್ನಿಸಿ ಹೊಸ ಸಮಾಜವನ್ನು ಕಟ್ಟುವಲ್ಲಿ ಮುಂದಾಗುತ್ತಾರೆ.

ಮೊಗಳ್ಳಿಗಣೇಶರವರ ಪ್ರಕಾರ 'ಹಿಂದೂಧರ್ಮವು ಹೆಣ್ಣನ್ನು ತನ್ನ ಪುರುಷ ಅಧಿಕಾರಕ್ಕೆ ಬಗ್ಗಿಸಿಕೊಳ್ಳಲು ಹೆಣಗಾಡಿದೆ. ಇದರ ಪ್ರಭಾವ ಶೋಷಣೆಯ ನಡುವೆಯೂ ನಮ್ಮಲ್ಲಿ ಎಷ್ಟರ ಮಟ್ಟಿಗೆ ಆಗಿದೆ. ಎಂದರೆ ಭಾರತದ ಬಹುಪಾಲು ಮಹಿಳೆಯರು ಗಂಡಸರು ರೂಪಿಸುವ ಆಚರಣೆಗಳಲ್ಲಿ ಧ್ಯಾನಿಸಬೇಕಾಗಿವೆ. ಆಧುನಿಕ ಸಮಾಜಗಳಲ್ಲಿ ವಿಮುಕ್ತಿಯ ಧ್ಯಾನ ಕೂಡ ಪುರುಷರ ಗದ್ಯಾಕೃತಿಯಲ್ಲೇ ರೂಪುಗೊಳ್ಳುತ್ತಿದೆ.'[೧೧] ಒಟ್ಟಾಗಿ ಸ್ತ್ರೀಯರ ಚಿತ್ರಣ ಲೋಕಕ್ಕಿಂತ ಮೊಗಳ್ಳಿ ಗಣೇಶರವರ ಕಥಾ ಸಾಹಿತ್ಯದ ಸ್ತ್ರೀಯರ ಚಿತ್ರಣ ಭಿನ್ನ ಎಂದೇ ಹೇಳಬಹುದು.

ಈವರೆಗಿನ ವಿವೇಚನೆಯ ಪರಿಣಾಮವಾಗಿ ಇಷ್ಟು ಹೇಳಬಹುದು: ಪುರುಷ ನಿರ್ಮಿತ ವ್ಯವಸ್ಥೆಯಲ್ಲಿ ರೂಪು ತಳೆದ ಕನ್ನಡ ಸಾಹಿತ್ಯದಲ್ಲಿ ಧಾರ್ಮಿಕ ಯುಗದಲ್ಲಿ ಕೇವಲ ಪುರುಷರ ಅಧೀನದ ವಸ್ತುಗಳಾಗಿ ರೂಪು ಪಡೆದ ಸ್ತ್ರೀಯರು ಸ್ವತಂತ್ರ ವ್ಯಕ್ತಿತ್ವಗಳ ಕ್ರಿಯಾಶೀಲತೆಯನ್ನು ಸೂಚಿಸುವಂತಹದ್ದು ಮಾನವತಾವಾದದ ಆವಿಷ್ಕಾರದೊಂದಿಗೆ ಊಳಿಗಮಾನ್ಯದಿಂದ ಬಂಡವಾಳ ಶಾಹಿಯೆಡೆಗೆ, ರಾಜಸತ್ತೆಯಿಂದ ಪ್ರಜಾಸತ್ತೆಯ ಕಡೆಗೆ, ಬದಲಾಗತೊಡಗಿದ ಸಮಾಜದ ಸ್ಥಿತಿಗಳಿಗೆ ಸ್ಪಂದಿಸುತ್ತಾ ಬರುತ್ತಿರುವ ಲೇಖಕರ ಸ್ತ್ರೀಪರ ಧೋರಣೆಗಳಲ್ಲಿ ಕಂಡುಬರುವ ವ್ಯತ್ಯಾಸಕ್ಕೂ ಸಾಮಾಜಿಕ ಬದಲಾಗುತ್ತಿರುವ ಸ್ತ್ರೀ ವ್ಯಕ್ತಿತ್ವದ ಆಯಾಮಗಳಿಗೂ ಪರೋಕ್ಷ ಸಂಬಂಧವಿದೆ. ಈ ಬದಲಾಗುತ್ತಿರುವ ಕಲ್ಪನೆಗಳು–

[೧೧] ಮೊಗಳ್ಳಿ ಗಣೇಶ್ – ಅವ್ಯಕ್ತ ಚರಿತ್ರೆ – ಕನ್ನಡ ವಿಶ್ವವಿದ್ಯಾಲಯ ಹಂಪಿ – ೨೦೦೫ – ಪು.ಸಂ.–೧೫೧

೧. ಸಾಮಾಜಿಕ ಮೌಲ್ಯಗಳ ಪ್ರಶ್ನೆಯತ್ತಲು ಈ ಸ್ತ್ರೀರೂಪಗಳು ಕೇಂದ್ರಬಿಂದುಗಳಾಗಿವೆ.

೨. ಇಡೀ ಮಾನವ ಸಮುದಾಯದಲ್ಲಿನ ಅಸಮಾನತೆಗಳ ವಿರುದ್ಧವಾಗಿ ಸೃಜನಶೀಲತೆಯ ನೆಲೆಯಲ್ಲಿ ನಡೆದ ಹೋರಾಟದಲ್ಲಿ ಸ್ತ್ರೀಯನ್ನು ಬಂಡಾಯದ ಪ್ರತೀಕವಾಗಿ ಗ್ರಹಿಸಲಾಗಿದೆ.

ಮೊಗಳ್ಳಿಗಣೇಶರವರ ಕಥಾಸಾಹಿತ್ಯದಲ್ಲಿ ಸ್ತ್ರೀ ಲೋಕವನ್ನು ನೋಡಿದರೆ ಶೋಷಣೆಗೊಳಗಾಗುವ, ಹಿಂಸೆಗೊಳಗಾಗುವ ಪಾತ್ರಗಳಿದ್ದರೂ ಕೆಲವೊಂದು ಕಥೆಗಳಲ್ಲಿನ ಸ್ತ್ರೀ ಪಾತ್ರಗಳು, ಪ್ರತಿಭಟನಾತ್ಮಕ ನೆಲೆಯಲ್ಲಿ ಕಂಡುಬರುತ್ತದೆ. ದಲಿತ ಜಗತ್ತಿನ ಸ್ತ್ರೀ ಪಾತ್ರಗಳು ಕೆಲವೊಂದು ಮೌನ ತಾಳಿದರೆ ಕೆಲವೊಂದು ಪ್ರತಿಭಟನಾತ್ಮಕ ರೀತಿ ಮುಂದುವರಿದಿವೆ. ಇದನ್ನೇ ಪ್ರಧಾನವಾಗಿ ನನ್ನ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಒಟ್ಟಿನಲ್ಲಿ ಮೊಗಳ್ಳಿಗಣೇಶರವರ ಕಥೆಗಳಲ್ಲಿ ಕಂಡುಬರುವ ಮಹಿಳೆಯರ ಚಿತ್ರಣವನ್ನು ಹೀಗೆ ಗ್ರಹಿಸಬಹುದು.

೧. ತಳ ಸಮುದಾಯದ ಹೆಣ್ಣಿನ ಮನಸ್ಥಿತಿ, ಮನಸ್ಸಿನ ದುಃಖ, ಹತಾಶೆ, ನೋವು, ತಾಕಳಾಟ ಮತ್ತು ಮನೆಯ ಒಡೆಯನಿಂದ ಶಿಕ್ಷೆಗೆ ಗುರಿಯಾಗುವಿಕೆ, ಹೆಣ್ಣನ್ನು ಪುರುಷ ಪ್ರಧಾನ ಸಮಾಜ ನೋಡುವ ರೀತಿಯನ್ನು 'ಒಂದು ಹಳೇಚಡ್ಡಿ', 'ಬಾಡೂಟ', 'ಅತ್ತೆ, ಕಥೆಗಳಲ್ಲಿ ವ್ಯಕ್ತವಾಗುತ್ತವೆ.

೨. ಪ್ರಸ್ತುತ ಸಮಾಜದಲ್ಲಿ ಹೆಣ್ಣು ತನ್ನತನವನ್ನು ಪ್ರದರ್ಶಿಸುವಿಕೆ, ತನ್ನ ಜಾಣ್ಮೆ, ಕೌಶಲ್ಯ, ಸಹನೆ, ತಾಳ್ಮೆನೇ ಮುಖ್ಯ ಮೌಲ್ಯವಾಗಿತ್ತು. ತಾನೂ ಸಾಧಿಸಬಲ್ಲಳು ಎಂಬುದನ್ನು 'ಭೂಮಿ' ಕಥೆ ಪ್ರತಿಪಾದಿಸುವುದಾಗಿದೆ.

೩. ಮೊಗಳ್ಳಿಗಣೇಶರವರ 'ನಾದದನದಿ' ಕಥೆಯಲ್ಲಿ ಹೊಸ ಸಾಮಾಜಿಕ ವ್ಯವಸ್ಥೆಯು ಗಂಡನಿಗೆ ನೆರವು ನೀಡಲು ಹೆಣ್ಣು ಕೂಡಾ ದುಡಿಯುವಿಕೆ ಆದರೆ ಸಾಮಾಜಿಕ ಚೌಕಟ್ಟಿನ ನೆಲೆಯಲ್ಲೇ ಮುಂದುವರೆಯುವುದು ಕೊನೆಗೂ ಆಕೆಯ ಅಸ್ಮಿತೆಯಿರುವುದು ಸಾಂಸಾರಿಕ ಜೀವನ ತೂಗಿಸುವ ಜಾಣ್ಮೆಯಲ್ಲಿ ಮಾತ್ರ ಎಂದು ವ್ಯಕ್ತವಾಗುತ್ತದೆ.

೪. ಹೆಣ್ಣಿನಿಂದಲೇ ಹೆಣ್ಣಿನ ಶೋಷಣೆ, ವ್ಯಕ್ತಿ ಸ್ವಾತಂತ್ರ್ಯದ ಕೊರತೆ ಎದ್ದು ಕಾಣುವಿಕೆ. ಇದರಿಂದಾಗಿ ಆಕೆ ಮಾನಸಿಕವಾಗಿ ಅಶಾಂತಳಾಗುವಿಕೆ ಈ ಅಂಶವು ಬಾಡೂಟ ಕಥೆಯಲ್ಲಿ ವ್ಯಕ್ತವಾಗುತ್ತದೆ.

೫. ಮುಖ್ಯವಾಹಿನಿಯಲ್ಲಿ ಕಾಣಿಸದ ತಳಸ್ತರದ ಹೆಣ್ಣಿಮಕ್ಕಳಿಗೆ ಮೇಲ್ಜಾತಿ ವರ್ಗದವರಿಂದ ವಿವಿಧ ಮುಖಗಳ ಶೋಷಣೆಯಿಂದ ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುವಲ್ಲಿ ವಿಫಲನಾಗುವುದು.

೬. ಮುಖ್ಯವಾಹಿನಿಯ ಕಥಾಸಾಹಿತ್ಯದಲ್ಲಿ ಚಿತ್ರಿತವಾಗುವ ಮಹಿಳೆಯರಿಗಿಂತ ಈ ಕಥನದಲ್ಲಿ ಚಿತ್ರಿತವಾಗಿರುವ ಮಹಿಳೆಯರ ಲೋಕ ಹೇಗೆ ಭಿನ್ನ ಎಂದು ಗುರುತಿಸಬಹುದು.

೭. ಹಬ್ಬ ಮತ್ತು ಮಿಂಚುಳ ಕಥೆಯಲ್ಲಿ ದೇವತಾ ಸ್ವರೂಪಿಯಾಗಿ ಚಿತ್ರಿಸಿ ಹೆಣ್ಣನ್ನು ಪೂಜನೀಯ ಸ್ಥಾನದಲ್ಲಿಟ್ಟು ನೋಡುವ ಅಂಶ ಕಂಡುಬರುತ್ತದೆ.

೮. ಮೇಲ್‌ಸ್ತರದ ಸಮುದಾಯದವರಿಂದ ಮೇಲ್‌ಜಾತಿ ಹೆಣ್ಣುಮಗಳು ಶೋಷಣೆಗೊಳಗಾಗಿದ್ದರಿಂದ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಅಂಶ ವ್ಯಕ್ತವಾಗುತ್ತದೆ.

ಅಧ್ಯಾಯ – ೫

ಕಥೆಗಳಲ್ಲಿ ಕಂಡುಬರುವ ಸಾಹಿತ್ಯ ಮತ್ತು ಸಂಸ್ಕೃತಿ ನೆಲೆಗಳು

ಈ ಅಧ್ಯಾಯದ ಉದ್ದೇಶ ಮೊಗಳ್ಳಿಗಣೇಶರವರ ಕಥೆಗಳಲ್ಲಿ ಕಂಡು ಬರುವ ಸಾಹಿತ್ಯ ಮತ್ತು ಸಂಸ್ಕೃತಿಯ ನೆಲೆಗಳನ್ನು ಚರ್ಚಿಸುವುದಾಗಿದೆ. ಇದಕ್ಕೆ ಮೊದಲು ಸಾಹಿತ್ಯ ಮತ್ತು ಸಂಸ್ಕೃತಿಯ ಪರಿಕಲ್ಪನೆಗಳನ್ನು ಚರ್ಚಿಸಲಾಗುವುದು.

"ಕನ್ನಡದಲ್ಲಿ ಸಾಹಿತ್ಯ ಎಂಬುದನ್ನು ಈ ಶತಮಾನದ ಎರಡನೇ ದಶಕದಿಂದ ಲಿಟರೇಚರ್‌ಗೆ ಸಮಾನಾರ್ಥಕವಾಗಿ ಬಳಸಲಾಗುತ್ತಿದೆ."[೧]

ಕಲಾ ಪ್ರಕಾರಗಳನ್ನು ಕುರಿತು ಪ್ರಸ್ತಾಪಿಸುವಾಗ ಅನಿವಾರ್ಯವಾಗಿ ಸಾಹಿತ್ಯವನ್ನು ಕುರಿತಂತೆ ಪ್ರಸ್ತಾಪ ಮಾಡಬೇಕಾಗುತ್ತದೆ. ಆಂಗ್ಲ ಭಾಷೆಯ 'ಲಿಟರೇಚರ್' ಎಂಬ ಶಬ್ದಕ್ಕೆ ಸಂವಾದಿಯಾಗಿ ಸಾಹಿತ್ಯ ಎಂಬುದಾಗಿ ಪಾರಿಭಾಷಿಕ ಶಬ್ದದಿಂದ ಬಳಸುತ್ತೇವೆ. ಸಾಹಿತ್ಯ ಎಂದರೆ ಮನಸ್ಸಿಗೆ ಹಿತವನ್ನುಂಟು ಮಾಡುವುದೇ ಆಗಿದೆ. ಬರವಣಿಗೆಯ ರೂಪದಲ್ಲಿರುವ ಸುಂದರವಾದ ಅಭಿವ್ಯಕ್ತಿಯನ್ನು ಸಾಹಿತ್ಯ ಎಂದು ಕರೆಯುತ್ತೇವೆ. ವ್ಯಕ್ತಿ ತಾನು ಕಂಡ ಚೆಲುವು, ಒಲವು, ಉಂಡಂತಹ ನೋವು–ನಲಿವು ಅದು ತನ್ನಲ್ಲೇ ಸೀಮಿತವಾಗದೆ ಇತರರಿಗೂ ಅದು ಲಭಿಸಬೇಕೆಂಬ ಆಂತರಿಕ ಹಂಬಲ, ಸಾಮಾಜಿಕ ಕಳಕಳಿ ಪ್ರೇರಣೆ, ಕೀರ್ತಿಯ ಹಂಬಲ ಅವನಲ್ಲಿ ಅಂತರ್ಗತವಾಗಿರುತ್ತದೆ.

ಪಂಪ ಹೇಳುವಂತೆ "ಇದು ನಿಚ್ಚಂ ಪೊಸತು............ ಅತಿ ಗಂಭೀರಂ ಕವಿತ್ವಂ" ಅಂದರೆ ಸಾಹಿತ್ಯ ಎಂದಿಗೂ ವ್ಯಕ್ತಿಯ ಮನಸ್ಸಿನ ಮೂಲೆಯಿಂದ ಮಾಸುವುದಿಲ್ಲ; ಎಂದಿಗೂ ಯಾರಿಗೂ ಬೇಸರವನ್ನುಂಟು ಮಾಡುವುದಿಲ್ಲ. ಅದು ಯುಗವಾಣಿ. ಒಂದು ರಾಷ್ಟ್ರದ ಆ ಯುಗದ ಸಂಸ್ಕೃತಿಯ ವ್ಯಕ್ತಿ ಮನಸ್ಸಿನ ಕೈಗನ್ನಡಿಯಂತೆ ಆಯಾ ಯುಗದ ದೇಶಕಾಲಗಳ ಜನಜೀವನದ ಪರಂಪರೆಯ ಮೈಲುಗಲ್ಲು. ಸಾಹಿತ್ಯದಲ್ಲಿ ಹೊಸದಾಗಿ ಕಾಣುವ, ಹೊಸದಾಗಿ ಕಟ್ಟುವ ವ್ಯವಸ್ಥೆ ಸದಾ ನಡೆಯುತ್ತಿರುತ್ತದೆ. ಇದು ನಾವು ಸೃಜನಾತ್ಮಕ ಚಿಂತನೆ ಎಂದು ಕರೆಯುತ್ತೇವೆ.

ಉದಾ:– ಕುವೆಂಪು ಕವನ – ದೇವರು ರುಜು ಮಾಡಿದನು

ರಸವಶನಾಗುತ ಕವಿ ಅದ ನೋಡಿದನು.......

ಇಲ್ಲಿ ಕುವೆಂಪುರವರ ದೃಷ್ಟಿಕೋನ ಒಂದಾದರೆ, ಉಳಿದವರ ದೃಷ್ಟಿಕೋನ ಭಿನ್ನ ಆಗಿರಬಹುದು.

---

೧ ಓ.ಎಲ್.ನಾಗಭೂಷಣಸ್ವಾಮಿ – ವಿಮರ್ಶೆಯ ಪರಿಭಾಷೆ – ಅಂಕಿತ ಪುಸ್ತಕ – ೧೯೯೮ ಪು.ಸಂ.–೨೮೧.

"ಸಾಮಾನ್ಯವಾಗಿ ಎಲ್ಲರೂ ಅಂಗೀಕರಿಸುವಂತೆ 'ಸಾಹಿತ್ಯ' ಪದವು 'ಕಲ್ಪನೆ' ಪ್ರಧಾನವಾದ ರಚನೆಗಳನ್ನು ಸೂಚಿಸುತ್ತದೆ. ಇವು ಈಗ ಬರಹ – ಅಚ್ಚಿನ ರೂಪದಲ್ಲಿ ಓದುವಂತೆ ಇದ್ದರೂ, ಹಿಂದೆ ಬಾಯಿ ಮಾತಿನ ರೂಪದಲ್ಲೇ ಉಳಿದಿದ್ದವು. (ವಾಙ್ಮಯ ಎಂಬ ಪದ ಈ ಬಗೆಯ ರಚನೆಗಳ ಮಾತಿನ ಸ್ವರೂಪ ತೋರಿಸುತ್ತದೆ.) ಸಾಹಿತ್ಯ ಛಂದೋಬದ್ಧ, ಗದ್ಯ ಅಥವಾ ನಾಟಕ ರೂಪದಲ್ಲಿರುತ್ತದೆ. ಇಂಗ್ಲೀಷ್‌ನಲ್ಲಿ ಮತ್ತು ಯುರೋಪಿಯನ್ ಭಾಷೆಗಳಲ್ಲಿ ಲಿಟರೇಚರ್ ಎಂಬ ಪದಕ್ಕೆ (ಆ ಮೂಲಕ ಕನ್ನಡದಲ್ಲಿ ಸಾಹಿತ್ಯಕ್ಕೆ) ಈ ಅರ್ಥ ಬಂದದ್ದು ೧೯ನೇ ಶತಮಾನದ ನಂತರ. ಅದಕ್ಕಿಂತ ಹಿಂದೆ ಸಾಹಿತ್ಯಕ್ಕೆ ತೀರ ವಿಶಾಲವಾದ ಸಡಿಲವಾದ ಅರ್ಥವಿದ್ದು, ಕಲಾತ್ಮಕವಾಗಿರಲಿ, ಅಥವಾ ಕೇವಲ ಬರಹವಾಗಿರಲಿ, ಭಾಷೆಯೊಂದರಲ್ಲಿ ರಚನೆಯಾದ ಎಲ್ಲಾ ಕೃತಿಗಳ ಮೊತ್ತ ಮತ್ತು ಅವುಗಳ ಅಧ್ಯಯನಕ್ಕೆ ಲಿಟರೇಚರ್ ಎಂಬ ಪದ ಬಳಕೆಯಾಗುತ್ತಿತ್ತು."[೨]

ಇಂದು, Literature (ಸಾಹಿತ್ಯ) ಎಂಬ ಪರಿಭಾಷೆಗೆ ಸಂವಾದಿಯಾಗಿ "ಸಾಂಸ್ಕೃತಿಕ ಕಥನ ಎಂಬುದಾಗಿ ಬಳಸುತ್ತೇವೆ. ಏಕೆಂದರೆ 'ಸಾಹಿತ್ಯ' ಎನ್ನುವುದು ವಸಾಹತು ಕಾಲಘಟ್ಟದಲ್ಲಿ ನಮಗೆ ಪರಿಚಿತವಾದ ಪರಿಭಾಷೆ. ಅದು ದೇಶೀಯ ಕಥನಗಳ ಗುಣ ಲಕ್ಷಣಗಳನ್ನು ಸಮಗ್ರವಾಗಿ ಹಿಡಿಯಿತೆಂದು ಹೇಳಲು ಬರುವುದಿಲ್ಲ. ಪಾಶ್ಚಾತ್ಯರ ಸಾಹಿತ್ಯ ಕಲ್ಪನೆಯಲ್ಲಿ ಸೃಜನಶೀಲವಾದದ್ದು ಸಾಹಿತ್ಯ. ಕಾಲ್ಪನಿಕವಾದದ್ದು ಸಾಹಿತ್ಯ. ಯಾರೋ ಒಬ್ಬರಿಂದ ರಚಿಸಲ್ಪಟ್ಟದ್ದು ಸಾಹಿತ್ಯ. ದಾಖಲಾಗಿರುವುದು ಸಾಹಿತ್ಯ. ಪ್ರೊ.ಕಿ.ರಂ.ನಾಗರಾಜ್‌ರವರ ಪ್ರಕಾರ "ನಮ್ಮಲ್ಲಿ ಶಿಷ್ಟ ಮತ್ತು ಜನಪದ ಎಲ್ಲವೂ ಸಾಹಿತ್ಯ. ಸ್ಮೃತಿ ಮತ್ತು ಕೃತಿಯಿಂದ ಬಂದಿರುವವೆಲ್ಲವೂ ಕಥನಗಳು. ಶಾಸ್ತ್ರ, ಸಿದ್ಧಾಂತ, ವೇದ ಎಲ್ಲವೂ ಕಾವ್ಯಗಳು. ನಮ್ಮ 'ಸಾಹಿತ್ಯದ ಕಲ್ಪನೆಯೇ ಬೇರೆ; ಪಾಶ್ಚಾತ್ಯರ ಸಾಹಿತ್ಯ ಕಲ್ಪನೆಯೇ ಬೇರೆ."[೩]

'ಸಾಹಿತ್ಯ ಎನ್ನುವುದು ತಂತ್ರದಲ್ಲಿ ಬರುವ ಮಹಾಮುದ್ರಾ. ಆ ಪುಟ್ಟ ಶರೀರದೊಳಗೆ ಇಡೀ ವಿಶ್ವ ಬಂದು ಅವತರಿಸುತ್ತದೆ. ಅದು ಸೀಮಿತ ಜ್ಞಾನವಲ್ಲ'[೪] ಎಂದು ಡಾ.ಡಿ.ಆರ್.ನಾಗರಾಜ್ ಹೇಳಿದ್ದಾರೆ. ಇಲ್ಲಿ ಸಾಹಿತ್ಯವನ್ನು ಸಾಂಸ್ಕೃತಿಕ ಕಥನ ಎಂಬ ದೃಷ್ಟಿಯಿಂದ ನಾವು ನೋಡುತ್ತಿರುವುದರಿಂದ ಈ ಸಂಸ್ಕೃತಿ ಕಥನವು ಇಡೀ ವಿಶ್ವವನ್ನೇ ವಿಶ್ವದ ಚಿಂತನೆಗಳನ್ನು ಒಳಗೊಂಡ ಕಥನವೆಂದೂ ಅದಕ್ಕೆ ಯಾವುದೇ ಸೀಮೆಯಿಲ್ಲವೆಂದು ಗ್ರಹಿಸಬಹುದಾಗಿದೆ.

---

೨ ಓ.ಎಲ್.ನಾಗಭೂಷಣಸ್ವಾಮಿ – ವಿಮರ್ಶೆಯ ಪರಿಭಾಷೆ – ಅಂಕಿತ ಪುಸ್ತಕ ೧೯೯೮ – ಪು.ಸಂ.೨೮೧

೩ ಕಿ.ರಂ.ನಾಗರಾಜ – ಜಾನಪದ ಮತ್ತು ಆಧುನಿಕ ಸಾಹಿತ್ಯ – ಶತಮಾನದ ಸಾಹಿತ್ಯ ವಿಮರ್ಶೆ, (ಸಂ) ಹೆಚ್.ಎಸ್.ರಾಘವೇಂದ್ರರಾವ್ – ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦೦೧, ಪು.ಸಂ.೬೫೬ ರಿಮ್ದ ೬೬೭

೪ ಡಾ.ಡಿ.ಆರ್.ನಾಗರಾಜ್ – ಸಾಹಿತ್ಯ ಕಥನ – ಅಕ್ಷರ ಪ್ರಕಾಶನ – ೨೦೦೬ – ಪು.ಸಂ.೨೩೯.

"ಸಾಹಿತ್ಯ ಕೃತಿಗಳನ್ನು ಸಂಸ್ಕೃತಿಯೊಡನೆ ಇರಿಸಿ ನೋಡುವಾಗ ಸಂಸ್ಕೃತಿಯ ಭಾಗವಾಗಿ ಸಾಹಿತ್ಯ ಕೃತಿಯನ್ನು ಪರಿಗಣಿಸುವ ದೃಷ್ಟಿಯೊಂದು ಕಡೆ ಬಳಕೆಯಲ್ಲಿದ್ದರೆ, ಸಂಸ್ಕೃತಿಗೆ ಪೂರಕವಾಗಿ ಸಾಹಿತ್ಯ ಕೃತಿಗಳನ್ನು ವಿವರಿಸುವ ಬಗೆ ಇನ್ನೊಂದು ಏನೇ ಇರಲಿ ಕೃತಿ ಜಗತ್ತಿನ ವಿವರಗಳನ್ನು ವ್ಯಾಖ್ಯಾನಿಸಲು ಸಾಂಸ್ಕೃತಿಕ ಭಿತ್ತಿಯ ವ್ಯವಸ್ಥಿತ ಬಳಕೆಯನ್ನು ಪ್ರತಿವಾದಿಸುವಷ್ಟೇ ತೀವ್ರವಾಗಿ ಕೃತಿ ಜಗತ್ತಿನ ವಿವರಗಳ ಮೂಲಕವೇ ಸಾಂಸ್ಕೃತಿಕ ಭಿತ್ತಿಯ ಪುನಾರಚನೆ ಸಾಧ್ಯವೆನ್ನುವ ವಾದವೂ ಬಳಕೆಯಲ್ಲಿದೆ."[೫] ಎಂದು ಕೆ.ವಿ.ನಾರಾಯಣ್‌ರವರು ಸಾಂಸ್ಕೃತಿಕ ಅಧ್ಯಯನದ ಕುರಿತು ಹೇಳಿದ್ದಾರೆ.

ಮೇಲಿನ ಅಂಶಗಳಿಗೆ ಪೂರಕವೆಂಬಂತೆ ಸಂಸ್ಕೃತಿಯು ಸಾಹಿತ್ಯದೊಳಗೆನೇ ಅಂತರ್ಗತವಾಗಿರುತ್ತದೆ. ಹಾಗಾದರೆ ಸಂಸ್ಕೃತಿ ಎಂದರೇನು ಎಂದು ನೋಡಿದಾಗ ಮಾನವರ ಆಚಾರ ವಿಚಾರಗಳೇ, ಸಂಸ್ಕಾರವೇ? ಸಭ್ಯತೆಯೇ ಎಂದು ನಮ್ಮೊಳಗೆ ಪ್ರಶ್ನೆ ಹಾಕಿದಾಗ ರಹಮತ್ ತರೀಕೆರೆಯವರು 'ಸಂಸ್ಕೃತಿ' ಎಂಬ ಪದಕ್ಕೆ ಏಳು ಅರ್ಥಗಳನ್ನು ಕೊಡುತ್ತಾ ಇವು ಬಳಕೆಯಾಗುತ್ತಿದೆ ಎನ್ನುತ್ತಾರೆ. ವ್ಯಾಪಕಾರ್ಥದಲ್ಲಿ ನೋಡುವುದಾದರೆ ಸಂಸ್ಕೃತಿ ಎನ್ನುವುದು ಪರ್ಯಾಯ ಸಂಸ್ಕೃತಿ, ಉಪಸಂಸ್ಕೃತಿ, ಪ್ರತಿಸಂಸ್ಕೃತಿ – ಹೀಗೆ ಬೇರೆ ಬೇರೆ ಆಶಯ ಪ್ರಧಾನವಾದ ಸೈದ್ಧಾಂತಿಕ ಪರಿಕಲ್ಪನೆಗಳು ಸೃಷ್ಟಿಯಾಗಿವೆ. ಕುವೆಂಪು "ಸಂಸ್ಕೃತಿ ಕ್ರಾಂತಿ" ಎಂದೂ, ಸಿದ್ಧಲಿಂಗಯ್ಯ "ಹೊಲೆಮಾದಿಗರ ಹಾಡು" ಹಿನ್ನುಡಿಯಲ್ಲಿ 'ಸ್ಥಗಿತ ಸಂಸ್ಕೃತಿ ಎಂಬ ಪರಿಕಲ್ಪನೆಯ ಪ್ರಯೋಗವಿದೆ. ಲೆನಿನ್ ದುಡಿವವರ್ಗದ ಸಂಸ್ಕೃತಿ, ಕಾರ್ಮಿಕರ ಅಂತರಾಷ್ಟ್ರೀಯ ಸಂಸ್ಕೃತಿ ಎಂಬ ಪರಿಕಲ್ಪನೆಗಳ ಚರ್ಚೆ ಮಾಡುತ್ತಾನೆ."[೬] ಹೀಗೆ ನಾನಾ ರೂಪಗಳನ್ನು ನಾವು ಸಂಸ್ಕೃತಿ ಪರಿಕಲ್ಪನೆಯ ಬಗ್ಗೆ ನೋಡಬಹುದು.

ಸಂಸ್ಕೃತಿಯೆಂದರೆ 'ಸಮುದಾಯ ಒಂದರ ಸಮಗ್ರ ಜೀವನ ವಿಧಾನಗಳ ಮೊತ್ತ' ಎಂಬ ವ್ಯಾಖ್ಯೆ ಬಂತು. ಅಂದರೆ ಉಡುವ ಬಟ್ಟೆ ಉಣ್ಣುವ ಊಟ, ಆಡುವ ಮಾತು, ಮಾಡುವ ಆಚರಣೆ ನಂಬಿದ ನಂಬಿಕೆ ಮುಂತಾಗಿ ಇಡೀ ಬದುಕಿನ ವಿವರಗಳನ್ನು ಒಳಗೊಳ್ಳುತ್ತದೆ.[೭]

'ಸಂಸ್ಕೃತಿ'ಗೆ ಇಂಗ್ಲೀಷಿನ ಸಂವಾದಿ ಪದವಾಗಿರುವ ಕಲ್ಚರ್‌ನದೂ ಇದೇ ಕಥೆ. 'ಕಲ್ಚರ್' ಎಂಬುದು ಲ್ಯಾಟಿನ್ ಭಾಷೆಯ 'ಕಲ್ಟ್ ಅಥವಾ ಕಲ್ಟಸ್' ಎಂಬ ಶಬ್ದದಿಂದ ಬಂದಿದೆ. ಈ ಶಬ್ದಗಳಿಗೆ ಮೂಲದಲ್ಲಿ ಭೂಮಿದೈವದ ಆರಾಧನೆ ಪೈರು ಬೆಳೆಯುವುದು ಎಂಬ ಅರ್ಥಗಳಿವೆ. ಈಗಲೂ ಧಾರ್ಮಿಕ ಪಂಥಗಳಿಗೆ ಬಳಕೆಯಾಗುವ 'ಕಲ್ಟ್' ಎಂಬ ಶಬ್ದದಲ್ಲಿ ಪೂಜೆ

---

೫ ಕೆ.ವಿ.ನಾರಾಯಣ – ಬೇರು, ಕಾಂಡ ಚಿಗುರು – ವಿವೇಕ ಪ್ರಕಾಶನ – ೧೯೯೭ ಪು.ಸಂ.೨೩

೬ ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ – ಕರ್ನಾಟಕ ಸಾಹಿತ್ಯ ಅಕಾಡೆಮಿ – ೨೦೦೮, ಪುಸಂ ೨ ಮತ್ತು ೩

೭ ಅದೇ, ಪುಟ –೪

ಆಚರಣೆಗಳಿವೆ. ಕೃಷಿಮಾಡುವಿಕೆಗೆ ಸಂಬಂಧಿಸಿದ ಈ ಶಬ್ದವನ್ನು ಬಳಸಿಕೊಂಡು ಸಾಗುವಳಿ, ವ್ಯವಸಾಯ (ಅಗ್ರಿಕಲ್ಚರ್), ಮೀನುಸಾಕಣೆ, ರೇಷ್ಮೆ, ಜೇನು ಮುಂತಾದ ಹುಳುಸಾಕಣೆ (ಸೆರಿ ಕಲ್ಚರ್) ಮಾಡುವ ಪದಗಳು ಹುಟ್ಟಿಕೊಂಡವು."[೮] ಈ ಕೆಳಗಿನಂತೆ ಸಂಸ್ಕೃತಿಯನ್ನು ವಿವರಿಸಬಹುದು.

ಸಂಸ್ಕೃತಿ ಎಂಬುದು ಮೂಲತಃ ಒಂದು ರಚನೆ (Construct) ಬೌದ್ಧಿಕವಾಗಿ ರೂಪಿಸಿಕೊಂಡ ಒಂದು ಪರಿಕಲ್ಪನ[೯] ಸಂಸ್ಕೃತಿಯನ್ನು ಇನ್ನೂ ವಿವರಿಸುವುದಾದರೆ –

೧. ಸಂಸ್ಕೃತಿಯೆಂಬುದು ಒಂದು ಸಮುದಾಯ ಬದುಕುವ, ಆಲೋಚಿಸುವ ಸಮಸ್ತ ಆಯಾಮಗಳನ್ನು ಒಳಗೊಳ್ಳುವ ಪರಿಭಾಷೆ.

೨. 'ಸಮುದಾಯ' ಎಂದಾಗ ಒಂದು ಗುಂಪಲ್ಲ, ಹಲವಾರು ಗುಂಪುಗಳಿರುತ್ತದೆ. ಈಯೆಲ್ಲ ಗುಂಪುಗಳ ನಂಬಿಕೆ ಆಚರಣೆಗಳು ಒಟ್ಟು ಸೇರಿಯೇ ಅದರ ಸಂಸ್ಕೃತಿ.

೩. ಇದೇ ರೀತಿ ಇಡೀ ನಾಡಿಗೆ ಏಕರೂಪಿಯಾದ ಒಂದು ಸಂಸ್ಕೃತಿ ಇರುವುದಿಲ್ಲ. ಅದರೊಳಗೆ ಪ್ರಾದೇಶಿಕ, ಜಾತೀಯ, ಧಾರ್ಮಿಕ, ಬುಡಕಟ್ಟಿನ ರೂಪಗಳಿರುತ್ತದೆ. ಭಾರತದಂತಹ ದೇಶಗಳಲ್ಲಿ ಇಂದು ಸಹಜ, ಇದನ್ನು ಸಂಸ್ಕೃತಿಯ ಬಹುರೂಪ ಗುಣ ಎನ್ನಬಹುದು.[೧೦]

ಯಾವುದೇ ಸಂಸ್ಕೃತಿಯನ್ನಾಗಲಿ ಅಭಿವ್ಯಕ್ತಿಗೊಳಿಸುವ ಮಾಧ್ಯಮವೇ ಸಾಹಿತ್ಯ. ಮಾನವನ ಆಂತರಂಗಿಕ ವ್ಯವಹಾರಗಳ ಆ ಮೂಲಕ ಹೊರಹೊಮ್ಮುವಷ್ಟು ಬೇರೆ ಮಾಧ್ಯಮಗಳ ಮೂಲಕ ಸಾಧ್ಯವಿಲ್ಲ. ದಲಿತ ಸಾಹಿತ್ಯದಲ್ಲಿನ ಸಾಹಿತ್ಯ ಮತ್ತು ಸಂಸ್ಕೃತಿ ಪರಿಕಲ್ಪನೆಗಳನ್ನು ಗಮನಿಸಿದಾಗ ಮುಖ್ಯವಾಗಿ ನಾನು ಕಂಡ ಅಂಶವೇನೆಂದರೆ, ಒಂದು ತಳಸಮುದಾಯದ ವಿಭಿನ್ನ ಸಂಸ್ಕೃತಿ, ಅಲಕ್ಷಿತ ಸಮುದಾಯದ ವೈವಿಧ್ಯಮಯ ಸಂಸ್ಕೃತಿ ಆಗಿದೆ. ದಲಿತರೇ ಕಟ್ಟಿಕೊಂಡ ಅವರ ಸಂಸ್ಕೃತಿ ಅದು ನೈಜವಾಗಿದೆ. ಯಾಕೆಂದರೆ ಮೊಗಳ್ಳಿ ಗಣೇಶರವರು ಬಳಸುವ ತಣಿಗೆ, ಹೇಲುಗುಂಡಿ, ಒಂದು ಹಳೇ ಚಡ್ಡಿ ಮೊದಲಾದ ಪ್ರತಿಮೆಗಳು ಅವರ ಸಂಸ್ಕೃತಿಯನ್ನು ಬಿಂಬಿಸುವಂತಹುದು. ಮೊಗಳ್ಳಿ ಗಣೇಶರವರು ದಲಿತರಾಗಿದ್ದು ದಲಿತರ ಬದುಕನ್ನು ಹಸಿಹಸಿಯಾಗಿ ಎಳೆ ಎಳೆಯಾಗಿ ಚಿತ್ರಿಸುತ್ತಾರೆ.

---

[೮] ರಹಮತ್ ತರೀಕೆರೆ – ಸಾಂಸ್ಕೃತಿಕ ಅಧ್ಯಯನ – ಕರ್ನಾಟಕ ಸಾಹಿತ್ಯ ಅಕಾಡೆಮಿ – ೨೦೦೮, ಪು.ಸಂ-೫

[೯] ಅದೇ, ಪು.ಸಂ-೬

[೧೦] ಅದೇ, ಪು.ಸಂ-೭

'ಭೂಮಿ' ಕಥೆಯಲ್ಲಿನ 'ದೊಂಬ'ನ ಪಾತ್ರ ಯಶಸ್ವಿ ಪಾತ್ರವಾಗಿದ್ದು, ಆತ ಸಮಾಜದಲ್ಲಿ ಎದುರಿಸುವ ಸಂಕಷ್ಟವನ್ನು ಬಿಂಬಿಸುತ್ತದೆ. ಆ ದೊಂಬ ದೊಂಬರಾಟ ಆಡುತ್ತಾ ಸುಂದರ ಬದುಕನ್ನೇ ನಿರ್ಮಿಸುತ್ತಿದ್ದಾನೆ. ಆ ಊರಿನ ಪಾಳೆಯಗಾರ ಅದನ್ನು ನಾಶಗೊಳಿಸುತ್ತಾನೆ. ಪಾಳೆಯಗಾರನಿಗೆ ತನ್ನ ಅಸ್ತಿತ್ವದ ಪ್ರಶ್ನೆ ಬಂದಾಗ ತಳಸಮುದಾಯದ ಬದುಕನ್ನು ಛಿದ್ರಗೊಳಿಸುತ್ತಾನೆ. ದಲಿತರ ಸಂಸ್ಕೃತಿಯನ್ನು ಭಗ್ನಗೊಳಿಸುವಲ್ಲಿ ಪಾಳೆಯಗಾರ ಮುಂದಾಗಿ ಹೆಸರುವಾಸಿಯಾದ ದೊಂಬನ ಬದುಕನ್ನೇ ನಾಶಗೊಳಿಸುತ್ತಾನೆ. 'ದೊಂಬರಾಟ' ದಲಿತರ ಬದುಕಿನ ಕಲೆ. ಅವರ ಸಂಸ್ಕೃತಿಯ ಭಾಗವಾಗಿತ್ತು. ಆದರೆ ಸಮುದಾಯದಲ್ಲಿನ ನಾಯಕ ಅದನ್ನು ನಿರಾಕರಿಸುತ್ತಾನೆ. ಇಲ್ಲಿ ದೊಂಬರಾಟದ ಮೂಲಕ ದೊಂಬ ದೈವತ್ವವನ್ನು ಕಾಣುತ್ತಾನೆ. ಇಲ್ಲಿ ದಲಿತರ ಆಚರಣೆ, ಕುಣಿತ ಪ್ರತಿಭೆ, ಅವನತಿ ಹೊಂದುತ್ತದೆ. ಒಟ್ಟಾರೆ ಇಲ್ಲಿ ಅವರ ಸಂಸ್ಕೃತಿ ನಾಶವಾಗುವುದನ್ನು ಕಾಣಬಹುದಾಗಿದೆ.

'ಒಂದು ಹಳೆಚಡ್ಡಿ' ಕಥೆಯಲ್ಲಿ ಬರುವ 'ನಾಗರಾಜ' ಆಧುನಿಕ ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದರಿಂದ, ತನ್ನ ಬದುಕು ಹೀಗಿರಬೇಕೆಂದು ಬಯಸುತ್ತಾನೆ. ಇಲ್ಲಿ ಕಥೆಗಾರರ ವಿಶೇಷತೆಯನ್ನು ಗುರುತಿಸಬಹುದು. ಯಾಕೆಂದರೆ ಒಬ್ಬ ಅಲಕ್ಷಿತ ಸಮುದಾಯದ ವ್ಯಕ್ತಿ ತಾನೂ ಸಮಾಜದಲ್ಲಿ ಒಳ್ಳೆ ವ್ಯಕ್ತಿಯಾಗುವುದರ ಜೊತೆಗೆ ಆಧುನಿಕ ಪ್ರತಿನಿಧಿಯಾಗಿ ಬದುಕಬೇಕೆಂಬ ಆತನ ಕನಸು ಸರ್ವೆಸಾಮಾನ್ಯವಾದುದು. ತಾನೂ ಮೇಲ್‌ಸ್ತರದ ವ್ಯಕ್ತಿಯಂತಾಗಬೇಕು ಎಂಬ ಆತನ ಯೋಚನೆ ಸತ್ಯವಾದುದು. ಇಲ್ಲಿ ಮೊಗಳ್ಳಿಗಣೇಶರವರ ಕಥೆಯ ಭಿನ್ನತೆ, ಕಥೆಯ ಅನನ್ಯತೆಯನ್ನು ಗುರುತಿಸಬಹುದು. ಮೇಲ್‌ಜಾತಿ–ಕೆಳಜಾತಿ ಎಂಬ ಬೇದಭಾವದಿಂದ ಹೊರಬರುವ ಲೇಖಕರ ಧೋರಣೆಯನ್ನು ಪ್ರಧಾನವಾಗಿ ಈ ಕಥೆಯಲ್ಲಿ ಗುರುತಿಸಬಹುದು. ಈ ಕಥೆಯಲ್ಲಿ ಅವರ ಬದುಕಿನ ರೀತಿಯಲ್ಲಿ ಯಾವುದೇ ಬದಲಾಗದಿರುವ ಅಂಶ ಚಿತ್ರಿತವಾಗುವುದರೊಂದಿಗೆ ಹೊಸ ಬದುಕಿನ ಕನಸು ಕನಸಾಗೆ ಉಳಿಯುವ ಅಂಶ ನೋಡಬಹುದು.

'ಬುಗುರಿ' ಕಥೆ – ದಲಿತರ ಬದುಕಿನ ಬವಣೆ, ಸಿಟ್ಟು, ಆಕ್ರೋಶ, ಅಸಹಾಯತೆ ಶೋಷಣೆಯನ್ನು ಒಟ್ಟೊಟ್ಟಿಗೆ ಚಿತ್ರಿಸುವ ಕಥೆ, ದಲಿತರ ಬದುಕನ್ನು ಸ್ವತಃ ದಲಿತರೆ ಕಟ್ಟಿಕೊಂಡ ರೀತಿ ಒಂದಾದರೆ, ವ್ಯವಸ್ಥೆ / ಸಮುದಾಯ ಕಟ್ಟಿಕೊಟ್ಟ ಶೋಷಣೆ ಬದುಕನ್ನೂ ಕಾಣಬಹುದು. ಇವೆರಡರ ಮಧ್ಯೆ ದಲಿತರ ಬದುಕು ಇದೆ. ದಲಿತರ ಬದುಕು ಕಥೆಯ ಸಂಕೇತದಲ್ಲಿ ಹೇಲುಗುಂಡಿಯೇ ಆಗಿದೆ. ಅದರಿಂದ ದಲಿತರಿಗೆ ಬಿಡುಗಡೆ ಇಲ್ಲ. ಚೆಲುವನ ಆಡುವ ಬುಗುರಿ ಹೇಲುಗುಂಡಿಯಲ್ಲಿ ಬಿದ್ದು ಹೋದದ್ದರ ಚಿಂತನೆಯ ಪ್ರಜ್ಞೆಯಲ್ಲಿ ಕತೆ ಆರಂಭವಾಗುತ್ತದೆ. ಅಲ್ಲಿಂದ ಅದನ್ನು ಬಿಡಿಸಿಕೊಳ್ಳಬೇಕೆಂಬ ಚಡಪಡಿಕೆ ಇದೆ. ಬುಗುರಿ ಚಲುವನ ಲವಲವಿಕೆಯ, ಚಲನೆಯ ಸಂಕೇತವಾಗಿ ಗುರುತಿಸಬೇಕಾಗಿದೆ. ಚಲುವನ ಅಪ್ಪ ಚಿಕ್ಕಣ್ಣ ತನ್ನ ಬದುಕನ್ನು

ಬಡಸ್ತರದಿಂದ ಪ್ರತಿಭಟಿಸುವುದರಿಂದ ವಿರೋಧಿಯಾಗುತ್ತಾನೆ. ಹೀಗೆ ದಲಿತರ ಬದುಕಿನ ವೈಖರಿಯನ್ನು ಕಾಣಬಹುದು.

ದಲಿತರು, ದಲಿತೇತರರು ದಲಿತ ಪ್ರಜ್ಞೆಯಿಂದ ಅಭಿವ್ಯಕ್ತಿ ಪಡಿಸಿದ ಸಾಹಿತ್ಯವೇ ದಲಿತ ಸಾಹಿತ್ಯ. ಈ ದಲಿತ ಚಳುವಳಿ ಕೇವಲ ಸಾಹಿತ್ಯಿಕ ಚಳುವಳಿಯಾಗಿ ಮಾತ್ರ ಬೆಳೆಯದೆ ಸಾಮಾಜಿಕ, ರಾಜಕೀಯ, ಆರ್ಥಿಕ ಚಿಂತನೆಗಳೊಂದಿಗೆ ಮಹತ್ವದ ಹೆಜ್ಜೆಯನ್ನಿಟ್ಟಿತು. ಮೊದಲ ತಲೆಮಾರಿನ ಅಕ್ಷರಸ್ಥ ದಲಿತರಿಂದ ಆರಂಭವಾದ ಈ ಚಳುವಳಿ ಸಾಹಿತ್ಯಿಕವಾಗಿ ಮೊದಲು ತೆಗೆದುಕೊಡಿದ್ದು ಕಾವ್ಯದಿಂದಲೇ ಆಗಿದೆ. ಡಾ.ಸಿದ್ಧಲಿಂಗಯ್ಯ, ಡಾ.ಅರವಿಂದ ಮಾಲಗತ್ತಿ, ಡಾ.ಮ.ನ.ಜ, ಬಿ.ಸಿದ್ಧಯ್ಯ, ಮುಳ್ಳೂರು ನಾಗರಾಜು, ಮುನಿ ವೆಂಕಟಪ್ಪ, ಗಂಗರಾಮ ಚಂಡಾಳ, ಎಲ್.ಹನುಮಂತಯ್ಯ, ನಾರಾಯಣಸ್ವಾಮಿ ಮೊದಲಾದವರು.

ದೇವನೂರವರ ಕಥೆಗಳಲ್ಲಿ ನೇರ ಪ್ರತಿಭಟನೆ ಇಲ್ಲದಿದ್ದರೂ ದಲಿತ ಸಂಸ್ಕೃತಿ ವಿವಿಧ ಮುಖಗಳ ಅನಾವರಣಗೊಳ್ಳುವುದರೊಂದಿಗೆ ಕಥೆಯೊಳಗೆ ಪ್ರತಿಭಟನೆ ಕಾಣುತ್ತದೆ. ದೇವನೂರರ ಕಾದಂಬರಿ : ಕುವೆಂಪುರವರ ಕಾದಂಬರಿ, ಬೈರಪ್ಪನವರ ಕಾದಂಬರಿಗಳಲ್ಲಿ ತಳಸ್ತರದ ಸಂಸ್ಕೃತಿ ನೋಡಿದರೆ ಮೊಗಳ್ಳಿಗಣೇಶರವರ ಕಥೆಗಳಲ್ಲಿ ತಳಸ್ತರದ ಸಂಸ್ಕೃತಿಯ ಜೊತೆ ಆಧುನಿಕತೆಗೆ ತೆರೆದುಕೊಳ್ಳುವ ಹಲವು ಪಾತ್ರಗಳು ಅಲ್ಲದೆ ಯಶಸ್ಸನ್ನು ಹೊಂದುವ ಪಾತ್ರಗಳ ಚಿತ್ರಣವನ್ನು ನೋಡಬಹುದು.

ಮೊಗಳ್ಳಿಗಣೇಶರವರ 'ಭೂಮಿ' ಕಥೆ ದಲಿತರ ಸಂಸ್ಕೃತಿಯನ್ನು ಬಿಂಬಿಸುವ ಕಥೆ. ದೊಂಬರಾಟದ ಮೂಲಕ ದೊಂಬ ತನ್ನ ವ್ಯಕ್ತಿತ್ವವನ್ನು ರೂಪಿಸುವುದು. ದೊಂಬರಾಟದಲ್ಲೇ ತನ್ನ ಕನಸನ್ನು ಕಾಣುವುದು. ಆ ಮೂಲಕ ಆತ್ಮವಿಶ್ವಾಸ ಆತನಲ್ಲಿ ಹೆಚ್ಚಾಗುವುದು. ತಾನು ಮಾಡುವ ವೃತ್ತಿಯಲ್ಲಿ ದೈವತ್ವವನ್ನು ಕಾಣುವುದು ಬಸವಣ್ಣನವರ 'ಕಾಯಕವೇ ಕೈಲಾಸ' ಮಾತನ್ನು ದಲಿತರು ತಮ್ಮ ಜೀವನದಲ್ಲಿ ಅಳವಡಿಸುವುದು, ಇದನ್ನು ನೋಡಬಹುದು. ಒಬ್ಬ ಸಾಮಾನ್ಯ ಮನುಷ್ಯನ ಅಸಮಾನ್ಯತೆ ಪ್ರಕಟವಾಗುವುದು– ಇವೆಲ್ಲ ತಳಸ್ತರದ ಸಂಸ್ಕೃತಿಯನ್ನು ಬಿಂಬಿಸುವ ಅಂಶವಾಗಿದೆ. ಕಥೆಗಾರರು ತಳಸಮುದಾಯದ ಸಂಸ್ಕೃತಿಗೆ ಗೌರವ ಕೊಟ್ಟು ಅದನ್ನು ಬಿಂಬಿಸುತ್ತಾರೆ.

ಮೊಗಳ್ಳಿಗಣೇಶರವರ 'ಮಿಂಚುಳ' ಕಥೆಯಲ್ಲಿ ಬರುವ 'ಮಿಣುಕ' ಪದಕಾರ ಆತನು ಮತ್ತು ೫ ಜನ ಹುಡುಗರು ಸೊಲ್ಲಿಕ್ಕುತ್ತಾ ಹಾಡುವುದು. ಕೆಂಪವ್ವವನ್ನು ಪೂಜಿಸುವ ರೀತಿ ಅಲ್ಲಿ ದೈವತ್ವವವನ್ನು ಕಾಣುವುದು ಆ ಊರಿನ ಸಂಸ್ಕೃತಿಯನ್ನು ಬಿಂಬಿಸುವುದಾಗಿದೆ. ಮಲೆಮಾದಪ್ಪನ ಹಾಡು ಹಾಡುವುದು, ಒಟ್ಟು ಆ ಊರಿನ ಜನರ ಸಂಸ್ಕೃತಿಯನ್ನು ನೋಡಬಹುದು. ಅವರು ಸಾಹಿತ್ಯದ ಮೇಲೆ ತೋರಿಸುವ ಒಲವು ಮೆಚ್ಚುವಂತದ್ದೇ ಆಗಿದೆ. ಹಾಡಿಗೆ ಪ್ರತಿಫಲವಾಗಿ ಸಿಗುವ

ಬಹುಮಾನ ಅವರನ್ನು ಇನ್ನಷ್ಟು ಸಂಭ್ರಮಕ್ಕೆ ಒಳಪಡಿಸುತ್ತದೆ. ಇಲ್ಲಿ ಪುರಾಣದ ಭಾಗವಾಗಿ ಕೆಂಪವ್ವ ಚಿತ್ರಿತವಾಗಿದ್ದಾಳೆ.

ಮೊಗಳ್ಳಿಗಣೇಶರವರ 'ಭತ್ತ' ಕಥೆಯಲ್ಲಿ ಭತ್ತ ದಲಿತರ ಹಸಿವನ್ನು ಇಂಗಿಸುವ ಮಾಯೆಯಾಗಿ ಬರುವುದು, ಮಾಯಮ್ಮ ಭತ್ತ ಬೇಯಿಸುವಿಕೆ ಅದು ನಮ್ಮ ಸಂಪತ್ತು ಎನ್ನುವುದು ಇವೆಲ್ಲ ದಲಿತರ ಸಂಸ್ಕೃತಿಯ ಭಾಗವೂ ಹೌದು, ಆದರೆ ಆ ಭತ್ತ ದಲಿತರ ಪಾಲಿಗೆ ಸಿಗದ ಚಿತ್ರಣ ಆ ಕಥೆಯಲ್ಲಿ ವ್ಯಕ್ತವಾಗುತ್ತದೆ.

ಆ ದೊಂಬರಾಟ ನಾಶದ ಮೂಲಕ ಸಂಸ್ಕೃತಿನಾಶವಾಗುವುದು. ಆ ಮೂಲಕ ಸಾಮಾಜಿಕ ಅಸ್ಮಿತೆ ಕಳೆದುಕೊಳ್ಳುವುದು ಅಂದರೆ ಸಾಂಸ್ಕೃತಿಕ ಚಹರೆಗಳನ್ನು ಕೂಡಾ ಕಳೆದುಕೊಳ್ಳುವುದು. ದೊಂಬರಾಟವು ದಲಿತರ ಆಚರಣೆಯು ಆಗಿ ಕಂಡು ಬಂದಿದೆ. ಇದು ಅವರ ದರ್ಶನವೂ, ನಂಬಿಕೆಯೂ ಹೌದು. ಆ ಮೂಲಕ ಸಮಾಜಕ್ಕೆ ತನ್ನ ಪ್ರತಿಭೆ ಪ್ರದರ್ಶಿಸುವುದು. ಜೀವನ ನಡೆಸುವುದು ವ್ಯಕ್ತವಾಗುತ್ತದೆ.

ಮೊಗಳ್ಳಿಗಣೇಶರವರ 'ಮಿಂಚುಳ' ಕಥೆಯಲ್ಲಿ ಕೆಂಪವ್ವ ಕೆರೆಗೆ ಹಾರವಾದ ರೀತಿ ಅವಳಿಂದ ಇಡೀ ಊರು ಬದುಕಿ ಉಳಿಯುತ್ತದೆ. ಇಲ್ಲಿ ಕೆಂಪವ್ವನನ್ನು ಊರ ಜನ ದೇವತೆಯಾಗಿ ಪೂಜಿಸುತ್ತಾರೆ. ಇಲ್ಲಿ ಪುರಾಣಕ್ಕೆ ಪ್ರತೀಕವಾದ ಅಂಶವನ್ನು ಗುರುತಿಸಬಹುದು.

ಮೊಗಳ್ಳಿಗಣೇಶರವರ 'ತಣಿಗೆ', 'ಚಡ್ಡಿ', 'ಹೇಲುಗುಂಡಿ' ಮೊದಲಾದ ಕಥೆಗಳಲ್ಲಿ ದಲಿತರ ಸಂಸ್ಕೃತಿಯ ವಿವರಗಳನ್ನು ಕಥೆಗಾರರು ವಿವರಿಸಿದ್ದಾರೆ. ಕಥೆಗಾರರು 'ತೋಪು' ಕಥೆಯಲ್ಲಿ ಕಾಲದೊಂದಿಗೆ ಮೆಲುಕುಹಾಕುತ್ತಾ ಹಳೆಯ ನೆನಪುಗಳ, ನಂಬಿಕೆಗಳ, ಆಚರಣೆಗಳ, ಆಶಯಗಳನ್ನು ಉಳಿಸಿಕೊಳ್ಳುವ ಹಂಬಲವಾಗಿದೆ. ಅವುಗಳನ್ನು ದಲಿತರು ವಾಸ್ತವದಲ್ಲಿ ಅಳವಡಿಸಿಕೊಳ್ಳಬೇಕೆಂಬ ತುಡಿತವಿದೆ. ಹಳೇಕಾಲದ ಜೀವನ ಪ್ರೀತಿ ಕಥೆಗೆ ಮುಖ್ಯವಾಗಿದೆ. ಅಜ್ಜಿ ಹೇಳುವ ಬಿಲ್ಪತ್ರೆ ಮರದ ಕಥೆ, ತಾತ ಹೇಳುತ್ತಿದ್ದ 'ಜೀವನ್‌ಗೌಡ್' ಬಗ್ಗೆ ಅಂದರೆ ನಾವು ಇವತ್ತು ಹೇಳುತ್ತಿರುವ ಸ್ಮಶಾನಕ್ಕೆ ಪೂರ್ವಿಕರು ಅದರ ಬಗ್ಗೆ ಸಂಬಂಧ ಇಟ್ಟುಕೊಂಡಿರುವ ಸಂಗತಿಯನ್ನು ಹೇಳುತ್ತಾರೆ. ದಲಿತರ ಜನಪರ ಕಥೆಗಳ ಆಶಯಗಳನ್ನು ದಲಿತರ ವಾಸ್ತವ ಬದುಕಿನ ಕಥೆಗಳಲ್ಲಿ ಅಳವಡಿಸಿಕೊಳ್ಳುವಂತಹ ಸಂಸ್ಕೃತಿಯನ್ನು ಮೊಗಳ್ಳಿಯವರು ಕಥೆಯಲ್ಲಿ ಬಳಸುತ್ತಾರೆ.

ಮೊಗಳ್ಳಿಗಣೇಶರವರ 'ಭೂಮಿ' ಕಥೆಯಲ್ಲಿ ದೊಂಬ ಭೂಮಿಗಾಗಿ ಪರಿತಪಿಸಿ ಕೊನೆಗೆ ಸಾವನ್ನಪ್ಪುತ್ತಾನೆ. ಶಿವರಾಮಕಾರಂತರ 'ಚೋಮನದುಡಿ' ಕಾದಂಬರಿಯಲ್ಲೂ ಚೋಮನ ಕನಸು ಕನಸಾಗಿ ಉಳಿಯುತ್ತದೆ. 'ಭೂಮಿ' ಕಥೆಯಲ್ಲಿ ದೊಂಬನಿಗೂ 'ಚೋಮ'ನಿಗೂ ತುಂಬಾ

ವ್ಯತ್ಯಾಸವಿದೆ. ತಳಸಮುದಾಯದ ಸಂಸ್ಕೃತಿಯು ಎರಡೂ ಕೃತಿಗಳಲ್ಲಿ ಸಮಾನಾಂತರವಾಗಿ ಕಂಡುಬರುತ್ತದೆ.

'ಮೊಗಳ್ಳಿಗಣೇಶ'ರವರ 'ಹಬ್ಬ' ಕಥೆಯಲ್ಲಿ ಮಾರಿಗುಡಿಯ ಚಿತ್ರಣ. ಅಲ್ಲಿಯ ಉತ್ಸವ, ಜಾತ್ರೆ ಚಿತ್ರಣ ಕಥೆಗಾರರ ಅತ್ತೆಯೇ ಮಾರಮ್ಮನಂತೆ ಕೆಂಡದ ಹಾದಿಯಲ್ಲಿ ನುಗ್ಗಿ ತಾನೇ ಬೆಂಕಿಯ ದೇವತೆಯಂತೆ ಕಾಣಿಸುವುದು ಕೊನೆಗೆ ಅತ್ತೆ ಮಾಯವಾಗುವುದು. ದೊಡ್ಡ ದೇಹದ ಗೌಡವರು ಕೆಂಡಗಲ ರಾಶಿಯಲ್ಲಿ ಮುಳುಗಿ ಹೋಗುವುದು, ಇಲ್ಲಿ ಹೆಣ್ಣು ತನ್ನನ್ನು ಹಬ್ಬ ಆಚರಣೆಯಲ್ಲಿ ತೊಡಗಿಸುವ ಅಂಶ ವ್ಯಕ್ತವಾಗುತ್ತದೆ. ಊರಿನ ಜನರ ಉತ್ಸಾಹ, ದೇವಿ ಕೃಪೆಗೆ ಅವರು ಮನಸ್ಪೂರ್ತಿಯಾಗಿ ಪಾಲ್ಗೊಳ್ಳುವಿಕೆ ಇದು ಸಮುದಾಯದ ಸಂಸ್ಕೃತಿಯನ್ನು ಬಿಂಬಿಸುತ್ತದೆ.

ಮೊಗಳ್ಳಿಗಣೇಶರವರ 'ಪಟೇಲ' ಕಥೆ ದಲಿತ ವಿದ್ಯಾವಂತ ಶಾಲಾಹೆಡ್ ಮಾಸ್ಟರ್ ಕರ್ತವ್ಯ ಪ್ರಜ್ಞೆಯಲ್ಲಿ ದಲಿತ ಹುಡುಗರ ಕ್ರೀಡಾ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಿ, ಸಂಘಟಿಸುವ ಕಲೆಗಾರಿಕೆ ಚೆನ್ನಾಗಿದೆ. ಆಂಧ್ರ ಪ್ರದೇಶದಿಂದ ಬಂದಿರುವ ಹರಿಜನಕೇರಿಯ ಶಾಲಾ ಹೆಡ್ ಮಾಸ್ಟರು ಇಲ್ಲಿಯ ಶಾಲೆಯ ಹರಿಜನ ಹುಡುಗರ ಕಬಡ್ಡಿ ಕ್ರೀಡಾ ಪ್ರತಿಭೆ ಕುರಿತು ಪ್ರೋತ್ಸಾಹಿಸಿದರು. ಅವರನ್ನು ಬ್ರಾಹ್ಮಣ ಜಾತಿಯವರೆಂದು ಸುಳ್ಳು ಹೇಳಿಕೊಂಡು ಅದನ್ನ ಸಾಧಿಸಿಕೊಳ್ಳಲು ರೂಪಿಸಿಕೊಂಡಿರುವ ತಂತ್ರವನ್ನು ನೋಡಬಹುದು. ಇಲ್ಲಿ ದಲಿತರ ಪ್ರತಿಭೆ ವ್ಯಕ್ತವಾಗುತ್ತದೆ.

ದೇವನೂರವರ 'ಅಮಾಸ' ಕಥೆಯ ಮಾರಿಗುಡಿ ಚಿತ್ರಣ, ಹುಲಿವೇಷ ಕುಣಿತ ಇವು ಆಚರಣೆಗಳನ್ನ ಮತ್ತು ಸಂಸ್ಕೃತಿಯನ್ನು ಬಿಂಬಿಸುವುದರೊಂದಿಗೆ ಅಮಾಸನ ಪ್ರತಿಭೆಯನ್ನು ನಮಗೆ ದರ್ಶಿಸುತ್ತದೆ. ಇಂತಹುದೇ ಕಥನ ಮೊಗಳ್ಳಿ ಕಥೆಯ ದೊಂಬರಾಟವೂ ಆಗಿದೆ. ಅಮಾಸ ಸಾಂಸ್ಕೃತಿಕವಾಗಿ ದಲಿತರ ಬದುಕಿನ ಸಾಧ್ಯತೆಗಳನ್ನು ತನ್ನ ಒಡಲಲ್ಲಿ ಇಟ್ಟು ಕೊಂಡಿರುವ ಕಥೆ. ಅಮಾಸ ಮತ್ತು ಕುರಿಯಯ್ಯ ದಲಿತರ ಸಾಂಸ್ಕೃತಿಕ ಪ್ರತೀಕವಾಗಿದೆ. ಊರಿನ ಮಠ ಮತ್ತು ಮಾರಿಗುಡಿಗಳು ಊರಿನ ಸಾಂಸ್ಕೃತಿಕ ಕೇಂದ್ರಗಳು. ಮಾರಿಹಬ್ಬ ಸಡಗರ, ಸಂಭ್ರಮ, ಮಾರಿಕುಣಿತ, ಹುಲಿವೇಷ, ಮರಿಗಳ ಬಲಿ ದಲಿತರ ಬದುಕು ಹಳೆಯ ನೆನಪುಗಳ ಹೊಸಬಯಕೆ– ಇವೆಲ್ಲಾ ದಲಿತರ ಸಾಂಸ್ಕೃತಿಕ ವಿವರಗಳಾಗಿ ವ್ಯಕ್ತವಾಗಿದೆ. ಇದನ್ನು ಮೊಗಳ್ಳಿ ಕಥೆಗಳಲ್ಲಿ ಸ್ವಲ್ಪ ಭಿನ್ನವಾಗಿ ಕಾಣಬಹುದು. ಕಥೆಗಾರರ ಕಥೆಯಲ್ಲಿ ಪ್ರತಿಭೆ ಇದೆ. ಕುಣಿತ ಇದೆ. ಪಾತ್ರಗಳಲ್ಲಿ ಆತ್ಮವಿಶ್ವಾಸವಿದೆ. ಹೀಗೆ ಮೊಗಳ್ಳಿಗಣೇಶರವರ ಕಥೆ ಸಂಸ್ಕೃತಿ ದೃಷ್ಟಿಯಿಂದ ನೋಡಿದಾಗ ಭಿನ್ನವಾಗಿರುವುದು ವ್ಯಕ್ತವಾಗುತ್ತದೆ. ದಲಿತರ ಬದುಕು, ಬದುಕಿನ ಕ್ರಮಗಳು, ಆಚರಣೆಗಳು ವಿಧಿವಿಧಾನಗಳು, ಹಬ್ಬ ಹರಿದಿನಗಳು ಮೊಗಳ್ಳಿಕಥೆಗಳಲ್ಲಿ ವ್ಯಕ್ತವಾಗಿವೆ.

ದೇವನೂರವರ 'ಒಡಲಾಳ' ಕಾದಂಬರಿ ನೋಡಿದರೆ ಸಾಕವ್ವನ ಬದುಕಿನ ರೀತಿ ಇಡೀ ದಲಿತ ಬದುಕಿನ ಸಂಸ್ಕೃತಿಯ ಪ್ರತೀಕವಾದಂತಿದೆ. ಸ್ವಾಭಿಮಾನದಿಂದ ಬದುಕುವ ಅಕೆಯ ಬದುಕುವ ಕ್ರಮ ವರ್ಣನಾತೀತವಾದುದು ಆಗಿದೆ.

ಒಟ್ಟಿನಲ್ಲಿ ಮೊಗಳ್ಳಿಗಣೇಶರವರ ಕಥಾಸಾಹಿತ್ಯದಲ್ಲಿ ಕಂಡುಬರುವ ಸಾಹಿತ್ಯ ಮತ್ತು ಸಂಸ್ಕೃತಿ ಹೇಗೆ ಮೂಡಿಬಂದಿದೆ ಎಂಬುದನ್ನು ಈ ಅಧ್ಯಯನ ಗುರುತಿಸಲು ಪ್ರಯತ್ನಿಸಿದೆ, ಅವುಗಳನ್ನು ಹೀಗೆ ಪಟ್ಟಿ ಮಾಡಬಹುದಾಗಿದೆ.

೧. ಮೊಗಳ್ಳಿಗಣೇಶರವರ ಕಥೆಗಳಲ್ಲಿ ಸಂಸ್ಕೃತಿಯ ಸರ್ವನಾಶ ಹೇಗೆ ಆಗುತ್ತದೆ ಎಂಬುದನ್ನು ಗುರುತಿಸುವುದು. ಆ ಮೂಲಕ ಸಾಮಾಜಿಕ ಅಸ್ಮಿತೆ ಕಳೆದುಕೊಳ್ಳುವುದು ಅಂದರೆ ಸಾಂಸ್ಕೃತಿಕ ಚಹರೆಗಳನ್ನು ಕೂಡಾ ಕಳೆದುಕೊಳ್ಳುವುದು.

೨. ದೊಂಬರಾಟ ಎಂಬ ಆಚರಣೆ ಮೂಲಕ ತನ್ನ ವ್ಯಕ್ತಿತ್ವ ರೂಪಿಸಿ, ಸಮಾಜದಲ್ಲಿ ಅದನ್ನು ದರ್ಶಿಸುವುದು ಆ ಮೂಲಕ ತನ್ನ ಭಗವಂತನನ್ನು ಅಂದರೆ ಭೂಮಿ ತಾಯಿಯನ್ನು ಕಾಣುವುದು ವ್ಯಕ್ತವಾಗುತ್ತದೆ.

೩. ಹಾಡನ್ನು ಹಾಡುತ್ತಾ ಕೆಂಪವ್ವನನ್ನು ಪೂಜಿಸುವುದು. ಇದರಿಂದ ಭಗವಂತ ಒಲಿಯುತ್ತಾನೆ ಎಂಬ ನಂಬಿಕೆ. ಇಲ್ಲಿ ಪುರಾಣದ ಅಂಶವು ವ್ಯಕ್ತವಾಗಿದೆ.

೪. ಸಂಸ್ಕೃತಿಯ ಭಾಗವಾದ ಆಚರಣೆ ಗಾದೆ, ನಂಬಿಕೆ, ಪುರಾಣ, ಹಾಡು ಬದುಕಿನ ಬಗ್ಗೆ ಧೋರಣೆ – ಇವೆಲ್ಲವನ್ನು ಮೊಗಳ್ಳಿಗಣೇಶರವರ ಬೇರೆ ಬೇರೆ ಕಥೆಗಳಲ್ಲಿ ಗುರುತಿಸುವುದು.

೫. ದಲಿತರ ಬದುಕು, ಜೀವನ ಕ್ರಮಗಳನ್ನು ವಿಧಿ ವಿಧಾನಗಳನ್ನು ಬಿಂಬಿಸುವುದಾಗಿದೆ.

ಉಪಸಂಹಾರ

ಈ ಅಧ್ಯಯನದ ಒಟ್ಟು ಗ್ರಹಿಕೆಗಳನ್ನು ಹೀಗೆ ಸಂಗ್ರಹಿಸಬಹುದು.

ಮೊದಲನೇ ಅಧ್ಯಾಯದಲ್ಲಿ ಮೊಗಳ್ಳಿಗಣೇಶರವರ ಕಥಾಸಾಹಿತ್ಯ– ಒಂದು ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪದ ಮುಖ್ಯ ಗ್ರಹಿಕೆಗಳು.

ನಾನು ಎಂ.ಫಿಲ್ ಸಂಶೋಧನಾ ಪ್ರಬಂಧದಲ್ಲಿ ಮೊಗಳ್ಳಿಗಣೇಶರ ಕಥಾಸಾಹಿತ್ಯ ಒಂದು ಅಧ್ಯಯನ – ಈ ವಿಷಯದ ಆಯ್ಕೆ ಹಿಂದಿರುವ ಉದ್ದೇಶವನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ. ಈ ವಿಷಯದ ವ್ಯಾಪ್ತಿ ಮತ್ತು ಅಧ್ಯಯನದ ಮಹತ್ವವನ್ನು ಈ ಅಧ್ಯಾಯದಲ್ಲಿ ನೋಡಬಹುದು. ಅಲ್ಲದೆ ನನ್ನ ಈ ಸಂಶೋಧನೆಯನ್ನು 'ರಾಚನಿಕೋತ್ತರ ಅಧ್ಯಯನ'ದ ವಿಧಾನದ ಮೂಲಕ ಕೈಗೆತ್ತಿಕೊಳ್ಳಲಾಗಿದೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಮೊಗಳ್ಳಿಗಣೇಶರವರ ಕಥೆಗಳಲ್ಲಿ ಕಂಡುಬರುವ ದಲಿತತ್ವ ಸ್ವರೂಪದ ಮುಖ್ಯ ಗ್ರಹಿಕೆಗಳು :

ದಲಿತರನ್ನು ಸದಾ ಶೋಷಣೆಗೆ ಒಳಪಡಿಸುವುದು ಮತ್ತು ಶಿಕ್ಷಿತ ಲೋಕದಿಂದ ವಂಚಿತರಾದ ಅವರು ಶಿಕ್ಷಣ ಪಡೆಯಬಾರದು ಎನ್ನುವ ಮೇಲ್‌ಸ್ತರದ ಚಿಂತನೆ. ಇಲ್ಲಿ ದಲಿತರ ಅವಮಾನ, ನೋವು, ಅಸಹಾಯಕತೆಯನ್ನು ಗುರುತಿಸುವುದು ಒಂದು ಕಡೆಯಾದರೆ ಸಾಮಾಜಿಕ ಅಸ್ಮಿತೆಯನ್ನು ಕಳೆದುಕೊಳ್ಳುವುದರ ಜೊತೆಗೆ ದಲಿತರ ಕನಸು, ಪ್ರತಿಭೆ ಛಿದ್ರವಾಗುವಿಕೆ ಹಾಗೂ ನಿರಂತರವಾಗಿ ನೋವಿಗೊಳಗಾಗುವ ಅವರ ಬದುಕು ಕಂಡುಬರುತ್ತದೆ. ಮುಖ್ಯವಾಗಿ ಒಬ್ಬ ದಲಿತ ತನ್ನ ಸೃಜನಾತ್ಮಕವಾದ ಬೆಳವಣಿಗೆಗೆ ಕಾರಣಕರ್ತನಾಗಬಾರದು ಎನ್ನುವ ಅಂಶ ಸಮಾಜದಲ್ಲಿ ಮೇಲ್‌ಸ್ತರದ ಜನರ ಯೋಚನೆಯಾಗಿರುವುದು ವ್ಯಕ್ತವಾಗುತ್ತದೆ. ಅಲ್ಲದೆ ಮೊಗಳ್ಳಿಗಣೇಶರವರು ತಮ್ಮ ಕಥೆಗಳಲ್ಲಿ ತಳಸಮುದಾಯದವರ ಕನಸು ನನಸಾಗದಿರುವ ಬೇರೆ ಬೇರೆ ನಿದರ್ಶನಗಳನ್ನು ಚಿತ್ರಿಸಿರುವುದನ್ನು ಕಾಣಬಹುದು. ಪ್ರತಿಭಾವಂತ ದಲಿತರು ಅವಕಾಶಗಳಿಂದ ವಂಚಿತರಾಗುವ ಅನೇಕ ವಿವರಗಳು, ಮೇಲ್ಜಾತಿಯವರಿಗೆ ಅಡಿಯಾಳಾಗಿ ಬದುಕುವ ಚಿತ್ರಣ ವ್ಯಕ್ತವಾಗುತ್ತದೆ. ಮುಖ್ಯವಾಹಿನಿಯಲ್ಲಿ ಕಾಣಿಸದ ದಲಿತರ ಬದುಕಿನ ಕ್ರಮಗಳು, ಅನುಭವಗಳು ಮುಖ್ಯವಾಹಿನಿಯ ಬದುಕಿನ ಕ್ರಮಕ್ಕಿಂತ ಅನುಭವಕ್ಕಿಂತ ಭಿನ್ನವಾಗಿರುವಂತವು. ಮೊಗಳ್ಳಿ ಗಣೇಶರವರ ಕಥಾಸಾಹಿತ್ಯ ಈ ರೀತಿಯ ದಲಿತರ ಬದುಕಿನ ಸಾಮಾಜಿಕ ವಿವರಗಳ ಅನೇಕ ಆಯಾಮಗಳನ್ನು ಕಟ್ಟಿಕೊಡುತ್ತದೆ. ಇದು ಕನ್ನಡ ಸಾಂಸ್ಕೃತಿಕ ವಲಯಕ್ಕೆ ಒಂದು ಹೊಸ ಅನುಭವವನ್ನು ಪರಿಚಯಿಸುತ್ತದೆ. ಈ ಅನುಭವದ ವಿಭಿನ್ನ ಆಯಾಮಗಳು ವ್ಯಕ್ತವಾಗುತ್ತದೆ.

ಮೂರನೇ ಅಧ್ಯಾಯದಲ್ಲಿ ಮೊಗಳ್ಳಿಗಣೇಶರವರ ಕಥಾ ಸಾಹಿತ್ಯದಲ್ಲಿ ಕಂಡುಬರುವ ಅಧಿಕಾರ ಮತ್ತು ಯಾಜಮಾನಿಕೆಯ ರಚನೆಗಳ ಕುರಿತ ಗ್ರಹಿಕೆಗಳು :

ಮೇಲ್ಜಾತಿಯವರು, ಕೆಳಜಾತಿಯವರ ಮೇಲೆ ಚಲಾಯಿಸುವ ಅಧಿಕಾರವು ವ್ಯಕ್ತವಾಗುತ್ತದೆ. ಊರಿನ ಗೌಡ ತನ್ನ ಅಧಿಕಾರದಿಂದ ತಳಸಮುದಾಯದವರನ್ನು ಹತೋಟಿಯಲ್ಲಿಡುವ ವಿವಿಧ ಮುಖಗಳನ್ನು ಗುರುತಿಸಬಹುದು. ಜಮೀನ್ದಾರಿ ವ್ಯವಸ್ಥೆಯಲ್ಲಿ ತೋರಿಸುವ ಅಧಿಕಾರ ಅಂದರೆ ತಳಸಮುದಾಯ ಮೇಲೆ ನಡೆಸುವ ದೌರ್ಜನ್ಯ ತಾನು ಕೈಗೊಂಡ ತೀರ್ಮಾನವೇ ಅಂತಿಮ ಎಂದು ಭಾವಿಸುವುದು. ಸರ್ಕಾರಿ ಹುದ್ದೆಯಲ್ಲಿ ಸರ್ಕಾರಿ ಪ್ರತಿನಿಧಿಗಳಾಗಿ ಸಾರ್ವಜನಿಕ ಹಿತಾಸಕ್ತಿ ಕಾಪಾಡುವ ಉನ್ನತ ಇಲಾಖಾ ಅಧಿಕಾರಿಗಳೇ ತಮ್ಮ ಸ್ವಾರ್ಥದಿಂದ ಮೆರೆಯುವ ಪ್ರಕ್ರಿಯೆ ಕಂಡುಬರುತ್ತದೆ. ಸೃಜನಾತ್ಮಕವಾಗಿ ಬೆಳೆದು ತನ್ನನ್ನು ಗುರುತಿಸಿಕೊಂಡ ತಳಸ್ತರದ ವ್ಯಕ್ತಿಗಳ ಮೇಲೆ ಯಜಮಾನ ತನ್ನ ಹತೋಟಿಯನ್ನಿಟ್ಟುಕೊಂಡು, ತನ್ನ ಸೀಮೆ ಎಂದು ಅಧಿಕಾರ ಚಲಾಯಿಸುವುದರೊಂದಿಗೆ ತಳಸ್ತರದ ಪ್ರತಿಭೆಯನ್ನು ಕಸಿದುಕೊಳ್ಳುವ ಮೂಲಕ ತನ್ನ ಯಾಜಮಾನಿಕೆಯನ್ನು ಪ್ರದರ್ಶಿಸುವುದು ಕಂಡುಬರುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಗಂಡನಾದವನು ಆತನ ಹೆಂಡತಿ ಮಕ್ಕಳ ಮೇಲೆ ಪ್ರದರ್ಶಿಸುವ ಯಾಜಮಾನಿಕೆಯ ಸ್ವರೂಪಗಳು ಚಿತ್ರಿತವಾಗಿದ್ದನ್ನು ಗುರುತಿಸಬಹುದು. ಅಲ್ಲದೆ ಅವಿಭಕ್ತ ಕುಟುಂಬದ ಹಲವು ದುಃಖಗಳನ್ನು ಮತ್ತು ಲೈಂಗಿಕ ಶೋಷಣೆ ಇದನ್ನು ಗುರುತಿಸಬಹುದು.

ನಾಲ್ಕನೇ ಅಧ್ಯಾಯದಲ್ಲಿ ಮೊಗಳ್ಳಿ ಗಣೇಶರವರ ಕಥಾಸಾಹಿತ್ಯದಲ್ಲಿ ಮಹಿಳೆಯರ ಚಿತ್ರಣದ ಬಗೆಗಿನ ಮುಖ್ಯ ಗ್ರಹಿಕೆಗಳು.

ತಳಸಮುದಾಯದ ಹೆಣ್ಣಿನ ಮನಸ್ಥಿತಿ, ಮನಸ್ಸಿನ ದುಃಖ, ಹತಾಶೆ, ನೋವು, ತಾಕಳಾಟ ಮತ್ತು ಮನೆಯ ಒಡೆಯನಿಂದ ಶಿಕ್ಷೆಗೆ ಗುರಿಯಾಗುವಿಕೆ ಹೆಣ್ಣನ್ನು ಪುರುಷ ಪ್ರಧಾನ ಸಮಾಜ ನೋಡುವ ರೀತಿ. ಇದು ಒಂದು ಹಳೆ ಚಡ್ಡಿ, ಬಾಡೂಟ, ಅತ್ತೆ ಕತೆಗಳಲ್ಲಿ ವ್ಯಕ್ತವಾಗುತ್ತದೆ. ಪ್ರಸ್ತುತ ಸಮಾಜದಲ್ಲಿ ಹೆಣ್ಣು ತನ್ನತನವನ್ನು ಪ್ರದರ್ಶಿಸುವಿಕೆ, ತನ್ನ ಜಾಣ್ಮೆ, ಕೌಶಲ್ಯ, ಸಹನೆ, ತಾಳ್ಮೆನೇ ಮುಖ್ಯ ಮೌಲ್ಯವಾಗಿತ್ತು. ತಾನೂ ಸಾಧಿಸಬಲ್ಲಳು ಎಂಬುದನ್ನು 'ಭೂಮಿ' ಕಥೆ ಪ್ರತಿಪಾದಿಸುವುದಾಗಿದೆ. ಮೊಗಳ್ಳಿಗಣೇಶರವರ 'ನಾದದದನಿ' ಕಥೆಯಲ್ಲಿ ಹೊಸ ಸಾಮಾಜಿಕ ವ್ಯವಸ್ಥೆಯು ಗಂಡನಿಗೆ ನೆರವು ನೀಡಲು ಹೆಣ್ಣು ಕೂಡಾ ದುಡಿಯುವಿಕೆ ಆದರೆ ಸಾಮಾಜಿಕ ಚೌಕಟ್ಟಿನ ನೆಲೆಯಲ್ಲೇ ಮುಂದುವರೆಯುವುದು. ಕೊನೆಗೂ ಆಕೆಯ ಅಸ್ಮಿತೆಯಲ್ಲಿರುವುದು ಸಾಂಸಾರಿಕ ಜೀವನ ತೂಗಿಸುವ ಜಾಣ್ಮೆಯಲ್ಲಿ ಮಾತ್ರ ಎಂದು ವ್ಯಕ್ತವಾಗುತ್ತದೆ. ಹೆಣ್ಣಿನಿಂದಲೇ ಹೆಣ್ಣಿಗೆ ಶೋಷಣೆ, ವ್ಯಕ್ತಿ ಸ್ವಾತಂತ್ರ್ಯದ ಕೊರತೆ ಎದ್ದು ಕಾಣುವಿಕೆ ಇದರಿಂದಾಗಿ ಆಕೆ ಮಾನಸಿಕವಾಗಿ ಅಶಾಂತಳಾಗುವಿಕೆ ಈ ಅಂಶವು ಬಾಡೂಟ ಕಥೆಯಲ್ಲಿ ವ್ಯಕ್ತವಾಗುತ್ತದೆ.

ಮುಖ್ಯವಾಹಿನಿಯಲ್ಲಿ ಕಾಣಿಸದ ತಳಸ್ತರದ ಹೆಣ್ಣುಮಕ್ಕಳಿಗೆ ಮೇಲ್‌ಜಾತಿ ವರ್ಗದವರಿಂದ ವಿವಿಧ ಮುಖಗಳ ಶೋಷಣೆಯಿಂದ ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುವಲ್ಲಿ ವಿಫಲನಾಗುವುದು. ಮುಖ್ಯವಾಹಿನಿಯ ಕಥಾಸಾಹಿತ್ಯದಲ್ಲಿ ಚಿತ್ರಿತವಾಗುವ ಮಹಿಳೆಯರಿಗಿಂತ ಈ ಕಥನದಲ್ಲಿ ಚಿತ್ರಿತವಾಗಿರುವ ಮಹಿಳೆಯರ ಲೋಕ ಹೇಗೆ ಭಿನ್ನ ಎಂದು ಗುರುತಿಸಬಹುದು. ಮೇಲುಸ್ತರದ ಸಮುದಾಯದವರಿಂದ ಮೇಲುಜಾತಿ ಹೆಣ್ಣು ಮಗಳು ಶೋಷಣೆಗೊಳಗಾಗಿದ್ದರಿಂದ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಅಂಶ ವ್ಯಕ್ತವಾಗುತ್ತದೆ.

ಐದನೇ ಅಧ್ಯಾಯದಲ್ಲಿ ಮೊಗಳ್ಳಿಗಣೇಶರವರ ಕಥಾ ಸಾಹಿತ್ಯದಲ್ಲಿ ಕಂಡುಬರುವ ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳ ಮುಖ್ಯ ಗ್ರಹಿಕೆಗಳು.

ಮೊಗಳ್ಳಿಗಣೇಶರವರ ಕಥೆಗಳಲ್ಲಿ ಸಂಸ್ಕೃತಿಯ ಸರ್ವನಾಶ ಹೇಗೆ ಆಗುತ್ತದೆ ಎಂಬುದನ್ನು ಗುರುತಿಸುವುದು. ಆ ಮೂಲಕ ಸಾಮಾಜಿಕ ಅಸ್ಮಿತೆ ಕಳೆದುಕೊಳ್ಳುವುದು. ಡೊಂಬರಾಟ ಎಂಬ ಆಚರಣೆ ಮೂಲಕ ತನ್ನ ವ್ಯಕ್ತಿತ್ವ ರೂಪಿಸಿ, ಸಮಾಜದಲ್ಲಿ ಅದನ್ನು ದರ್ಶಿಸುವುದು ಆ ಮೂಲಕ ತನ್ನ ಭಗವಂತನನ್ನು ಅಂದರೆ ಭೂಮಿ ತಾಯಿಯನ್ನು ಕಾಣುವುದು, ದೈವತ್ವವನ್ನು ಕಾಣುವುದು ವ್ಯಕ್ತವಾಗುತ್ತದೆ. ಹಾಡನ್ನು ಹಾಡುತ್ತಾ ಕೆಂಪವ್ವನನ್ನು ಪೂಜಿಸುವುದು. ಇದರಿಂದ ಭಗವಂತ ಒಲಿಯುತ್ತಾನೆ ಎಂಬ ನಂಬಿಕೆ. ಇಲ್ಲಿ ಪುರಾಣದ ಅಂಶವೂ ವ್ಯಕ್ತವಾಗುತ್ತದೆ. ಸಂಸ್ಕೃತಿಯ ಭಾಗವಾದ ಆಚರಣೆ, ಗಾದೆ, ನಂಬಿಕೆ, ಪುರಾಣ, ಹಾಡು ಬದುಕಿನ ಬಗ್ಗೆ ಧೋರಣೆ ಇವೆಲ್ಲವನ್ನು ಮೊಗಳ್ಳಿಗಣೇಶರವರ ಬೇರೆ ಬೇರೆ ಕಥೆಗಳಲ್ಲಿ ಗುರುತಿಸುವುದು. ಒಟ್ಟು ದಲಿತರ ಬದುಕು ಜೀವನ ಕ್ರಮಗಳನ್ನು ಬದುಕಿನ ವಿಧಿ ವಿಧಾನಗಳನ್ನು ಬಿಂಬಿಸುವುದರೊಂದಿಗೆ ಸಾಹಿತ್ಯ ಮತ್ತು ಸಂಸ್ಕೃತಿಯ ನೆಲೆಗಳನ್ನು ಬಿಂಬಿಸುವುದಾಗಿದೆ.

ಪರಾಮರ್ಶನ ಗ್ರಂಥಗಳು

೧. ಡಾ.ಅರವಿಂದ ಮಾಲಗತ್ತಿ – ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ, ಬಹುಜನಮಾಧ್ಯಮ ಕೇಂದ್ರ ಪ್ರಕಾಶನ, ೨೦೦೮

೨. ಡಾ.ಅರವಿಂದ ಮಾಲಗತ್ತಿ – ದಲಿತಮಾರ್ಗ (ಸಂ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೩. ಡಾ.ಅರವಿಂದ ಮಾಲಗತ್ತಿ – ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩

೪. ಕನ್ನಡ ವಿಶ್ವಕೋಶ – ಸಂಪುಟ ಒಂದು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೬೯

೫. ಕುವೆಂಪು – ನನ್ನ ದೇವರು ಮತ್ತು ಇತರ ಕತೆಗಳು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೬. ಡಾ.ಗುರುಲಿಂಗ ಕಾಪಸೆ – ಶಿವರಾಮಕಾರಂತ, ಸಾಂಸ್ಕೃತಿಕ ಅನುಸಂಧಾನ (ಸಂ) ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೩

೭. ಡಾ.ಗಾಯತ್ರಿ ನಾವಡ – ಭಾರತೀಯ ಸ್ತ್ರೀವಾದ – ಒಂದು ಸಂಕಥನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೮. ಡಾ.ಮ.ನ.ಜವರಯ್ಯ – ದಲಿತ ಬಂಡಾಯ ಸಾಹಿತ್ಯ ಸಿದ್ಧಾಂತದ ನೆಲೆಗಳು, ಬಹುಜನ ಮಾಧ್ಯಮ ಕೇಂದ್ರ (ರಿ), ಮೈಸೂರು, ೨೦೦೮

೯. ನಾಗಭೂಷಣಸ್ವಾಮಿ.ಓ.ಎಲ್ – ವಿಮರ್ಶೆಯ ಪರಿಭಾಷೆ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೪

೧೦. ಡಿ.ಆರ್.ನಾಗರಾಜ್ – ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಬೆಂಗಳೂರು, ೨೦೦೬

೧೧. ಕಿ.ರಂ.ನಾಗರಾಜ – ಜಾನಪದ ಮತ್ತು ಆಧುನಿಕ ಸಾಹಿತ್ಯ – ಶತಮಾನದ ಸಾಹಿತ್ಯ ವಿಮರ್ಶೆ (ಸಂ), ಹೆಚ್.ಎಸ್.ರಾಘವೇಂದ್ರರಾವ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

೧೨. ಡಾ.ಕೆ.ವಿ.ನಾರಾಯಣ – ಬೇರು, ಕಾಂಡ, ಚಿಗುರು, ವಿವೇಕ ಪ್ರಕಾಶನ, ೧೯೯೭

೧೩. ಫಣಿರಾಜ್.ಕೆ – ಆಂಟೋನಿ ಗ್ರಾಂಷಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೩

೧೪. ಡಾ.ಕೆ.ಬೈರಪ್ಪ – ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ಧಿ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೬

೧೫. ಡಾ.ಮೊಗಳ್ಳಿ ಗಣೇಶ – ದಲಿತ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೧೬. ಡಾ.ಮೊಗಳ್ಳಿ ಗಣೇಶ – ಅನಾದಿ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೮

೧೭. ಡಾ.ಮೊಗಳ್ಳಿ ಗಣೇಶ – ಆದಿಮ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೮

೧೮. ಮೊಗಳ್ಳಿ ಗಣೇಶ – ಮೊಗಳ್ಳಿ ಕಥೆಗಳು, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೮

೧೯. ಡಾ.ಮೊಗಳ್ಳಿ ಗಣೇಶ್ – ತಕರಾರು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೦೮

೨೦. ಡಾ.ಮೊಗಳ್ಳಿ ಗಣೇಶ್ – ಅವ್ಯಕ್ತ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೨೧. ಡಾ.ಮೊಗಳ್ಳಿ ಗಣೇಶ – ದಲಿತ ಚಿಂತನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೨೨. ಡಾ.ರಾಮಚಂದ್ರನ್.ಸಿ.ಎನ್ – ವಸಾಹತೋತ್ತರ ಚಿಂತನೆ ಅಂಕಿತ ಪ್ರಕಾಶನ, ಬೆಂಗಳೂರು, ೨೦೧೩

೨೩. ಡಾ.ರಹಮತ್ ತರೀಕೆರೆ – ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮

೨೪. ಡಾ.ವೆಂಕಟೇಶಮೂರ್ತಿ – ಕನ್ನಡ ನಾಟಕ ಯಾಜಮಾನ್ಯ ಸಂಕಥನ, ಅಧ್ಯಯನ ಮಂಡಲ, ಬೆಂಗಳೂರು, ೨೦೦೯

೨೫. ಡಾ.ಸುಧಾ ಸೀತಾರಾಮನ್ – ಮಹಿಳಾ ಅಧ್ಯಯನ : ಸಮಾಜ ಶಾಸ್ತ್ರೀಯ ದೃಷ್ಟಿಕೋನ, ಸ್ತ್ರೀಲೇಖ ಪ್ರಕಾಶನ, ಬೆಂಗಳೂರು, ೨೦೦೬

೨೬. ಡಾ.ಸಿ.ಬಿ.ಹೊನ್ನಯ್ಯ – ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ, ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, ೨೦೦೪

೨೭. ಡಾ.ಸಿ.ಬಿ.ಹೊನ್ನಯ್ಯ – ಬಡಬಾಗ್ನಿ, ೧೯೯೯ – ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ (ಸಂ), ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, ೨೦೦೪

೨೮. ಡಾ.ಸಿ.ಬಿ.ಹೊನ್ನಯ್ಯ – ದಲಿತ ಸಾಹಿತ್ಯ ಚಳುವಳಿ, ೧೯೮೨ – ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ (ಸಂ), ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, ೨೦೦೪

೨೯. ಡಾ.ಸಿ.ಬಿ.ಹೊನ್ನಯ್ಯ – ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ೧೯೯೧ – ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ (ಸಂ), ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, ೨೦೦೪

೩೦. ಡಾ.ಸಿ.ಬಿ.ಹೊನ್ನಯ್ಯ – ಸಾಹಿತ್ಯ ಮತ್ತು ಸಮುದಾಯ, ೧೯೯೪ – ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ (ಸಂ), ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, ೨೦೦೪

31. The Bernard Cohn Omnibus – Author Bernard Cohn, Oxford University Press, 2004

32. Andrew Milner and Jeft Browit - Contemporary Cultural Theory, Rawat Publications, New Delhi, 2003